14.	ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 2014	20.02.2014	ರಾಜ್ಯಪಾಲರು
15.	ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2013	03.01.2014	ರಾಜ್ಯಪಾಲರು
16.	ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕ, 2014	20.02.2014	ರಾಜ್ಯಪಾಲರು
17.	ಕೈಗಾರಿಕಾ ನಿಯೋಜನೆ ಸ್ಥಾಯಿ (ಆದೇಶಗಳು) (ಕರ್ನಾಟಕ ತಿದ್ದುಪಡಿ) ವಿಧೇಯಕ, 2005	17.02.2014	ರಾಷ್ಟ್ರಪತಿ
18.	ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2013	23.12.2013	ರಾಜ್ಯಪಾಲರು
19.	ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 2014	28.02.2014	ರಾಜ್ಯಪಾಲರು
20.	ಕರ್ನಾಟಕ ಮೌಲವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, 2014	28.02.2014	ರಾಜ್ಯಪಾಲರು

ಅಧ್ಯಕ್ಷರು : ಮಂಡಿಸಲಾಯಿತು, ಮಾನ್ಯ ಜಗದೀಶ್ ಶೆಟ್ಟರ್‌ರವರೆ ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್ : (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ನಾನು ಬೆಳಿಗ್ಗೆ ನಿಲುವಳಿ ಸೂಚನೆಯನ್ನು ಕಬ್ಬು ಬೆಳೆಗಾರರ ಸಮಸ್ಯೆ ಬಗ್ಗೆ ಚರ್ಚಿಸಲು ತಮಗೆ ಸಲ್ಲಿಸಿದ್ದೆ. ತಾವು ಅದನ್ನು ರೂಲ್ 69ಕ್ಕೆ ಕನ್‌ವರ್ಟ್ ಮಾಡಿದ್ದೀರಿ.

ಶ್ರೀ ವೈ.ಎಸ್. ವಿ. ದತ್ತಾ: ಮಾನ್ಯ ಅಧ್ಯಕ್ಷರೆ, ನಾವು ಕೊಟ್ಟಿರುವ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಿ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ಮೊದಲು ಕಬ್ಬು ಬೆಳೆಗಾರರ ಸಮಸ್ಯೆ ಬಗ್ಗೆ ಚರ್ಚೆಯನ್ನು ತೆಗೆದುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್ : ನಾಳೆ ಕೂಡ ಮಾತನಾಡಲು ಬೇಕಾದಷ್ಟು ಅವಕಾಶಗಳಿರುವುದರಿಂದ ಈಗ ಮೊದಲು ಕಬ್ಬು ಬೆಳೆಗಾರರ ವಿಚಾರವನ್ನು ತೆಗೆದುಕೊಳ್ಳಬೇಕು.

ಶ್ರೀ ವೈ.ಎಸ್. ವಿ. ದತ್ತಾ: ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದು ಇತ್ತು.

ಅಧ್ಯಕ್ಷರು: ನಾಳೆ ತೆಗೆದುಕೊಳ್ಳೋಣ. ಇವತ್ತು ಸಮಯಾವಕಾಶ ಸಾಕಾಗುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಬೇಕಾದ ನಮ್ಮದೊಂದು ವಿಚಾರವಿದೆ. ಅದನ್ನೂ ಕೂಡ ನಾಳೆ ಹಾಕಿಕೊಳ್ಳಬೇಕು.

ಅಧ್ಯಕ್ಷರು : ನಾಳೆ ಹಾಕಿಕೊಳ್ಳೋಣ.

6. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವ ವಿಚಾರದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ: ಕಬ್ಬು ಬೆಳೆಗಾರರ ಸಮಸ್ಯೆ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇವತ್ತೇನು ಒಂದು ನಿಲುವಳಿ ಸೂಚನೆಯನ್ನು ಕಬ್ಬು ಬೆಳೆಗಾರರ ಸಮಸ್ಯೆ ಬಗ್ಗೆ ಕೊಟ್ಟಿದ್ದೇನೋ ಅದನ್ನು ತಾವು ರೂಲ್ 69 ಕ್ಕೆ ಕನ್ವರ್ಟ್ ಮಾಡಿಕೊಂಡು ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಅದಕ್ಕಾಗಿ ಮೊಟ್ಟಮೊದಲು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಪ್ರಮುಖವಾದ ವಿಚಾರ ಇಲ್ಲಿ ಚರ್ಚೆಯಾಗುವಂಥ ಸಂದರ್ಭದಲ್ಲಿ ಇದಕ್ಕೆ ಸಂಬಂಧಪಟ್ಟ ಮಾನ್ಯ ಮುಖ್ಯಮಂತ್ರಿಯವರೂ ಇರಬೇಕಾಗಿತ್ತು. ನಾವು 30 ದಿವಸಗಳ ಕಾಲ ಅಧಿವೇಶನ ನಡೆಸುತ್ತಿದ್ದೇವೆ. ಒಳ್ಳೆಯದು. ಬಹಳಷ್ಟು ವಿಷಯಗಳು ಚರ್ಚೆಯಾಗಬೇಕಾಗಿದೆ. ಶಾಸಕರೂ participate ಮಾಡಬೇಕು. ಆದರೆ, ಮೊದಲನೇ ದಿವಸವೇ ಸಚಿವರು, ಅಧಿಕಾರಿಗಳು ಇಲ್ಲದ ಪರಿಸ್ಥಿತಿ ಇದೆ. ಈ ರೀತಿಯ ಪರಿಸ್ಥಿತಿ ಆಗಬಾರದು. ಈಗಲೇ ಎಚ್ಚರ ತೆಗೆದುಕೊಳ್ಳಿ. ಎಂದು ನಾನು ಹೇಳುತ್ತಿದ್ದೇನೆ. ಮೊದಲನೆ ದಿವಸವೇ ಹೀಗಾಗಬಾರದು. ಇಲ್ಲಿ ಮಂತ್ರಿಗಳು, ಅಧಿಕಾರಿಗಳು ಇರುವಂಥದ್ದು ಆಗಬೇಕೆಂದು ನಾನು ಹೇಳುತ್ತಿದ್ದೇನೆ. Atleast ಮುಂದೆ ಯಾರಾದರೂ ಒಬ್ಬರು ಇರಿ.

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು) : ಜಗದೀಶ್ ಶೆಟ್ಟರ್ ರವರೆ, ನಾವೂ ಮಂತ್ರಿಗಳೇ, ಮಂತ್ರಿಗಳಿಲ್ಲ. ಎಂದು ಹೇಳಿದರೆ ಹೇಗೆ? ನಮ್ಮನ್ನೇನೂ ನೀವು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲವೇ? ಈಗ Concerned Minister ಇದ್ದಾರೆ ಮತ್ತು ಸಂಬಂಧಪಟ್ಟವರೆಲ್ಲರೂ ಇದ್ದಾರೆ.

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಹಿಂದೆ ಯಾವಾಗಲೂ ಸಕ್ಕರೆ ಸಚಿವರು ಇರುತ್ತಿದ್ದರು. ಆದರೆ, ಮಾನ್ಯ ಮುಖ್ಯಮಂತ್ರಿಯವರು ನೇರವಾಗಿ ಆವತ್ತು ಕಬ್ಬಿನ ದರವನ್ನು ನಿಗದಿ ಮಾಡುವ ವಿಚಾರದಲ್ಲಿ ತೀರ್ಮಾನವನ್ನು ತೆಗೆದುಕೊಳ್ಳಲಿಲ್ಲವಾದ್ದರಿಂದ ಆವತ್ತು ರೈತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಆದುದರಿಂದ ದಯಮಾಡಿ ಮುಖ್ಯಮಂತ್ರಿಗಳನ್ನು ಕರೆಸಿ. ಏಕೆಂದರೆ ಹಿಂದೆ ಈ ಖಾತೆಯನ್ನು ಹೊಂದಿದ್ದ ಸಚಿವರು ಈಗ ಇಲ್ಲಿ ಇಲ್ಲ. ಅವರ ಖಾತೆಯನ್ನು ಈಗ ಈ ಸಚಿವರು ಆ ಖಾತೆಯ ಇನ್‌ಚಾರ್ಜ್ ತೆಗೆದುಕೊಂಡಿದ್ದಾರೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಾನ್ಯ ಅಧ್ಯಕ್ಷರೆ,

ಶ್ರೀ ಗೋವಿಂದ ಎಂ. ಕಾರಜೋಳ : ಮಹದೇವ ಪ್ರಸಾದ್, ನೀವು ಹಾಗೆ ಮಾತನಾಡಲಿಕ್ಕೆ ಬರುವುದಿಲ್ಲ ನಿಮ್ಮ ಸೀಟ್‌ಗೆ ಹೋಗಿ ಅಲ್ಲಿಂದ ಮಾತನಾಡಬೇಕು. ಮಾನ್ಯ ಅಧ್ಯಕ್ಷರೆ, ಅವರು ಅವರ ಸೀಟ್‌ಗೆ ಹೋಗಿ ಮಾತನಾಡಬೇಕೆಂದು ನೀವು ಹೇಳಬೇಕು. ಅಲ್ಲಿ ನಿಂತು ನೀವು ಮಾತನಾಡಲಿಕ್ಕೆ ಬರುವುದಿಲ್ಲ. ದಯವಿಟ್ಟು ನಿಮ್ಮ ಸೀಟ್‌ಗೆ ಹೋಗಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ನನ್ನದು ಒಂದೇ ಒಂದು ವಿನಂತಿ. ಕಬ್ಬು ಬೆಳೆಗಾರರ ಇಷ್ಟು ಮಹತ್ವದ ವಿಷಯ ಚರ್ಚೆ ಮಾಡಲಿಕ್ಕೆ ನಮ್ಮ ನಾಯಕರು ಇದ್ದಾರೆ. ಈ ಸದನಕ್ಕೆ ಮೊದಲನೇ ದಿವಸ ಇಷ್ಟು ಪ್ರಮುಖ ವಿಷಯ ಬರುತ್ತದೆಂದು ಗೊತ್ತಾದಾಗ ಇರಬೇಕೋ, ಬೇಡವೋ? ಇಲ್ಲಿ ಅಧಿಕಾರಿಗಳಿಲ್ಲ. ಇಲ್ಲಿ ಸಂಬಂಧಪಟ್ಟ ಸಚಿವರಿಲ್ಲ. ತಾವು ಒಪ್ಪುತ್ತೇನೆಂದು ಹೇಳುತ್ತೀರಿ, ಆದರೆ, ಅವರು ಇಲ್ಲವಲ್ಲ?

ಅಧ್ಯಕ್ಷರು : ನಾನು ಒಪ್ಪುತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನೀವು ನಾವು ಹೇಳುವುದನ್ನು ಒಪ್ಪುತ್ತೇನೆ. ಎಂದು ಹೇಳುತ್ತೀರಿ. ಆದರೆ ಅವರು ಈಗ ಇಲ್ಲವಲ್ಲ?

ಅಧ್ಯಕ್ಷರು : ಹಾಗಲ್ಲ. ಈ ಪೀಠದಿಂದ ಒಪ್ಪುತ್ತೇನೆ. ಎಂದು ಹೇಳಿದ ಮೇಲೆ ಅದು ಒಂದು direction ಆಗುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಇಲ್ಲಿ ಈಗ Cane ಅಧಿಕಾರಿಗಳಿಲ್ಲ. Cane Commissioner ಇಲ್ಲ. sugar Director ಇಲ್ಲ.

ಡಾ: ಎಚ್.ಸಿ. ಮಹದೇವಪ್ಪ : C&I Secretary ಇದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ : Commissioner ಗೇನಾಗಿದೆ ?

ಅಧ್ಯಕ್ಷರು : ಬರುತ್ತಾರೆ. ಆಯಿತು, ಶುರು ಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : Front Bench ನಲ್ಲಿ ಒಬ್ಬರೂ ಇಲ್ಲ.

ಅಧ್ಯಕ್ಷರು : ನಿಯಮಾವಳಿ ಪ್ರಕಾರ quorum ಇರಬೇಕು. ಪದ್ಧತಿ ಪ್ರಕಾರ ಇಲ್ಲಿ ಎಲ್ಲ ಇರಬೇಕು. ಸಂಬಂಧಪಟ್ಟಂಥ ಮಂತ್ರಿಗಳು ಇರಬೇಕು. ಇದ್ದಾರೆ. ಶುರು ಮಾಡಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರಲ್ಲಿ ನಾನೇನು ವಿನಂತಿ ಮಾಡಿಕೊಳ್ಳುತ್ತೇನೆಂದರೆ, ಬಹಳಷ್ಟು ಜನ ಮಂತ್ರಿಗಳು ಇರಬೇಕೆನ್ನುವಂಥ ಅಪೇಕ್ಷೆ ಈ

ಭಾಗದಲ್ಲಿರುವ ಜನರಿಗೆ ಇರಲು ಕಾರಣವೇನೆಂದರೆ, ಬಹಳಷ್ಟು ಸಚಿವರುಗಳದ್ದು ಕಾರ್ಖಾನೆ ಇರುವುದರಿಂದ ಈ ಸಮಸ್ಯೆ ಇದೇ ಸ್ಥಳದಲ್ಲಿ ಬಗೆಹರಿಯಬಹುದು ಎನ್ನತಕ್ಕಂಥ ಉದ್ದೇಶವಿಟ್ಟುಕೊಂಡು ಕೇಳುತ್ತಿದ್ದಾರೆಯೇ ಹೊರತು ಎಲ್ಲರೂ ಬರಬೇಕೆಂದು ಅಲ್ಲ.

ಅಧ್ಯಕ್ಷರು : ನಮಗೆ ಅದು ಸಂಬಂಧವಿಲ್ಲ. ಅದು ನಿಮಗೆ ಸಂಬಂಧ !

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಕಬ್ಬು ಬೆಳೆಗಾರರ ಸಮಸ್ಯೆ ಬಗ್ಗೆ ಕಳೆದ 6–7 ತಿಂಗಳಿನಿಂದ ಚರ್ಚೆಯಾಗುತ್ತಿದೆ. ಹಿಂದೆ ಪ್ರಕಾಶ್ ಹುಕ್ಕೇರಿಯವರು Sugar Minister ಇದ್ದರು. ಆಮೇಲೆ ಅವರು SAP meeting ಕರೆದರು. ಅಲ್ಲಿಯೂ declare ಮಾಡಿದರು. ಅಲ್ಲಿಂದ ಶುರುವಾಗಿದ್ದು ಇದುವರೆಗೂ ಈ ಬಗ್ಗೆ ಒಂದು ಅಂತ್ಯ ಕಾಣಿಸಲಿಕ್ಕೆ ನಿಮ್ಮ ಸರ್ಕಾರದಿಂದ ಆಗುತ್ತಿಲ್ಲ. ಮೊಟ್ಟಮೊದಲನೆಯದಾಗಿ ಇದು ನಿಮ್ಮ ಸರ್ಕಾರದ ಒಂದು testing time. ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಅಧಿವೇಶನ ನಡೆಯಿತು. ಅಲ್ಲಿ ಅಧಿವೇಶನ ನಡೆದಾಗಲೂ ಇದರ ಬಗ್ಗೆ ಸಾಕಷ್ಟು ಚರ್ಚೆಯಾಯಿತು. ಕಬ್ಬು ಬೆಳೆಯುವ ವಿಠಲ ಅರಭಾವಿ ಎನ್ನುವ ರೈತ ಆತ್ಮಹತ್ಯೆ ಮಾಡಿಕೊಂಡ ಆವತ್ತೂ ನಾವು ವಿಧಾನಸಭೆಯ well ನಲ್ಲಿ ಧರಣಿ ಸತ್ಯಾಗ್ರಹ ಮಾಡಿದ್ದೆವು. ಅವತ್ತು ಮಾನ್ಯ ಮುಖ್ಯಮಂತ್ರಿಯವರು, ಜಯಚಂದ್ರರವರು ಎಲ್ಲರೂ ಇದ್ದರು. ನಮಗೆಲ್ಲ ಹೇಳಿದಿರಿ, ನೋಡಿ ಈ sugar factory ಯವರು ಸರ್ಕಾರ ಏನು 2,650/– ರೂ. ನಿಗದಿ ಮಾಡಿದೆ, ಅದರಲ್ಲಿ 150 ರೂ.ಗಳನ್ನು ಸರ್ಕಾರದಿಂದ ನೀವು ಅವರಿಗೆ subsidy ಕೊಡುತ್ತೀರಿ, ಆದರೆ, ನೀವು ಅವರಿಗೆ ರೂ. 2,500/– ನಿಗದಿ ಮಾಡಿದ್ದೀರಿ. ಅದರ ಪ್ರಕಾರ ನಾವು ರೈತರಿಗೆ ಆ ದರವನ್ನು ಕೊಡಿಸುವಂಥ ಜವಾಬ್ದಾರಿ ನಮ್ಮದು, ಅಂದರೆ ಸರ್ಕಾರದ್ದು ಎಂದು ಹೇಳಿದ್ದಿರಿ. ನಾನು ಮುಖ್ಯಮಂತ್ರಿಯಾಗಿದ್ದಾಗ ಕಬ್ಬು ನಿಯಂತ್ರಣಕ್ಕೆ ಸಂಬಂಧಪಟ್ಟಂತೆ ಎಸ್.ಎ.ಪಿ. ಕಾನೂನನ್ನು ತರುವಂಥದ್ದನ್ನು ಮಾಡಿದೆ, ಆ ಕಾನೂನನ್ನು ಅನುಷ್ಠಾನ ಮಾಡುವಂಥ ಕೆಲಸ ಇವತ್ತು ಸರ್ಕಾರವನ್ನು ನಡೆಸುತ್ತಿರುವ ನಿಮಗೆ ಬಂದಿದೆ. ಆದರೆ ಆವತ್ತು ನೀವು ಹೇಳಿದಿರಿ, ಈಗ ಹೇಗಿದ್ದರೂ ಕಾನೂನನ್ನು ತೆಗೆದುಕೊಂಡು ಬಂದಿದ್ದೀರಿ, ಆ ಕಾನೂನನ್ನು ಅನುಷ್ಠಾನ ಮಾಡುವಾಂಥ ಜವಾಬ್ದಾರಿ ನಮಗಿದೆ. ಯಾರು ಯಾರು ಶುಗರ್ ಫ್ಯಾಕ್ಟರಿ ಮಾಲೀಕರುಗಳಿದ್ದಾರೆ. ಅವರುಗಳಿಗೆ ಇವತ್ತು ಸರ್ಕಾರ ಏನು ಡೈರೆಕ್ಷನ್ ಕೊಟ್ಟಿದೆ, ರೂ. 2500/– ಮತ್ತು ರೂ. 150/– ಸರ್ಕಾರ ಕೊಡುವಂಥ ಸಬ್ಸಿಡಿಯಾಗಿದೆ 2500/– ರೂ.ಗಳನ್ನು ಸರ್ಕಾರ ನಿಗದಿ ಮಾಡಿರುವುದನ್ನು ಷುಗರ್ ಫ್ಯಾಕ್ಟರಿ ಮಾಲೀಕರುಗಳು ರೈತರುಗಳಿಗೇನು ಪ್ರತಿ ಮೆಟ್ರಿಕ್ ಟನ್ ಕಬ್ಬಿಗೆ ದರವನ್ನು ಕೊಡಬೇಕೋ ಅದನ್ನು ಕೊಡಿಸುವಂಥ ಜವಾಬ್ದಾರಿ ನಮ್ಮದು ಎಂದು ಹೇಳಿದ್ದಿರಿ. ಈಗಾಗಲೇ ಕಾನೂನಿದೆ, ಅದರ ಪ್ರಕಾರ ಅನುಷ್ಠಾನ ಮಾಡುತ್ತೇವೆ. ಕ್ರಮ ತೆಗೆದುಕೊಳ್ಳುತ್ತೇವೆಯಾದ್ದರಿಂದ ನೀವು ಧರಣಿ ಸತ್ಯಾಗ್ರಹವನ್ನು ಮಾಡುವುದನ್ನು ಕೈಬಿಡಿ, ಇದನ್ನು

ಮುಂದುವರೆಸಬೇಡಿ, ನಮ್ಮ ಜವಾಬ್ದಾರಿ, ಅಲ್ಲಿ ರೈತರ ಆತ್ಮಹತ್ಯೆ ಮಾಡಿಕೊಂಡಿದ್ದ, ರೈತರುಗಳು ಹೋರಾಟ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ರೈತರುಗಳ ಭಾವನೆಗಳನ್ನು ಅರ್ಥ ಮಾಡಿಕೊಂಡು ತಕ್ಷಣವೇ ಸ್ಪಂದನೆ ಮಾಡುತ್ತೇವೆ, ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಿರಿ, ಆದರೆ ಅಲ್ಲಿಂದ ಇಲ್ಲಿಯವರೆಗೆ ಏನು ನಡೆಯಿತು ಹೇಳಿ. ಅದಾದ ಮೇಲೆ ಬೆಂಗಳೂರಿನಲ್ಲಿಯೂ ಕೂಡ ಒಂದು ಅಧಿವೇಶನ ನಡೆಯಿತು. ಬೆಳಗಾವಿಯಲ್ಲಿ ಒಂದು ಅಧಿವೇಶನವಾದ ಮೇಲೆ ಮತ್ತೊಂದು ಅಧಿವೇಶನ ಬೆಂಗಳೂರಿನಲ್ಲಾಗಿದೆ. ಈ ದರವನ್ನು ನಿಗದಿ ಮಾಡಿದವರ್ಯಾರು? ನೀವೇ ಕಬ್ಬಿನ ದರವನ್ನು ನಿಗದಿ ಮಾಡಿದವರು. ಕಳೆದ ವರ್ಷದಲ್ಲಿ ದಿನಾಂಕ: 23-11-2013 ರಲ್ಲಿ ದರವನ್ನು ನಿಗದಿ ಮಾಡಿದ್ದೀರಿ. ದರವನ್ನು ನಿಗದಿ ಮಾಡಿ ಅಧಿಸೂಚನೆಯನ್ನು ದಿನಾಂಕ 23-11-2013 ರಲ್ಲಿ ಹೊರಡಿಸಿದಿರಿ. ದಕ್ಷಿಣ ಕರ್ನಾಟಕದ ಭಾಗಕ್ಕೆ ex-gate ದರದಲ್ಲಿ ಪ್ರತಿ ಮೆಟ್ರಿಕ್ ಟನ್ ಕಬ್ಬಿಗೆ 2,500/- ರೂ.ಗಳು ಮತ್ತು ಉತ್ತರ ಕರ್ನಾಟಕ ಭಾಗಕ್ಕೆ ex-field ದರದಲ್ಲಿ ಪ್ರತಿ ಮೆಟ್ರಿಕ್ ಟನ್ ಕಬ್ಬಿಗೆ 2,500/-₹. ಗಳು ಎಂದು ನೀವೇ ದರವನ್ನು ನಿಗದಿ ಮಾಡಿದ್ದೀರಿ. ಷುಗರ್ ಫ್ಯಾಕ್ಟರಿ ಮಾಲೀಕರುಗಳ ಸಭೆ ಮಾಡಿದ್ದೀರಿ. ರೈತರುಗಳ ಜೊತೆ ಸಭೆಯನ್ನು ಮಾಡಿದ್ದೀರಿ. ಆಗ ನಾವು ಎಷ್ಟು ಮೀಟಿಂಗ್ ಮಾಡಿದ್ದೀರಿ ಎಂದು ಪ್ರಶ್ನೆ ಮಾಡಿದಾಗ, ಎಲ್ಲರ ಜೊತೆ ಮೀಟಿಂಗ್ ಮಾಡಿ ವಿಚಾರಗಳ ಬಗ್ಗೆ ಚರ್ಚೆ ಮಾಡಿ ಈಗಾಗಲೇ SAP ಕಾನೂನೇನಿದೆ ಆ ಕಾನೂನಿನ ರೀತಿಯಲ್ಲಿ ಕಬ್ಬು ಸರಬರಾಜು ಮತ್ತು ನಿಯಂತ್ರಣಕ್ಕೆ ಸಂಬಂಧಪಟ್ಟಂತೆ ಕಾಯಿದೆಯೇನಿದೆ ಅದರ ಪ್ರಕಾರ ನಾವು ಕಬ್ಬಿನ ದರವನ್ನು ನಿಗದಿ ಮಾಡಿದ್ದೇವೆ ಎನ್ನುವಂಥ ಮಾತನ್ನು ಅವತ್ತು ನೀವು ಹೇಳಿದಿರಿ. ಆ ರೀತಿ ಹೇಳಿದ ಮೇಲೆ ಅದರ implementation ಮಾಡಬೇಕಾದ ಜವಾಬ್ದಾರಿ ನಿಮ್ಮದೇ ಆಗಿದೆ. ಹಿಂದಿನ ಸರ್ಕಾರವಿದ್ದಾಗ ಏನಾಗುತ್ತಿತ್ತೆಂದರೆ ಇಂಥ ಯಾವ ಕಾನೂನೂ ಆಗ ಇರಲಿಲ್ಲ. ಈ ಷುಗರ್ ಫ್ಯಾಕ್ಟರಿ ಮಾಲೀಕರ ಮೇಲೆ ನೀವು ಏನೂ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತಿರಲಿಲ್ಲ. ಏಕೆಂದರೆ ಈಗಿರತಕ್ಕಂಥ ಕಾನೂನು ಇರಲಿಲ್ಲವಾದ್ದರಿಂದ ಇದನ್ನು implementation ಮಾಡುವುದಕ್ಕೆ ಆಗುತ್ತಿರಲಿಲ್ಲ.

ಇವತ್ತು ನಿಮಗೆ ಒಂದು ಕಾನೂನು ಶಕ್ತಿ ಬಂದಿದೆ. ಆ ಕಾನೂನನ್ನು ಶಕ್ತಿ implement ಮಾಡಿಕೊಂಡು ನೀವು ಅದನ್ನು ರೈತರಿಗೆ ವಸೂಲಿ ಮಾಡಿ ಕೊಡಬೇಕಾಗಿತ್ತು. ಆದರೆ ನೀವು ಇಲ್ಲಿಯವರೆಗೂ ಕೊಡಲಿಲ್ಲ. ನೀವು ಏಕೆ ಇಲ್ಲಿಯವರೆಗೂ ಆಕ್ಷನ್ ತೆಗೆದುಕೊಳ್ಳಲಿಲ್ಲ? ಅದಕ್ಕೆ ಒಂದು ನೆಪ sugar factory ಮಾಲೀಕರು ಕೋರ್ಟ್‌ಗೆ ಹೋದರು ಎಂದು ಹೇಳುವುದು. ಆವತ್ತೂ ಕೂಡ ಮೀಟಿಂಗ್‌ನಲ್ಲಿ ನಾನು, ನೀವು ಮತ್ತೆ ಒಂದು ನೋಟೀಸ್ ಕೊಡುತ್ತೀರಿ, ಅವರು ಮತ್ತೆ ಕೋರ್ಟಿಗೆ ಹೋಗುತ್ತಾರೆ, ಸ್ಟೇ ತೆಗೆದುಕೊಳ್ಳುತ್ತಾರೆ ಎಂದು ಹೇಳಿದ್ದೆ ಪರಿಸ್ಥಿತಿ ಎಲ್ಲಿಗೆ ಬರುತ್ತದೆ ಎಂದರೆ ಅಲ್ಲಿಯವರೆಗೂ ಇರುತ್ತದೆ. ಆಗ ಮಾನ್ಯ ಮುಖ್ಯಮಂತ್ರಿಗಳು, ಅವರು ಕೋರ್ಟಿಗೆ

ಹೋಗಿದ್ದಾರೆ, ಸ್ಟೇ ತೆಗೆದುಕೊಂಡಿದ್ದಾರೆ, interim order ಇದೆ, ಜುಲೈ ತಿಂಗಳ ಅಂತ್ಯದವರೆಗೂ stay order ಇದೆ. ಅದಕ್ಕಾಗಿ ನಾವೇನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಆದರೆ ಕೋರ್ಟ್‌ನಲ್ಲಿ ಏನಾಗಿದೆ, ಅದನ್ನು ತಮಗೆ implement ಮಾಡುವುದಕ್ಕೆ ಏಕೆ ಆಗುತ್ತಿಲ್ಲವೆಂದು ಅದರ ಬಗ್ಗೆ ಕೂಡ ತಮಗೆ ಇಲ್ಲಿ ಹೇಳುತ್ತೇನೆ. ಮೇ 22 ನೇ ತಾರೀಖಿನಂದು ಕೋರ್ಟ್‌ನಲ್ಲಿ ಒಂದು order ಆಯಿತು. ಅದೇನೆಂದರೆ, "petitioners are owners of sugar Factories represented by thier association. The Fair Remunerative Price (FRP)" ಇದು Central Government ನವರು fix ಮಾಡುವಂಥದ್ದು. The fair Remunerative Price for sugar is prescribed by he Central Government depending upon the recovery of the sugar, that is minimum which a farmer is entitled to in law. However, in each state by negotiations the amount higher than that amount was fixed and paid also. That has given rise to several disputes. The Government is trying to enforce payment of the said enhanced amount. Even in this case The demand by the farmers is for the enhanced amount what is enhanced amount payable. how that is to be determined and whether the amount now claimed is in accordance with law is a matter to be decided by this court on merits. Even before the decision on those issued it would be inappropriate for the Government to initiate action to forfeit sugar stocks and aso initiate criminal prosecution against them for violating the law" ಇದು ಕೋರ್ಟ್‌ನ observation. ಅಲ್ಲಿ ಕೇಂದ್ರ ಸರ್ಕಾರ ಏನು FRP fix ಮಾಡಿದೆ ಅದಕ್ಕಿಂತ ಹೆಚ್ಚಿಗೆ ನೀವು amount enhance ಮಾಡಿದ್ದೀರಿ. ಅದರ ಬಗ್ಗೆ ನಾವಿಲ್ಲಿ decide ಮಾಡಬೇಕು. ಎನ್ನುವಂತಹ ಮಾತನ್ನು ಹೇಳಿದರು. "Further, therefor, I deem it proper to say all such actions till end of July 2014 in the fond hope. In the meanwhile. these writ petitions will be disposed of on merits. However. it is made clear that if any of the Sugar Factories have not even paid the FRP Fixed by the Central Govenment .. This is very important. ಇಲ್ಲಿ ನಿಮ್ಮ duty ಬರುತ್ತದೆ. ಒಂದು ಕಡೆ ನೀವು ಕೋರ್ಟ್‌ನಿಂದ July 30ರವರೆಗೆ stay order ಇದೆ ಎಂದು ಹೇಳುತ್ತೀರಿ. ಆದರೆ ಇಲ್ಲಿ ಏನಿದೆ ಎಂದರೆ, "However, it is made clear if any of the Sugar Factories have not even paid the FRP fixed by the Central Government, They would not be entitled to he benefit of this Interim order

passed by this court. In such cases the Government is at liberty to proceed as sought to be done by issuing the notice." ಹಾಗಾದರೆ ಈ ಅಧಿಕಾರವನ್ನು ಏಕೆ ಉಪಯೋಗ ಮಾಡಲಿಲ್ಲ ? ಇದು ಮೇ 22 ನೇ ತಾರೀಖು ಹೇಳಿದ್ದು. ಈಗ ನಾವು ಜೂನ್ 23 ನೇ ತಾರೀಖಿನಲ್ಲಿದ್ದೇವೆ. ಮಾನ್ಯ ಮಹದೇವ ಪ್ರಸಾದ್ ರವರ statement ಎರಡು ಮೂರು ಬಾರಿ ಪತ್ರಿಕೆಯಲ್ಲಿ ಬಂತು.

ಅದೇನೆಂದರೆ ಸಕ್ಕರೆ ಕಾರ್ಖಾನೆಗಳಿಂದ ಬಾಕಿ ವಸೂಲಿ ಮತ್ತು ಹಣ ಕೊಡದಿದ್ದರೆ ಸಕ್ಕರೆ ಕಾರ್ಖಾನೆಗಳಿಗೆ ಬೀಗ, ಸಕ್ಕರೆ ಜಪ್ತಿ ಮಾಲೀಕರಿಗೆ ಎಚ್ಚರಿಕೆ ಎರಡು ಜೂನ್ 21ನೇ ತಾರೀಖು ಪತ್ರಿಕೆಯಲ್ಲಿ ಬಂತು. ಅಧಿವೇಶನ ಜೂನ್ 23 ನೇ ತಾರೀಖಿನಂದು ಇದೆ. ಏಕೆಂದರೆ ಅಧಿವೇಶನ ನಡೆಯುವಾಗ ಇದರ ಬಗ್ಗೆ ಚರ್ಚೆಗೆ ಬರುತ್ತದೆ. ಆಗ ಏನಾದರೂ ಒಂದು ಸಬೂಬು ಹೇಳಬೇಕು, ಅದಕ್ಕೆ ಪತ್ರಿಕೆಯಲ್ಲಿ ಸ್ಟೇಟ್‌ಮೆಂಟ್ ಕೊಟ್ಟಿದ್ದು. ಆದರೆ ಇಲ್ಲಿಯವರೆಗೆ ಏನು ಸಬೂಬು ಹೇಳಿದಿರಿ ಎಂದರೆ ಕೋರ್ಟ್‌ನಲ್ಲಿ ಜುಲೈ ಅಂತ್ಯದವರೆಗೂ ಸ್ಟೇ ಆರ್ಡರ್ ಇದೆ ಎಂದು, ಈಗ 21ನೇ ತಾರೀಖಿಗೆ ನಾವು ಬೀಗ ಹಾಕುತ್ತೇವೆಂದು ಹೇಳುತ್ತೀರಿ' ಈ ಎಚ್ಚರಿಕೆಯನ್ನು ಮೊದಲೇ ಏಕೆ ಕೊಡಲಿಲ್ಲ ? Central Government ನವರು fix ಮಾಡುವಂತಹ FRP ಏನಿದೆ, ಅದು ಜುಲೈ 2012 ರಲ್ಲಿ 170 per quintal ಗೆ ಫಿಕ್ಸ್ ಮಾಡಿದ್ದು and basic recovery rate ಪ್ರಕಾರ ಫಿಕ್ಸ್ ಮಾಡಿದ್ದು, *9.5* ಎಂದರೆ ಒಂದು ಟನ್‌ಗೆ ರೂ.1,700 ಆಗುತ್ತದೆ. *fixation of fair and* Remunerative price payable by sugar Mills for 2013-14,- sugar season regarding. I am directed to inform that Government of India has determined the Fair and Remunerative Price of Sugar Cane payble by Sugar Mills for 2013-14 Sugar season at ₹. 210 per quintal. Then 2.100 per ton to a basic recovery rate of 9.5 ನಮ್ಮಲ್ಲಿ ಬೇರೆ ಬೇರೆ ಇದೆ. ದಕ್ಷಿಣ ಕರ್ನಾಟಕದಲ್ಲಿ 8.5. 9.5 recovery ಇದೆ. ಉತ್ತರ ಕರ್ನಾಟಕದಲ್ಲಿ 10.5, 11.5, 12.00 ವರೆಗೂ Recovery ಇದೆ. Different ಆಗುತ್ತದೆ. Recovery ಮೇಲೆ ಎಷ್ಟು ರೇಟ್ ಫಿಕ್ಸ್ ಮಾಡಬೇಕೆನ್ನುವುದನ್ನು ಸಹ ಇಲ್ಲಿ ಹೇಳಿದ್ದಾರೆ. ಇದು ಬೇಸಿಕ್ 9.5 ಇದ್ದರೆ ನೀವು Rs. 2,100 per ton ಕೊಡಲೇಬೇಕು. It is mandatory ಇದು 2013–14ರಲ್ಲಿ ಆಗಿರುವುದು. subject to a premium of Rs..21 per quintal for every 0.1% increased in recovery above the level ಎಂದು ಮುಂದೆ ಹೇಳುತ್ತಾರೆ. ಯಾವಾಗ recovery ಜಾಸ್ತಿಯಾಗುತ್ತದೆ. ಅದರ ಪ್ರಕಾರ ಮತ್ತೆ enhance ಆಗುತ್ತದೆ. ಹೀಗಾಗಿ ಉತ್ತರ ಕರ್ನಾಟಕದಲ್ಲಿ recovery ಜಾಸ್ತಿ ಇದೆ. ಅದರ ಪ್ರಕಾರ Rs. 2,100 ಇಲ್ಲ. ಇನ್ನೂ ಜಾಸ್ತಿಯಾಗುತ್ತದೆ. ಹಾಗಾಗಿ ನೀವು ಇದರ ಮೇಲೆ calculation ಮಾಡಿ ಯಾವ್ಯಾವ factories ದು ಎಷ್ಟೆಷ್ಟು recovery ಇದೆ. ಆ recovery ಮೇಲೆ

ಎಷ್ಟು production ಮಾಡಿದರು. ಇದರ ಆಧಾರದ ಮೇಲೆ ನೀವು ನೋಟೀಸ್ ಕೊಡಬೇಕಾಗಿತ್ತಲ್ಲ ? Rs. 2,500/- ನೀವು ಫಿಕ್ಸ್ ಮಾಡಿದ್ದು Sugar factory ಮಾಲೀಕರು ಕೋರ್ಟ್‌ಗೆ ಹೋದರು. July end ವರೆಗೂ stay order ಇದೆ. High court ನವರು ಹೇಳುವುದನ್ನು implement ಮಾಡುವುದಾಗಲಿ, action ತೆಗೆದುಕೊಳ್ಳುವುದಾಗಲಿ ಏನೂ ಮಾಡಲಿಲ್ಲ. Therefore. I deem it proper to stay all such procedings However, it is made clear that if any of the sugar factories have not even paid the FRP fixed by the central Government they would not be entitled to the benefit of this interim order passed by this Court. In such cases, the Government is at liberty to proceed as sought to be done by issuing the notice' ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಹಾಗೂ ಮಾನ್ಯ ಮಹದೇವಪ್ರಸಾದ್ ರವರನ್ನು ಕೇಳುತ್ತೇನೆ. At least Central Government fix ಮಾಡಿದರಲ್ಲ. ಅದಕ್ಕೆ stay order ಇಲ್ಲ. stay order july end ವರೆಗೂ ಇದೆ. ಆ stay order ಏಕಾಯಿತು. ಅದಕ್ಕೆ ನೀವು ಏನು ಮಾಡಿದಿರಿ? ಆ ವಿಚಾರಕ್ಕೆ ನಾನು ಬರುತ್ತೇನೆ. ಆದರೆ ಈ stay order ಆದಮೇಲೆ ಹೈಕೋರ್ಟ್‌ನವರು ಇನ್ನೊಂದು option open ಇಟ್ಟಿದ್ದಾರೆ. Central Government ನವರು ಏನು ದರ ಫಿಕ್ಸ್ ಮಾಡಿದ್ದಾರೆ. ಅದರ ಪ್ರಕಾರ ನೀವು recovery ಮಾಡಬೇಕಾಗಿತ್ತು. ನೋಟೀಸ್ ಕೊಡಬೇಕಾಗಿತ್ತು. ಜಪ್ತಿ ಮಾಡಬೇಕಾಗಿತ್ತು. ಮಾನ್ಯ ಮಹದೇವ ಪ್ರಸಾದ್ ರವರು ಇನ್ನೆರಡು ದಿವಸದಲ್ಲಿ ಅಧಿವೇಶನ ಪ್ರಾರಂಭವಾಗುತ್ತದೆ ಎಂದಾಗ 21ನೇ ತಾರೀಖಿನಂದು ಎಲ್ಲಾ ಕಾರ್ಖಾನೆಗಳಲ್ಲಿ ಸಕ್ಕರೆ ಜಪ್ತಿ ಮಾಡುತ್ತೇವೆ. ಸಕ್ಕರೆ ಕಾರ್ಖಾನೆಗೆ ನಾವು ಬೀಗ ಹಾಕುತ್ತೇವೆ. ಕ್ರಿಮಿನಲ್ ಆಕ್ಷನ್ ತೆಗೆದುಕೊಳ್ಳುತ್ತೇವೆಂದು Statement ಕೊಡುತ್ತೀರಿ. ಇದನ್ನು ಯಾವಾಗ ಮಾಡುವುದು? ರೈತರು ಬೀದಿಗಿಳಿದು, strike ಮಾಡಿದ ಮೇಲೆ ಸರ್ಕಾರ ತನ್ನ ಸ್ಥಾನದಲ್ಲಿ ನಡೆಯಬೇಕು. ಎಲ್ಲಾ ರೈತರು ಬೀದಿಗೆ ಬಂದು ಧಿಕ್ಕಾರ ಘೋಷಣೆ ಮಾಡಿದ ಮೇಲೆ ಆಗ ನೀವು ಎಚ್ಚರವಾಗುತ್ತೀರಿ. ಇದು ನಿದ್ರಾವಸ್ಥೆಯಲ್ಲಿರುವ ಸರ್ಕಾರ, ಇದನ್ನು ಎಲ್ಲಾ issues ನಲ್ಲಿ ನಾನು ನೋಡಿದ್ದೇನೆ. CET ಇರಬಹುದು ಮತ್ತೊಂದು ಇರಬಹುದು ಹೀಗೆ ಮಾಡುತ್ತೀರಿ. Public agitation, strike, ಹೋರಾಟ ಸಿಕ್ಕಾಪಟ್ಟೆ ಜನ ಬೀದಿಗಿಳಿದು law and order problem ಆದಾಗ ನೀವು ಸರ್ಕಾರದವರು ಎಚ್ಚರವಾಗುತ್ತೀರಿ. ನಾವು ಯಾವಾಗಲೂ ಇದೇ ರೀತಿ ಆಗುವುದನ್ನು ನೋಡುತ್ತಿದ್ದೇನೆ. ಪ್ರಕಾಶ್ ಹುಕ್ಕೇರಿಯವರು ಸಕ್ಕರೆ ಮಂತ್ರಿಯಾಗಿದ್ದರು, ಬೆಳಗಾಂನಲ್ಲಿ ರೈತ ಆತ್ಮಹತ್ಯೆ ಮಾಡಿಕೊಂಡ. ಆಗ ಇನ್ನು ಎರಡು ಮೂರು ದಿವಸ ಅಧಿವೇಶನ ಇತ್ತು. ಆಗ 2,500 ಫಿಕ್ಸ್ ಮಾಡಿದರು. ಅಧಿವೇಶನ ಇನ್ನೊಂದು ನಾಲ್ಕೈದು ದಿವಸ ಅಥವಾ ಒಂದು ವಾರ ಇದೆ ಎನ್ನುವ ಮೊದಲು ಫಿಕ್ಸ್ ಆಯಿತು. ನೀವು ಬೇಕಾದರೆ ಫೈಲ್ ತೆಗೆಸಿ ನೋಡಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಬೆಂಗಳೂರಿನಲ್ಲಿ ಸಭೆ ಸೇರಿ date fix ಮಾಡಿದ್ದು.

ಶ್ರೀ ಜಗದೀಶ್ ಶೆಟ್ಟರ್ : ಆಯಿತು, ಇಲ್ಲಿ ಅಧಿವೇಶನ ನಡೆದಿದ್ದು, ಒಂದು ವಾರ ಇಲ್ಲಿ ಬೆಂಗಳೂರಿನಲ್ಲಿ ಇರಬೇಕಲ್ಲ. ನಾನು date ಹೇಳುತ್ತೇನೆ. ನೀವು ತೆಗೆದು ನೋಡಿ.

ಅಧ್ಯಕ್ಷರು : ಈಗ ಅದು ಮುಖ್ಯ ಅಲ್ಲ ಕೊಡುವುದು ಮುಖ್ಯ.

ಶ್ರೀ ಜಗದೀಶ್ ಶೆಟ್ಟರ್: ಈ ರೀತಿ ನಮ್ಮ ಸರ್ಕಾರಕ್ಕೆ ಚಾಟಿ ಏಟು ಕೊಟ್ಟಾಗಲೇ ಗೊತ್ತಾಗುವುದು. ಅಲ್ಲಿಯವರೆಗೆ in the usual course. natural course ಏನಾದರೂ ಆಕ್ಷನ್ ತೆಗೆದುಕೊಳ್ಳಬೇಕು. ರೈತರಿಗೆ ಅನ್ಯಾಯವಾಗುತ್ತಿದೆ ಎಂಬ ಬಗ್ಗೆ ಯೋಚಿಸಬೇಕಿತ್ತು ಏಕೆ ಮಾಡುವುದಕ್ಕೆ ಆಗುತ್ತಿಲ್ಲ? ನಿಮ್ಮಲ್ಲಿ ಮೂರ್ನಾಲ್ಕು ಜನ ಮಂತ್ರಿಗಳು ಸಕ್ಕರೆ ಕಾರ್ಖಾನೆ ಮಾಲೀಕರಾಗಿದ್ದಾರೆ. ಮಾನ್ಯ ಸತೀಶ್ ಜಾರಕಿಹೊಳಿ, ಮಾನ್ಯ ಶಾಮನೂರು ಶಿವಶಂಕರಪ್ಪನವರು, ನಿಮ್ಮ ಶಾಸಕರು ಸಕ್ಕರೆ ಕಾರ್ಖಾನೆಯ ಮಾಲೀಕರಿದ್ದಾರೆ. ಅವರು ಈ ಕಡೆ ಇರಲಿ ಅಥವಾ ಆ ಕಡೆ ಇರಲಿ, ಯಾವ ಕಡೆಯೇ ಇರಲಿ. ಮಾನ್ಯ ದೇಶಪಾಂಡೆಯವರೆ, ಕಾನೂನು ಎಲ್ಲರಿಗೂ ಒಂದೇ. ಅವರ ಮೇಲೆ ಏನು ಆಕ್ಷನ್ ತೆಗೆದುಕೊಳ್ಳುತ್ತೀರಿ. ಅದೇ ರೀತಿ ಇವರ ಮೇಲೂ ಆಕ್ಷನ್ ತೆಗೆದುಕೊಳ್ಳಿ. ಯಾರು ಬೇಡವೆನ್ನುತಾರೆ? ನಾವು ರೈತರ ಪರವಾಗಿ ಇರಬೇಕು. ಕೇಂದ್ರ ಸರ್ಕಾರ ಫಿಕ್ಸ್ ಮಾಡಿದೆ. ಅದನ್ನು implement ಮಾಡುವುದಕ್ಕೆ ಆಗಿಲ್ಲ. ಏಕೆ ಆಗಿಲ್ಲ? ನಿಮಗೆ ಆ ರೈಟ್ ಇಲ್ಲವೇ ? Even ನಾವು ಕಬ್ಬು ನಿಯಂತ್ರಣ ಕಾನೂನು ಕೂಡ ಮಾಡಿದ್ದೇವೆ. ಆ ಕಾನೂನು ಮಾಡಿದ ಮೇಲೆ ಕೂಡ ನಿಮಗೆ implement ಮಾಡುವುದಕ್ಕೆ ಆಗುವುದಿಲ್ಲವೆಂದರೆ ಹೇಗೆ?

ತಾವು ರೈತರ ಹಿತಾಸಕ್ತಿಯನ್ನು ಕಡೆಗಣಿಸುತ್ತಿದ್ದೀರಿ. ನೀವು ಅವರ favourable ಇಲ್ಲ. ತಾವು ಕಬ್ಬು ಬೆಳೆಗಾರರಿಗೆ ಅನ್ಯಾಯ ಮಾಡುತ್ತಿದ್ದೀರಿ. ಅದು ಎಲ್ಲಿಯವರೆಗೆ ಎಂದರೆ ನನ್ನ ಬಳಿ ಒಂದು ಲಿಸ್ಟ್ ಇದೆ. ಒಂದೊಂದು ಕಡೆಯಲ್ಲಿ ಒಂದೊಂದು ರೀತಿಯಲ್ಲಿ ಕೊಟ್ಟಿದ್ದಾರೆ. ಕೆಲವು ಫ್ಯಾಕ್ಟರಿಯವರು 1600 ₹.ಗಳನ್ನು ಕೊಟ್ಟಿದ್ದಾರೆ. ಬಿಜಾಪುರದಲ್ಲಿ ಬೇಕಾದರೆ ನೀವು intelligence report ತರಿಸಿಕೊಳ್ಳಿ. ಜಿಲ್ಲಾಧಿಕಾರಿಯವರ ಕಚೇರಿ ಬಳಿ continuous ಆಗಿ ಬೆಳಿಗ್ಗೆಯಿಂದ ಸಂಜೆಯವರೆಗೆ ರೈತರು ಧರಣಿ ಸತ್ಯಾಗ್ರಹ ಮಾಡುತ್ತಾ ಕುಳಿತಿದ್ದಾರೆ. ಇಲ್ಲಿಗೆ ಮಾನ್ಯ ಎಂ.ಬಿ. ಪಾಟೀಲ್, ನೀರಾವರಿ ಮಂತ್ರಿಯವರು ಬಂದಿಲ್ಲ. ಮೊನ್ನೆ ಅವರಿಗೆ ಮುತ್ತಿಗೆ ಹಾಕಿದರು. ಅವರು ಕಾರು ಬಿಟ್ಟು ಓಡಿದರು. ಅವರನ್ನು ಪೊಲೀಸರು ರಕ್ಷಣೆ ಮಾಡಿ, ಓಡಿಕೊಂಡು ಹೋದರೆಂದು ಟಿ.ವಿ. ಮಾಧ್ಯಮಗಳಲ್ಲಿ ಬಂತು ಮತ್ತು ಪ್ರಜಾವಾಣಿ ಪತ್ರಿಕೆಯಲ್ಲೂ ಸಚಿವರ ಪಲಾಯನ ಎಂದು ಬಂತು. ಬಿಜಾಪುರದಲ್ಲಿ ಕೆಲವು ಫ್ಯಾಕ್ಟರಿಯವರು 1,800 ₹.ಗಳು ಕೆಲವರು 1,600 ₹.ಗಳನ್ನು

ಇನ್ನೂ ಕೆಲವರು 2,000 ರೂ.ಗಳನ್ನು ಕೊಟ್ಟಿದ್ದಾರೆ. ಆ ಬಗ್ಗೆ ಮಾಹಿತಿಯನ್ನು ಕೊಡಿ. ಇವತ್ತು central government ಏನು FRP fix ಮಾಡಿದ್ದಾರೆ. ಅದರ ಪ್ರಕಾರ ಎಷ್ಟು ಜನರು rate ಕೊಟ್ಟಿದ್ದಾರೆ? ಇನ್ನು ಉಳಿದವರು ಏಕೆ ಕೊಟ್ಟಿಲ್ಲ? ತಾವು ನೋಟಿಸ್ ಕೊಟ್ಟಿದ್ದೀರಿ, ಅದಕ್ಕೆ ಎಷ್ಟು ಜನ ಉತ್ತರ ಕೊಟ್ಟಿಲ್ಲ? ತಮ್ಮ ಮಂತ್ರಿಗಳು ಅಧ್ಯಕ್ಷರಿರುವ ಫ್ಯಾಕ್ಟರಿಯವರು ಉತ್ತರ ಕೊಟ್ಟಿದ್ದಾರೋ, ಇಲ್ಲವೋ? ಅವರೂ ಸಹ ಉತ್ತರ ಕೊಟ್ಟಿಲ್ಲ. ಇಲ್ಲಿ ನಮಗೆ ಮಾಹಿತಿ ಇರುವ ಪ್ರಕಾರ ಉತ್ತರ ಕೊಟ್ಟಿಲ್ಲ. ಅಂದರೆ ತಮ್ಮ ಸರ್ಕಾರ ಒಂದು ನಿರ್ಣಯ ಏನು ಕೈಗೊಳ್ಳುತ್ತದೆ, ಆರ್ಡರ್ ಹೊರಡಿಸುತ್ತದೆ. ಅದನ್ನು obey ಮಾಡುವುದಕ್ಕೆ ನಿಮ್ಮ ಮಂತ್ರಿಗಳೇ ತಯಾರಿಲ್ಲ. ನಿಜವಾಗಿ ಹೇಳಬೇಕೆಂದರೆ, ಮಾನ್ಯ ಮುಖ್ಯಮಂತ್ರಿಯವರು ಧೈರ್ಯ ತೆಗದುಕೊಳ್ಳಬೇಕು. ಇನ್ನು ನಾಲ್ಕು ಕ್ಯಾಬಿನೆಟ್ ಸೀಟ್‌ಗಳು ಖಾಲಿ ಇವೆ, ಇದನ್ನು violation ಮಾಡಿರುವ ಮೂರ್‍ನಾಕು ಮಂತ್ರಿಗಳ ಮೇಲೆ action ತೆಗೆದುಕೊಳ್ಳಿ. ಅವರನ್ನು ಕ್ಯಾಬಿನೆಟ್ ನಿಂದ ಕೈಬಿಡಿ. ಸರ್ಕಾರದ ಆಜ್ಞೆಯನ್ನು ಯಾವ ಮಂತ್ರಿಗಳು violate ಮಾಡುತ್ತಾರೆ. ಅವರನ್ನು ಮಂತ್ರಿಮಂಡಲದಲ್ಲಿ ಮುಂದುವರೆಸುತ್ತೀರಿ, ನಿಮಗೆ ಏನು ನೈತಿಕತೆ ಇದೆ? ಮೊದಲು ಅವರನ್ನು ಕ್ಯಾಬಿನೆಟ್‌ನಿಂದ ತೆಗೆಯಿರಿ, ಆಗ ಅವರು ರೈತರಿಗೆ ಆ ದರವನ್ನು ಕೊಡುತ್ತಾರೆ ಇವತ್ತು ರೈತರಿಗೆ ಅನ್ಯಾಯವಾಗುತ್ತಿದೆ. ಈ ರೀತಿ ಅನ್ಯಾಯವಾಗುತ್ತಿದ್ದರೂ ಇಲ್ಲಿ ಮಾನ್ಯ ಮುಖ್ಯಮಂತ್ರಿಯವರು ನಾವು ರೈತರಿಗೆ ಅನ್ಯಾಯ ಮಾಡುವುದಿಲ್ಲ. ರೈತರ ಪರವಾಗಿದ್ದೇವೆಂದು ಹೇಳುತ್ತಾರೆ. ಮೊನ್ನೆ strike ನವರು ಬಂದಾಗ ನಾವು ರೈತರಿಗೆ ಅನ್ಯಾಯ ಮಾಡುವುದಿಲ್ಲ, ನಾವು ರೈತರಿಗೆ ನ್ಯಾಯ ಕೊಡಿಸುತ್ತೇವೆಂದು ಹೇಳುತ್ತಾರೆ. ತಾವು 7 ತಿಂಗಳುಗಳಿಂದ ರೈತರಿಗೆ ನ್ಯಾಯ ಕೊಡಿಸುತ್ತೀರಾ? ಇದು ಆಗಿ ಎಷ್ಟು ದಿವಸಗಳಾಯಿತು? ನಾನು ಇದು ಎಲ್ಲಿಯವರೆ ಎಂದು ಕೇಳುತ್ತಿದ್ದೇನೆ. ಅಲ್ಲಿ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಂಡ. ಮತ್ತೊಬ್ಬ ಬಿಜಾಪುರದಲ್ಲಿ ಆತ್ಮಹತ್ಯೆ ಮಾಡಿಕೊಂಡ ....

ಅಧ್ಯಕ್ಷರು : ತಾವು repeat ಮಾಡಬೇಡಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇವತ್ತು ಇಡೀ ರಾಜ್ಯದ ರೈತರು ಬೆಂಗಳೂರಿಗೆ ಬಂದಿದ್ದಾರೆ. ಇಷ್ಟೆಲ್ಲಾ ಆಗಿದೆ. ತಾವು ಈಗಾಗಲೇ session time ನಲ್ಲಿ ನಾವು ಹೀಗೆ action ತೆಗೆದುಕೊಂಡಿದ್ದೇವೆ. ಇಷ್ಟು sugar factory ಗಳ ಮೇಲೆ action ತೆಗೆದುಕೊಂಡಿದ್ದೇವೆ. ಅವರನ್ನು ಜಪ್ತಿ ಮಾಡಿದ್ದೇವೆಂದು statement ಕೂಡ ಬೇಕಾಗಿತ್ತು. ಹೈಕೋರ್ಟ್‌ನಿಂದ ಮೇ 22 ನೇ ತಾರೀಖಿನಂದು ಆರ್ಡರ್ ಆಗಿದೆ, ಇದು ಆದ ಮೇಲೆ ಇಲ್ಲಿಯವರೆಗೂ ಎಷ್ಟು ಫ್ಯಾಕ್ಟರಿಯನ್ನು ಮುಚ್ಚಿದ್ದೀರಿ, ಎಷ್ಟು ಜಪ್ತಿ ಮಾಡಿದ್ದೀರಿ ? ಈ ರೀತಿ ಪರಿಸ್ಥಿತಿ ಇರುವಂಥ ಸಂದರ್ಭದಲ್ಲಿ ಇವತ್ತು ಸರ್ಕಾರ ರೈತರ ಪರವಾಗಿಲ್ಲ, ರೈತರಿಗೆ ಅನ್ಯಾಯ ಮಾಡುತ್ತಿದೆ ಎನ್ನುವ ಮಾತನ್ನು ಹೇಳುತ್ತೇನೆ,

ಶುಗರ್ ಲಾಬಿ ಏನಿದೆ, ಆ ಶುಗರ್ ಲಾಬಿಗೆ ನೀವು ಯೀಲ್ಡ್ ಆಗಿದ್ದೀರಿ. ಮಾನ್ಯ ಮುಖ್ಯಮಂತ್ರಿಯವರು, ಶುಗರ್ ಮಿನಿಸ್ಟರ್ ನೀವೆಲ್ಲರೂ ಯೀಲ್ಡ್ ಆಗಿದ್ದೀರಿ. ತಾವು ಏನೂ action ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅವರ ಜೊತೆಗೆ ಮಿಲಾಪ್ ಆಗಿದ್ದೀರಿ! ಮಾನ್ಯ ಮುಖ್ಯಮಂತ್ರಿಯವರು, ಆಗಲೇ ನಮ್ಮ ಮೇಲೆ ಆಪಾದನೆ ಮಾಡಬೇಡಿ ಎಂದು ಹೇಳಿದರು. ನಾನು open ಆಗಿ ಹೇಳುತ್ತೇನೆ. ತಾವು ಶುಗರ್ ಫ್ಯಾಕ್ಟರಿ ಮಾಲೀಕರ ಜೊತೆಗೆ ಮಿಲಾಪ್ ಆಗಿದ್ದೀರಿ, ರೈತರಿಗೆ ಅನ್ಯಾಯ ಮಾಡುತ್ತಿದ್ದೀರಿ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಉಮೇಶ್ ಕತ್ತಿಯವರ ಜೊತೆಗೂ ಕೈ ಜೋಡಿಸಿದ್ದೇವೆ, ಮಾನ್ಯ ಗೋವಿಂದ ಎಂ. ಕಾರಜೋಳರವರ ಜೊತೆಗೂ ಕೈ ಜೋಡಿಸಿದ್ದೇವೆ. ಶಾಮೀಲಾಗಿದ್ದೇವೆ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಶಿವಕುಮಾರ್‌ರವರೆ, ನಮ್ಮದು ಸಕ್ಕರೆ ಕಾರ್ಖಾನೆ ಇಲ್ಲ. ನಾನು ಡೈರೆಕ್ಟರ್ ಆಗಿಲ್ಲ. ನಾನು ಅಲ್ಲಿ ಒಬ್ಬ ordinary share holder

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ: ನೀವು ಯಾವ ಕಂಪನಿಯ share holder ಆಗಿದ್ದೀರಾ ಅಲ್ಲಿ ಆ rate ಕೊಟ್ಟಿದ್ದಾರಾ ಕೇಳಿ?

ಅಧ್ಯಕ್ಷರು ಆಯಿತು ಹೇಳಿ.

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ನಾನು ಅಡ್ಡ ಬರುವುದಿಲ್ಲ. ನಾನು ಒಂದು ಮಾತನ್ನು ಹೇಳುವುದೇನೆಂದರೆ, ಶುಗರ್ ಲಾಬಿಗೆ ಸರ್ಕಾರ ಮಣಿದಿಲ್ಲ. Understand this ಕಾಯಿದೆ, ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಲಾಗಿದೆಯೆಂಬುದನ್ನು Co-operation Miniser reply ಕೊಡುವಾಗ ಹೇಳುತ್ತಾರೆ. ನಾವು Deputy Commissioner ರವರಿಗೆ instruction ಕೊಟ್ಟಿದ್ದೇವೆ. notice ಕೊಡುವುದಕ್ಕೆ ಹೇಳಿದ್ದೇವೆ. ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕಾಗಿದೆಯೋ ಅದನ್ನು ತೆಗೆದುಕೊಂಡಿದ್ದೇವೆ. ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, ರೈತರಿಗೆ ಯೋಗ್ಯವಾದ ದರ ಏನು ಸಿಗಬೇಕೋ ಅದು ಸಿಗುತ್ತದೆ. ಅದರಲ್ಲಿ ಯಾವುದೇ ವಾದ–ವಿವಾದವಿಲ್ಲ. ಚರ್ಚೆಯೂ ಇಲ್ಲ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ತಾವು ಅನವಶ್ಯಕವಾಗಿ ಆಪಾದನೆ ಮಾಡಬಾರದೆಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ : ಮಾನ್ಯ ಅಧ್ಯಕ್ಷರೆ, ಬಿಜೆಪಿ, ಕಾಂಗ್ರೆಸ್‌ನ ಯಾರದಾದರೂ factory ಇರಲಿ, ಅವರು ಯಾರಾದರೂ clear ಮಾಡಲಿ, ಎರಡೂ ಪಾರ್ಟಿಗಳ ಸಕ್ಕರೆ ಮಾಲೀಕರು ಇಲ್ಲಿದ್ದಾರೆ. ರೈತರಿಗೆ ಕೊಡುತ್ತೇವೆಂದು ಹೇಳಿ ಏಕೆ ದಿಕ್ಕು ತಪ್ಪಿಸುವುದು ?

(ಗೊಂದಲ)

ಅಧ್ಯಕ್ಷರು : ಸಾಕು.

ಶ್ರೀ ಎನ್.ಹೆಚ್. ಕೋನರೆಡ್ಡಿ : ನಮ್ಮ ಪಾರ್ಟಿಯಲ್ಲಿ ಇಲ್ಲ. ಎರಡೂ ಪಾರ್ಟಿಯವರು ಯಾರ ಜೊತೆ ಶಾಮೀಲಾಗಿದ್ದೀರಿ ಎಂದು clear ಮಾಡಿ. ಮೊದಲು ರೈತರ ದುಡ್ಡು ಕೊಡಿಸಿ.

ಅಧ್ಯಕ್ಷರು : ಆಯಿತು.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಮಾನ್ಯ ದೇಶಪಾಂಡೆಯವರು ಆಪಾದನೆ ಮಾಡಬೇಡಿ ಎಂದು ಹೇಳಿದರು.

ಅಧ್ಯಕ್ಷರು : ಅದೆಲ್ಲಾ ಬೇಡ.

ಶ್ರೀ ಜಗದೀಶ್ ಶೆಟ್ಟರ್ : ನಾವು ಆಪಾದನೆ ಮಾಡಬೇಕಾಗುತ್ತದೆ, ಏಕೆಂದರೆ ಆ ರೀತಿ ನೀವು ನಡೆದುಕೊಂಡಿದ್ದೀರಿ, ನಿಮ್ಮ conduct ಆ ರೀತಿ ಇದೆ, ನಿಮ್ಮ ನಡವಳಿಕೆ ಹಾಗೆ ಇದೆ. ಅದಕ್ಕಾಗಿ ನೇರವಾಗಿ ನಿಮ್ಮ ಮೇಲೆ ಆಪಾದನೆ ಮಾಡಬೇಕಾಗುತ್ತದೆ. ತಾವು ಇಲ್ಲಿ completely failure ಆಗಿದ್ದೀರಿ. ನಿಮಗೆ ನಿಜವಾಗಿಯೂ ರೈತರ ಪರವಾಗಿ ಮನಸ್ಸು ಇದ್ದರೆ, ರೈತರಿಗೆ ಅನ್ಯಾಯವಾಗಬಾರದೆಂದು ಇದ್ದರೆ, ತಕ್ಷಣ ಅವರಿಗೆ payment ಮಾಡಿಸುವಂಥ ಕೆಲಸವನ್ನು ಮಾಡುತ್ತಿದ್ದೀರಿ. ತಾವು ಕೆಲವು ದಿವಸಗಳು ಕೋರ್ಟ್‌ನ ನೆಪವನ್ನು ಹೇಳಿದ್ದೀರಿ. ನಾನು ಕೇಳುವುದೇನೆಂದರೆ, ಜುಲೈ ಕೊನೆಯವರೆಗೂ stay ಇದೆ ಎಂದು ಹೇಳಿದ್ದೀರಲ್ಲಾ. ..

ಅಧ್ಯಕ್ಷರು : ಅದನ್ನು ಹೇಳಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾನು ಮುಂದಿನ ವಿಷಯವನ್ನು ಹೇಳುತ್ತೇನೆ. ತಾವು ಜುಲೈ end ವರೆಗೂ stay ಇದ್ದರೆ, ಅದರ ಮೇಲೆ ತಾವು ಅಪೀಲ್ ಏಕೆ ಹೋಗಲಿಲ್ಲ? ತಾವು ಅಪೀಲ್ ಹೋಗಬೇಕಾಗಿತ್ತು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : (ಸಹಕಾರ ಸಚಿವರು) ಹೋಗಿದ್ದೇವಲ್ಲಾ ? ಮಾನ್ಯ ಅಧ್ಯಕ್ಷರೆ, ಮೊನ್ನೆ 18ನೇ ತಾರೀಖಿಗೆ High Court ನಲ್ಲಿ stay vacateಗೆ ಇತ್ತು. ಅದು 25 ನೇ ತಾರೀಖಿಗೆ adjourn ಆಗಿದೆ, ಮೂರು ಸಾರಿಯೂ Advocate General ರವರು participate ಮಾಡಿ stay vacate ಮಾಡಬೇಕೆಂದು ವಾದ ಮಾಡಿದ್ದಾರೆ. ಆದರೆ ಕೋರ್ಟ್‌ನಲ್ಲಿ 25ನೇ ತಾರೀಖಿಗೆ adjourn ಆಗಿರುವುದರಿಂದ, ನಾಡಿದ್ದು vacate ಮಾಡುವುದಕ್ಕೆ move ಮಾಡುತ್ತಿದ್ದೇವೆ. SAP ಕಾಯಿದೆಗೆ ಅವರು stay ತಂದಿರುವುದು sugar control order ಪ್ರಕಾರ

FRP ಹಣ ಏನು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. 22ನೇ ಮೇ 2014ರ ಕೋರ್ಟಿನ ಆದೇಶ 27–28ನೇ ತಾರೀಖಿನಂದು ನಮ್ಮ ಕೈ ತಲುಪಿದೆ. ನಾವು 1ನೇ ತಾರೀಖಿಗೆ ನಮ್ಮ Sugar Commissioner ರವರ ಮುಖಾಂತರ ಎಲ್ಲಾ 60 ಫ್ಯಾಕ್ಟರಿಗಳಿಗೂ ನೋಟೀಸ್ ಜಾರಿ ಮಾಡಿದ್ದೇವೆ. ನೋಟೀಸ್‌ಗೆ reply ಬಂದ ಮೇಲೆ ಯಾರ ಮೇಲೆ ಏನು ಕ್ರಮ, ತೆಗೆದುಕೊಂಡಿದ್ದೇವೆಂಬುದರ ಬಗ್ಗೆ ನಾನು ಉತ್ತರ ಹೇಳುವ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ನಾನು ಹೇಳಿದಂಥದ್ದು ಅದರ ಮೇಲೆ ಅಪೀಲ್ ಹೋಗಬೇಕಾಗಿತ್ತು. 22ರ ಮೇ ಇಂದ ಇಲ್ಲಿಯವರೆಗೆ ತಕ್ಷಣ ಅಫೀಲ್ ಹೋಗಿ ತಕ್ಷಣ Stay vacate ಮಾಡಿಸಬೇಕಾಗಿತ್ತು. ಹಿಂದೆ local bodies election ನಲ್ಲಿ ಮೀಸಲಾತಿ ಹೆಚ್ಚು–ಕಡಿಮೆಯಾದಾಗ, ಅದರ ಮೇಲೆ ಅಪೀಲೆಂದು ಬಹಳ ದಿವಸ ಹೋದಿರಿ. ಆಗ ಮೇಯರ್, ಉಪ ಮೇಯರ್ election ಎಲ್ಲಾ ಮುಂದೆ ಹೋದವು. ಅದರ ಮೇಲೆ ಅಪೀಲ್ ಹೋದಿರಿ. ಇದರ ಮೇಲೆ ಅಪೀಲ್ ಹೋಗವಂಥ ಪ್ರಯತ್ನ ನೀವು ಮಾಡಬೇಕಾಗಿತ್ತು. ನೀವು ಅದನ್ನು vacate ಮಾಡಿಸುವಂಥ ಪ್ರಯತ್ನವನ್ನು ಮಾಡಲಿಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ನಾವು vacate ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಅಪೀಲ್ ಹೋಗಿರುವ ಬಗ್ಗೆ ಅನುಮಾನ ಬೇಡ, ನಾವು ಅಪೀಲ್ ಹೊಗಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : ಇದರಲ್ಲಿ failure ಆಗಿದ್ದೀರಿ, ಮತ್ತು court matters ಎಂದು ಹೇಳಿಕೊಂಡು delay ಮಾಡಿದ್ದೀರಿ. ಮತ್ತೆ FRP ಪ್ರಕಾರ ಹಣವನ್ನು ಕೊಡಿಸಬೇಕಾಗಿತ್ತು. ಅದನ್ನು ನೀವು ಕೊಡಿಸಲಿಲ್ಲ. ಈಗ ಕೋರ್ಟ್‌ನಲ್ಲಿ 22ನೇ ಮೇ ನಲ್ಲಿ direction ಕೊಟ್ಟಿದೆ.

ಒಂದು ವಾರದ ನಂತರ action ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ. ನಾವು ಏಳು ತಿಂಗಳದ್ದನ್ನು ಮಾತ್ರ ಕೇಳುತ್ತಿದ್ದೇವೆ. ಮೇ ತಿಂಗಳಿನಿಂದ 11ನೇ ತಿಂಗಳಿನವರೆಗೆ ನಾನು ಕೇಳುತ್ತಿದ್ದೇನೆ. ಕೇಂದ್ರ ಸರ್ಕಾರ 2,100 Rs. ಗಳನ್ನು fix ಮಾಡಿದ್ದಾರೆ. ಈಗ ಮಾತ್ರ ಹೊಸ ಸೀಸನ್ ಚಾಲು ಆಯಿತು. 2014–15 ರ ಫೆಬ್ರವರಿ ತಿಂಗಳಿನಲ್ಲಿ ಮತ್ತೆ ಹೊಸದಾಗಿ ಆರ್ಡರ್ ಹೊರಡಿಸಿದ್ದಾರೆ.

"I am directed to inform that the Government of india has determined the fair and remunertive price of sugarcane payable by sugar mills for 2014-15 sugar season at Rs.2.200."

ಈ ವರ್ಷ 2,200 ರೂ.ಗಳನ್ನು fix ಮಾಡಿದೆ. ಇನ್ನೂ ಹಳೆಯ ಬಾಕಿ ವಸೂಲು ಆಗಲಿಲ್ಲ. ಅದು pending ಇದೆ. ಮೇ ತಿಂಗಳಲ್ಲಿ court observation ಮಾಡಿರುವುದು. ನೀವು

last year ನವೆಂಬರ್ ತಿಂಗಳಿನಲ್ಲಿ order ಮಾಡಿದ್ದು. ಹಾಗಾದರೆ ನೀವು FRPಪ್ರಕಾರವೇ ವಸೂಲಿ ಮಾಡುವುದಕ್ಕೆ ಚಾಲು ಮಾಡಬಹುದಾಗಿತ್ತು. ಆವತ್ತಿನಿಂದ ಇಲ್ಲಿಯವರೆಗೂ ಏಕೆ ಸುಮ್ಮನಿದ್ದೀರಿ? ನವೆಂಬರ್, ಡಿಸೆಂಬರ್, ಜನವರಿ, ಫೆಬ್ರವರಿ, ಮಾರ್ಚ್ ಮತ್ತು ಏಪ್ರಿಲ್ 6 ತಿಂಗಳುಗಳು ಆಯಿತು.

ಅಧ್ಯಕ್ಷರು : ನೀವು ಅದನ್ನು ಹೇಳಿದ್ದಿರಿ.

ಶ್ರೀ ಜಗದೀಶ್ ಶೆಟ್ಟರ್: 11ನೇ ತಿಂಗಳಿನಿಂದ ಇಲ್ಲಿಯವರೆಗೆ ಏಕೆ ಸುಮ್ಮನಿದ್ದೀರಿ? ಅದಕ್ಕೆ ನಾನು ಮಿಲಾಪ್ ಆಗಿದ್ದೀರೆಂದು ಹೇಳಿದ್ದು. ಅವರು ಕೋರ್ಟ್‌ಗೆ ಹೋಗಿ, ನಾವು ನೋಟೀಸ್ ಕೊಟ್ಟ ಹಾಗೆ ಮಾಡುತ್ತೇವೆ. ..

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ನಾವು FRP ಪ್ರಕಾರ ವಸೂಲಿ ಮಾಡುವುದಕ್ಕೆ ಹೋಗಿಲ್ಲ. ನಾವು SAP ಕಾಯಿದೆಯಲ್ಲಿ ex-gate, ex-field ಗೆ ಏನು ಎರಡೂವರೆ ಸಾವಿರ ₹. ಗಳನ್ನು ನಿಗದಿ ಮಾಡಿದ್ದೆವು. ಅದರ ಪ್ರಕಾರ payment ಮಾಡಬೇಕೆಂದು ನಾವು insist ಮಾಡುತ್ತಿರುವುದು.

ಶ್ರೀ ಗೋವಿಂದ ಎಂ. ಕಾರಜೋಳ : ತಾವು ಉತ್ತರ ಹೇಳುವಾಗ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ಈ ವಿಷಯ ಬಹಳ ಮಹತ್ವದಿದೆ, ಸರ್ಕಾರ failure ಆಗಿದೆ, ನ್ಯಾಯ ಕೊಡಬೇಕಾಗಿತ್ತು.

ಅಧ್ಯಕ್ಷರು : ತಾವು ಅದನ್ನು ಹೇಳಿದ್ದೀರಿ. ಮಾನ್ಯ ಮಂತ್ರಿಯವರು ಉತ್ತರ ಹೇಳಲೇಬೇಕು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನವೆಂಬರ್ ತಿಂಗಳಿಂದ ಇಲ್ಲಿಯವರೆಗೂ FRP ಪ್ರಕಾರವೂ ಇವರು recovery ಮಾಡಲಿಲ್ಲ. ತಾವು direction ಕೊಟ್ಟ ಪ್ರಕಾರವೂ recovery ಮಾಡಲಿಲ್ಲ. ಅವರಿಗೆ ಕೋರ್ಟ್‌ಗೆ ಹೋಗುವುದಕ್ಕೆ ಅವಕಾಶ ಕೊಟ್ಟರು, stay ತೆಗೆದುಕೊಂಡರು. ಅದರ ಮೇಲೆ ದಿನಗಳನ್ನು ನೂಕಿಸಿದರು, ಅದರ ಮೇಲೆ ನೆಪ ಹಾಕಿದರು. ಕೋರ್ಟ್‌ನಲ್ಲಿ stay ಇದೆ. ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲವೆಂದು ನೆಪ ಹಾಕಿದರು. ಇದು ಒಂದು ಕಡೆಯಾದರೆ, ಇನ್ನೊಂದು ನೀವು 150 ರೂ.ಗಳ ಸಬ್ಸಿಡಿ ಕೊಟ್ಟರು, ಅದು ಎಲ್ಲಿಯವರೆಗೆ ಎಂದರೆ ನನ್ನ ಪ್ರಕಾರ ಡಿಸೆಂಬರ್ ತಿಂಗಳವರೆಗೆ ಮಾತ್ರ payment ಆಗಿದೆ. ಡಿಸೆಂಬರ್‌ನಿಂದ ಜನವರಿ, ಫೆಬ್ರವರಿ, ಮಾರ್ಚ್, ಏಪ್ರಿಲ್‌ವರೆಗೆ ನಾಲ್ಕು ತಿಂಗಳಿನದು ಸುಮಾರು 300 ಕೋಟಿ ರೂಪಾಯಿ ಇನ್ನೂ ಕೊಡುವುದು ಪೆಂಡಿಂಗ್ ಇದೆ. ನೀವು ಏನು determine ಮಾಡಿದ್ದೀರಿ, ಅದರ ಪ್ರಕಾರ ಸಕ್ಕರೆ ಕಾರ್ಖಾನೆಗಳ ಮಾಲೀಕರು ಇನ್ನೂ 3,500 ಕೋಟಿ ರೈತರಿಗೆ ಕೊಡುವುದು ಬಾಕಿ ಇದೆ. ಅದೂ ಸಹ ಇದುವರೆಗೂ ಪೇಮೆಂಟ್ ಆಗಿಲ್ಲ. ಅದರ ಜೊತೆಗೆ ಕಳೆದ ವರ್ಷದ್ದೂ ಬಾಕಿ ಇದೆ. ಹೀಗೆ ಸಾವಿರಾರು ಕೋಟಿ

ರೂಪಾಯಿ ಪೆಂಡಿಂಗ್ ಇದೆ. ಆದ್ದರಿಂದ ಸರ್ಕಾರ ರೈತರ ನೆರವಿಗೆ ಬರಬೇಕು. ರೈತರಿಗೆ ಅನ್ಯಾಯವಾಗುವುದನ್ನು ನೋಡಿಕೊಂಡು ನೀವು ಸುಮ್ಮನೆ ಕುಳಿತುಕೊಳ್ಳುವಿರಾ ಎಂದು ನಾನು ಕೇಳುತ್ತಿದ್ದೇನೆ. ಅದಕ್ಕಾಗಿ ನಾವು ಇವತ್ತು ಇದನ್ನು ನಿಲುವಳಿ ಸೂಚನೆ ಮುಖಾಂತರ ತಂದಿದ್ದು, ಇದು ಬಹಳ ಮಹತ್ವದ ವಿಷಯವಾಗಿದೆ. ಇಡೀ ರಾಜ್ಯದ ರೈತರು ಬೆಂಗಳೂರಿಗೆ ಬಂದು ಸ್ಟ್ರೈಕ್ ಮಾಡುತ್ತಿದ್ದಾರೆ, ಹೋರಾಟ ಮಾಡುತ್ತಿದ್ದಾರೆ. ಅವರಿಗೆ ಏನು ಉತ್ತರ ಕೊಡುತ್ತೀರಿ ? ಕಳೆದ ಬಾರಿ ತಾವು ಅವರಿಗೆ ಭರವಸೆ ಕೊಟ್ಟಿರಿ. ಆ ಭರವಸೆ ಇದುವರೆಗೆ ಈಡೇರಿಲಿಲ್ಲ. ನಿಮ್ಮ ಕಡೆಯ ಬಾಕಿಯೂ ಪೆಂಡಿಂಗ್ ಇದೆ, ಸಕ್ಕರೆ ಕಾರ್ಖಾನೆಗಳವರು ರೈತರಿಗೆ 3,000 ಕೋಟಿ ಕೊಡುವುದಿದೆ, ಅದೂ ಪೆಂಡಿಂಗ್ ಇದೆ. ಎಫ್.ಆರ್.ಪಿ ಪ್ರಕಾರ ರೆಕವರಿಯನ್ನು ಮಾಡಲಿಲ್ಲ. ಈ ಎಲ್ಲ ಕಾರಣಗಳಿಂದ, the fault is on the part of the Government. ನಿಮ್ಮ ತಪ್ಪಿನಿಂದಾಗಿ ರೈತರು ಸಫರ್ ಆಗುತ್ತಿದ್ದಾರೆ. ಬೆಳಗಾವಿಯಲ್ಲಿ ವಿಠಲ ಅರಭಾವಿ ಎನ್ನುವಂತ ರೈತ ಆತ್ಮಹತ್ಮೆ ಮಾಡಿಕೊಂಡ ಬಿಜಾಪುರದಲ್ಲಿ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಂಡ. ಇನ್ನೂ ಎಷ್ಟು ಜನ ರೈತರು ಆತ್ಮಹತ್ಯೆ ಮಾಡಿಕೊಳ್ಳಲಿ ಎಂದು ನೀವು ಕಾಯುತ್ತಿದ್ದೀರಿ ಎಂದು ನಾನು ನಿಮ್ಮನ್ನು ಕೇಳುತ್ತಿದ್ದೇನೆ. ನಿಮ್ಮಲ್ಲಿರುವ ಮಂತ್ರಿಗಳೇ ಸಕ್ಕರೆ ಕಾರ್ಖಾನೆಗಳ ಮಾಲೀಕರಾಗಿದ್ದು, ಅವರೂ ಸಹ ಕೊಟ್ಟಿಲ್ಲ. ಅಂಥವರನ್ನು ಸಂಪುಟದಿಂದ ಕೈಬಿಡುವುದನ್ನಾದರೂ ಮಾಡಿ, ಇಲ್ಲದಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಇಲ್ಲದಿದ್ದರೆ ನೀವು ಸರ್ಕಾರ ನಡೆಸಲು ಅಸಮರ್ಥರು ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಅದಕ್ಕಾಗಿ, ತಕ್ಷಣವೇ ಇವರ ಬಗ್ಗೆ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ನಾಳೆ ಕಾನೂನು ಸುವ್ಯವಸ್ಥೆ ಹದಗೆಡುವಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಅದಕ್ಕೆ ನೀವೇ ಜವಾಬ್ದಾರರಾಗುತ್ತೀರಿ ಎನ್ನವಂಥ ಮಾತನ್ನು ಹೇಳುತ್ತೇನೆ. ತಕ್ಷಣವೇ ಸರ್ಕಾರ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು ಎನ್ನುವ ಒತ್ತಾಯವನ್ನು ಮಾಡುತ್ತಿದ್ದೇನೆ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಸನ್ಮಾನ್ಯ ಸಭಾಧ್ಯಕ್ಷರೆ, 2013-14ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಒಟ್ಟು 3 ಕೋಟಿ 83 ಲಕ್ಷ ಟನ್ ಕಬ್ಬನ್ನು ನಾವು ಬೆಳೆದಿದ್ದೇವೆ. 4 ಲಕ್ಷ 20 ಸಾವಿರ ಟನ್ ಸಕ್ಕರೆ ಉತ್ಪಾದನೆ ಮಾಡಿದ್ದೇವೆ.

ಅಧ್ಯಕ್ಷರು : ಕಾರಜೋಳರವರೇ, ನಮ್ಮ ಮುಂದಿರುವ ವಿಷಯ ಸೀಮಿತವಾಗಿದೆ. ಸರ್ಕಾರ ಏಕೆ ಘೋಷಣೆ ಮಾಡಿರುವ ದರವನ್ನು ಕೊಟ್ಟಿಲ್ಲ ಅಷ್ಟಕ್ಕೆ ಸೀಮಿತವಾಗಿ ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ : ಅದನ್ನೇ ಹೇಳುತ್ತೇನೆ. ಏಕೆ ಅದರ ಹಿನ್ನೆಲೆ ಹೇಳುತ್ತಿದ್ದೇನೆ ಎಂದರೆ ಎಷ್ಟು ಬಾಕಿ ಉಳಿಸಿಕೊಂಡಿದ್ದಾರೆ ಎನ್ನುವುದನ್ನು ಹೇಳುವ ಸಲುವಾಗಿಯೇ ಅಂಕಿಸಂಖ್ಯೆಗಳನ್ನು ಹೇಳಿದೆ. ಬೆಳಗಾವಿ ವಿಭಾಗದಿಂದ ಅಂದರೆ ಬೆಳಗಾವಿ, ಬಿಜಾಪುರ, ಬಾಗಲಕೋಟೆ, ಧಾರವಾಡ, ಹಾವೇರಿಗಳಿಂದಲೇ ಈ ರಾಜ್ಯದಲ್ಲಿ ಉತ್ಪಾದನೆಯಾಗುವ ಒಟ್ಟು ಕಬ್ಬಿನಲ್ಲಿ 80% ಕಬ್ಬನ್ನು ಬೆಳೆಯುತ್ತೇವೆ.

ಅಧ್ಯಕ್ಷರು : ಹೆಚ್ಚು ಬೆಳೆಯುವವರೂ ನೀವೇ, ಹೆಚ್ಚು ರೆಕವರಿ ಆಗುವುದೂ ನಿಮ್ಮದೇ.

ಶ್ರೀ ಗೋವಿಂದ ಎಂ. ಕಾರಜೋಳ : 9.5% ರೆಕವರಿಗೆ 2,100 ರೂಪಾಯಿ ಎಫ್.ಆರ್.ಪಿ ಫಿಕ್ಸ್ ಮಾಡಿದ್ದಾರೆ ಎಂದು ನಮ್ಮ ನಾಯಕರಾದ ಜಗದೀಶ ಶೆಟ್ಟರ್‌ರವರು ಹೇಳಿದರು, ನಮ್ಮಲ್ಲಿ 12.5% ವರೆಗೂ ಬರುತ್ತದೆ ಬೆಳಗಾವಿ ರೆವಿನ್ಯೂ ಡಿವಿಷನ್‌ನಲ್ಲಿ ಸರಾಸರಿ 11.52% ಬಂದಿದೆ.

ಶ್ರೀ ಡಿ.ಕೆ. ಶಿವಕುಮಾರ್ : ಹನ್ನೊಂದೂವರೆ–ಹನ್ನೊಂದೂ ಮುಕ್ಕಾಲು ಪರ್ಸೆಂಟ್ ರೆಕವರಿ ಇರುವುದು ನಿಮ್ಮ ಡಿವಿಷನ್ನಿನಲ್ಲೇ. ನೀವು ಹೇಳಿದ ಪ್ರಕಾರವೇ 11%–12% ಇದೆ.

ಶ್ರೀ ಗೋವಿಂದ ಎಂ. ಕಾರಜೋಳ : ಇಲ್ಲ ಹಾಗಾಗುವುದಿಲ್ಲ. ನನ್ನ ಬಳಿ ಪೂರ್ಣ ಮಾಹಿತಿ ಇದೆ. ತಮಗೆ ಮಾಹಿತಿ ಬೇಕಾದರೆ ಕೊಡುತ್ತೇನೆ. 60 ಕಾರ್ಖಾನೆಗಳ ಮಾಹಿತಿ ನನ್ನ ಹತ್ತಿರ ಇದೆ. ನಾನು ಸರ್ಕಾರಕ್ಕೆ ಇಷ್ಟೇ ವಿನಂತಿ ಮಾಡಲು ಬಯಸುತ್ತೇನೆ, ಕರ್ನಾಟಕದಲ್ಲಿ ಹೆಚ್ಚು ಉದ್ಯೋಗ ಕೊಟ್ಟಿರುವಂಥ ಉದ್ದಿಮೆ ಯಾವುದಾದರೂ ಇದ್ದರೆ, ಅದು ಕಬ್ಬು ಬೆಳೆಗಾರರು ಮತ್ತು ಸಕ್ಕರೆ ಕಾರ್ಖಾನೆಯವರು. ಸುಮಾರು ಒಂದೂವರೆ ಕೋಟಿ ಜನ ಅದರಿಂದ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದಾರೆ. ಅಂದರೆ ಕರ್ನಾಟಕದಲ್ಲಿ ಶೇಕಡ 25ರಷ್ಟು ಜನರು ಅದರಿಂದ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದಾರೆ. ಇವತ್ತು ರೈತರು ಸಂಕಷ್ಟದಲ್ಲಿದ್ದಾರೆ. ನಾವು ಅವರಿಗೆ one-time help ಮಾಡೋಣ ಎಂದು ಸರ್ಕಾರ ಪ್ರತಿ ಟನ್ನಿಗೆ 150 ರೂಪಾಯಿ ಸರ್ಕಾರದಿಂದ ಕೊಡುತ್ತೇವೆ ಎಂದು ಘೋಷಣೆ ಮಾಡಿ ಒಳ್ಳೆಯ ಕೆಲಸ ಮಾಡಿರುವಿರಿ. ಆದರೆ ಸರ್ಕಾರದವರು ಅದರ 350 ಕೋಟಿ ರೂಪಾಯಿಗಳನ್ನು ಬಾಕಿ ಉಳಿಸಿಕೊಂಡಿದ್ದಾರೆ. ಕಾರ್ಖಾನೆಗಳವರು 3500 ಕೋಟಿ ರೂಪಾಯಿಗಳನ್ನು ಬಾಕಿ ಉಳಿಸಿಕೊಂಡಿದ್ದಾರೆ. ಈ ಕಡೆ ಮತ್ತು ಆ ಕಡೆ ಇರುವವರಲ್ಲಿ ಕಾರ್ಖಾನೆಯ ಮಾಲೀಕರಿದ್ದಾರೆ ಎಂದು ಬಹಳಷ್ಟು ಚರ್ಚೆಯಾಯಿತು. ಮಂತ್ರಿಗಳು, ಶಾಸಕರು ಯಾರ್‍ಯಾರು ಸಕ್ಕರೆ ಕಾರ್ಖಾನೆಗಳ ಮಾಲೀಕರಾಗಿದ್ದಾರೆ, ಅವರು ಒಂದು ಘೋಷಣೆ ಮಾಡಲಿ, ಎಸ್.ಎ.ಪಿ ಕಾನೂನಿನ ಪ್ರಕಾರ ಸರ್ಕಾರ ನಿಗದಿ ಮಾಡಿದಂಥ ಹಣವನ್ನು ಕೊಡುತ್ತೇವೆ ಎಂದು ಅವರು ಇಲ್ಲೇ ಘೋಷಣೆ ಮಾಡಿಬಿಟ್ಟರೆ ರೈತರು ಆರಾಮವಾಗಿ ಮನೆಗೆ ಹೋಗುತ್ತಾರೆ. ಇಲ್ಲಿದ್ದವರು ಹಾಗೆ ಹೇಳಿದರೆ ಸಾಕು, ಉಳಿದವರ ಕಡೆಯಿಂದ ಅವರು ತೆಗೆದುಕೊಳ್ಳುತ್ತಾರೆ. ಶಾಸಕರು, ಮಂತ್ರಿಗಳು ಯಾರ್‍ಯಾರು ಸಕ್ಕರೆ ಕಾರ್ಖಾನೆಯ ಮಾಲೀಕರಾಗಿದ್ದಾರೆ, ಅವರು ದಯಮಾಡಿ ಮುಂದೆ ಬರಬೇಕು. ನಾವು ಹಣವನ್ನು ಕೊಡುತ್ತೇವೆ ಎಂದು ಇಲ್ಲಿ ಘೋಷಣೆ ಮಾಡಿದರೆ ಸಮಸ್ಯೆಯೇ ಪರಿಹಾರವಾಗುತ್ತದೆ. ಆ ರೀತಿ ಅವರೆಲ್ಲರೂ ಘೋಷಣೆ ಮಾಡಲಿ ಎಂದು ನಾನು ತಮ್ಮ ಮೂಲಕ ಅವರಿಗೆ ವಿನಂತಿ ಮಾಡುತ್ತೇನೆ. ಕಬ್ಬು ಪೂರೈಕೆಯಾದ 14 ದಿವಸಗಳೊಳಗೆ ರೈತರಿಗೆ ಪೇಮೆಂಟ್ ಕೊಡಬೇಕು ಎಂದು ಇದೆ. ಆದರೆ 14 ದಿವಸಗಳಲ್ಲಿ ಯಾವ ಕಾರ್ಖಾನೆಯವರೂ ಹಣ ಕೊಟ್ಟಿಲ್ಲ. ಹಾಗೆ ಕೊಡದಿದ್ದರೆ, ಆ ಹಣಕ್ಕೆ 15%

ಬಡ್ಡಿ ಹಾಕಿ ಕೊಡಬೇಕು ಎಂದು ಕಾನೂನನ್ನೇ ಮಾಡಿದ್ದೀರಿ ಹಾಗಾಗಿ, ದಯವಿಟ್ಟು 15% ಬಡ್ಡಿ ಹಾಕಿಸಿ ಕೊಡುವಂಥ ಕೆಲಸವನ್ನು ಮಾಡಿ. ಇನ್ನೊಂದು ವಿಷಯ ಬಹಳ ಮಂದಿಗೆ ಗೊತ್ತಿಲ್ಲ, ಕಾರ್ಖಾನೆಗಳ ಮಾಲೀಕರು ಒಂದು ದೊಡ್ಡ ಅನಾಹುತವನ್ನೇನು ಮಾಡಿದ್ದಾರೆ, ತೂಕದಲ್ಲಿ 10% ಕಡಿಮೆ ಮಾಡಿದ್ದಾರೆ.

ಅಧ್ಯಕ್ಷರು : ಅದು ಇಲ್ಲಿ ಬರುವುದಿಲ್ಲ. ತಮ್ಮಲ್ಲಿ ನಾನು ವಿನಂತಿ ಮಾಡುತ್ತೇನೆ, ನಿಮ್ಮ ಚರ್ಚೆಯ ವಿಷಯ ಏನಿದೆ ಅಷ್ಟಕ್ಕೆ ಮಾತ್ರ ಸೀಮಿತವಾಗಿ.

ಶ್ರೀ ಜಗದೀಶ ಶೆಟ್ಟರ್ : ಆ ರೀತಿ ಕಾನೂನು ಇದೆ. ಅದನ್ನು ಉಲ್ಲಂಘನೆ ಮಾಡಿದರೆ ಸರ್ಕಾರದವರಿಗೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲು ಬರುತ್ತದೆ.

ಅಧ್ಯಕ್ಷರು : ಅದರ ಬಗ್ಗೆ ಪ್ರತ್ಯೇಕವಾಗಿ ಚರ್ಚೆ ಮಾಡಿ, ಬೇಡವೆನ್ನುವುದಿಲ್ಲ. ಆದರೆ ಇಲ್ಲಿ ಈಗ ನೀವು ಕೊಟ್ಟಿರುವ ವಿಷಯಕ್ಕೆ ಸೀಮಿತವಾಗಿ ಮಾತನಾಡಿ. ವಿಷಯ ಏನಿದೆಯೆಂದರೆ, "ಸರ್ಕಾರ ಸೂಚಿಸಿದ ಹಣವನ್ನು ರೈತರಿಗೆ ಪಾವತಿಸಲು ಮುಂದಾಗುತ್ತಿಲ್ಲ. ಸರ್ಕಾರ ರೈತರ ಹಿತವನ್ನು ಕಾಪಾಡದೇ ಕಾರ್ಖಾನೆಗಳವರಿಗೆ ಮೃದು ಧೋರಣೆ ತೋರಿಸುತ್ತದೆ ಎನ್ನುವ ಭಾವನೆ ಇದೆ." ಅಷ್ಟಕ್ಕೆ ಸೀಮಿತವಾಗಿ ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ : ತಮಗೆ ಸಂಕ್ಷಿಪ್ತವಾಗಿ ಕೊಟ್ಟಿರುತ್ತೇವೆ. ಆದರೆ ಇಲ್ಲಿ ಮಾತಾಡುವಾಗ ಅವಕಾಶ ಕೊಡಬೇಕಾಗುತ್ತದೆ. ಅದಕ್ಕಾಗಿಯೇ ತಾವು ನಿಲುವಳಿ ಸೂಚನೆಯನ್ನು ನಿಯಮ 69ಕ್ಕೆ ಕನ್ವರ್ಟ್ ಮಾಡಿಕೊಟ್ಟಿದ್ದೀರಿ.

ಅಧ್ಯಕ್ಷರು : ಕೃಷಿಯ ಮೇಲೆ ಮಾತನಾಡುವಾಗ ಒಂದು ಗಂಟೆ ಮಾತನಾಡಿ, ಬೇಡವೆನ್ನುವುದಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ಅದು ಯಾವ ರೀತಿ ಆಗುತ್ತದೆ ಎಂದರೆ, ಬೋರಗಲ್ಲ ಮೇಲೆ ಮಳೆ ಸುರಿದಂಗೆ ಆಗುತ್ತದೆಯೇ ಹೊರತು ಅದರಿಂದ ಏನೂ ಆಗುವುದಿಲ್ಲ.

ಅಧ್ಯಕ್ಷರು : ನೀವು ಹಾಗೆ ಹೇಳಬೇಡಿ.

ಶ್ರೀ ಗೋವಿಂದ ಎಂ. ಕಾರಜೋಳ : ಅದಕ್ಕೆ ಅವರು ಉತ್ತರ ಕೊಡುವುದಿಲ್ಲ. ಉತ್ತರ ಎಲ್ಲಿ ಕೊಡುತ್ತಾರೆ ?

ಅಧ್ಯಕ್ಷರು : ನೀವೆಲ್ಲ ಸರ್ಕಾರ ನಡೆಸಿದಂಥವರು, ಮಂತ್ರಿಯಾಗಿದ್ದಂಥವರು, ಈ ರೀತಿ ಮಾತನಾಡಬಾರದು.

ಶ್ರೀ ಗೋವಿಂದ ಎಂ. ಕಾರಜೋಳ : ಅದಕ್ಕಾಗಿಯೇ ಹೇಳುತ್ತಿದ್ದೇನೆ. ಅದಕ್ಕೆ ಯಾರೂ ಸಮರ್ಪಕವಾಗಿ ಉತ್ತರ ಕೊಡುವುದಿಲ್ಲ. ಈ ಸಂದರ್ಭದಲ್ಲಿ ನಾನು ಕಾರ್ಖಾನೆಗಳ ಮಾಲೀಕರಲ್ಲಿ

ವಿನಂತಿ ಮಾಡುತ್ತೇನೆ, ನಿಗದಿತ ಅವಧಿಯಲ್ಲಿ ಹಣವನ್ನು ಪಾವತಿ ಮಾಡದಿರುವುದರಿಂದ ಅದಕ್ಕೆ ಬಡ್ಡಿಯನ್ನು ಸೇರಿಸಿ ಮತ್ತು ತೂಕದಲ್ಲಿ 10% ಕಡಿತ ಮಾಡಿರುವುದನ್ನೂ ಸೇರಿಸಿ 2864 ರೂಪಾಯಿ ಕೊಡಬೇಕಾಗುತ್ತದೆ. ಈಗಾಗಲೇ 2000 ರೂಪಾಯಿಗಳನ್ನು ಕೊಟ್ಟಿರುವವರು ಇನ್ನೂ 864 ರೂಪಾಯಿಗಳನ್ನು ಕೊಡಲಿ, 1,800 ರೂಪಾಯಿಗಳನ್ನು ಕೊಟ್ಟಿರುವವರು, 1,064 ರೂಪಾಯಿಗಳನ್ನು ಕೊಡಲಿ. ಆ ರೀತಿ ಕೊಡಬೇಕಾಗುತ್ತದೆ. ಇನ್ನೊಂದು ಬಹಳ ಮಹತ್ವದ ವಿಷಯವೆಂದರೆ, ಕರ್ನಾಟಕದಲ್ಲಿ ಅಷ್ಟೇ ಅಲ್ಲ, ಇಡೀ ದೇಶದಲ್ಲಿ ಇವತ್ತು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಪ್ರತಿಯೊಂದು ಗಂಟೆಗೆ ಇಬ್ಬರು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ, ಪ್ರತಿಯೊಂದು ಗಂಟೆಗೆ 20 ಜನ ರೈತರು ಆತ್ಮಹತ್ಯೆಗೆ ಪ್ರಯತ್ನವನ್ನು ಮಾಡುತ್ತಿದ್ದಾರೆ.

ಅಧ್ಯಕ್ಷರು : ಅದನ್ನು ಪ್ರತ್ಯೇಕವಾಗಿ ಮಾತನಾಡಿ. ಕೃಷಿ ವಿಷಯ ಬಂದಾಗ ಮಾತನಾಡಿ.

ಶ್ರೀ ಗೋವಿಂದ ಎಂ. ಕಾರಜೋಳ : ಇದು ಕಬ್ಬು ಬೆಳೆಗಾರರ ಪರಿಸ್ಥಿತಿ. ಅದಕ್ಕಾಗಿ ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ, ತೂಕದಲ್ಲಿ ಕಡಿಮೆ ಮಾಡಬಾರದು ಎನ್ನುವ ಬಗ್ಗೆ ಸರ್ಕಾರ ಆದೇಶ ಮಾಡಿದ್ದರೂ, ಯಾವ ಕಾರ್ಖಾನೆಯವರೂ ಅದನ್ನು ಪಾಲಿಸದೇ, ತೂಕದಲ್ಲಿ 10% ಮುರಿದಿದ್ದಾರೆ. ಬೈಂಡಿಂಗ್ ಮೆಟೀರಿಯಲ್ ಮುಂತಾದವು ಇರುತ್ತವೆ ಎಂದು 1% ವೇಸ್ಟ್ ಮುರಿಯಲು ಅವಕಾಶವಿದೆ. ಆದರೆ ಆ ರೀತಿಯಾಗಿಲ್ಲ. ಇವತ್ತು ಸಂಕಷ್ಟದಲ್ಲಿರುವ ರೈತರ ನೆರವಿಗೆ ಬರಬೇಕಾದರೆ ಸರ್ಕಾರ ಹಣ ಕೊಟ್ಟು, ನಂತರ ಕಾರ್ಖಾನೆಗಳ ಮಾಲೀಕರಿಂದ ವಸೂಲು ಮಾಡಿಕೊಳ್ಳಬೇಕು. ತಾವು ಸರ್ಕಾರಕ್ಕೆ ಸೂಚನೆ ಕೊಡಿ, ಸರ್ಕಾರ ರೈತರಿಗೆ ಪೇಮೆಂಟ್ ಮಾಡಿ ನಂತರ ಕಾರ್ಖಾನೆಗಳ ಮಾಲೀಕರಿಂದ ಅವರು ವಸೂಲು ಮಾಡಿಕೊಳ್ಳಲಿ. ಏಕೆಂದರೆ ರೈತರು ಬಹಳ ಸಂಕಷ್ಟದಲ್ಲಿದ್ದಾರೆ, ಮಳೆಯಿಲ್ಲ, ಬೆಳೆಯಿಲ್ಲ, ಅವರು ಈ ಪರಿಸ್ಥಿತಿಯಲ್ಲಿದ್ದಾರೆ. ತಾವು ಇದಕ್ಕೆ ಹೆಚ್ಚು ಅವಕಾಶವನ್ನು ಕೊಡಬೇಕಾಗಿತ್ತು, ಏಕೆಂದರೆ ನಮಗೆ ಕಬ್ಬು ಬಿಟ್ಟು ಬೇರೆ ಬೆಳೆಯೇ ಗೊತ್ತಿಲ್ಲ.

ಅಧ್ಯಕ್ಷರು : ಈಗ ಅದೆಲ್ಲಾ ಬೇಡ, ವಿಷಯ ಸೀಮಿತವಾಗಿದೆ. ಸರ್ಕಾರ ಘೋಷಣೆ ಮಾಡಿರುವ ಪ್ರಕಾರ ಇದುವರೆಗೂ ಏಕೆ ಕೊಡಲಿಲ್ಲ ? ಎನ್ನುವುದು ವಿಷಯವಾಗಿದೆ.

ಶ್ರೀ ಗೋವಿಂದ ಎಂ. ಕಾರಜೋಳ : ಸರ್ಕಾರದವರು ಮೀಟಿಂಗ್ ಕರೆದರೂ ಯಾವ ಕಾರ್ಖಾನೆಯವರೂ ಬಂದಿಲ್ಲ. ಅಂಥ ಪರಿಸ್ಥಿತಿಯಲ್ಲಿ ಮಹದೇವ ಪ್ರಸಾದ್‌ರವರು ಸರ್ಕಾರವನ್ನು ನಡೆಸುತ್ತಿದ್ದಾರೆ. ಕಾರ್ಖಾನೆಗಳವರು ಹಣವನ್ನು ಎಷ್ಟು ದಿವಸಗಳಲ್ಲಿ ಕೊಡುತ್ತಾರೆ ಎನ್ನುವುದನ್ನು ಸ್ಪೆಸಿಫಿಕ್ ಆಗಿ ಹೇಳಬೇಕು. ಕೊಡದಿದ್ದರೆ, ಸರ್ಕಾರ ಕೊಟ್ಟು, ನಂತರ ಅವರಿಂದ ವಸೂಲು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡುತ್ತೇನೆ.

ಅಧ್ಯಕ್ಷರು : ಈಗ ಲಕ್ಷ್ಮಣ ಸಂಗಪ್ಪ ಸವದಿಯವರು. ಬೇರೆಯವರು ಹೇಳಿದ್ದನ್ನು ರಿಪೀಟ್ ಮಾಡಬೇಡಿ. ಅವರು ಹೇಳದೇ ಬಿಟ್ಟಿದ್ದನ್ನು ಹೇಳಿ.

+ ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಪರಿಷ್ಕರಿಸಿರುತ್ತಾರೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಅಥಣಿ) : ಅವರು ಹೇಳಿದ ಯಾವುದನ್ನೂ ಹೇಳುವುದಿಲ್ಲ. ಬೇರೆ ವಿಷಯವನ್ನು ಮಾತನಾಡುತ್ತೇನೆ.

ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ಇನ್ನೊಬ್ಬ ನಾಯಕರು, ಕಳೆದ ವರ್ಷ ಸರ್ಕಾರ ಘೋಷಣೆ ಮಾಡಿರುವಂಥ ಬೆಲೆಯನ್ನು ಯಾವುದೇ ಕಾರ್ಖಾನೆಗಳು ರೈತರಿಗೆ ಸಂದಾಯ ಮಾಡಿಲ್ಲ. ಸರ್ಕಾರ ಅದರಲ್ಲಿ ವಿಫಲವಾಗಿದೆ ಎನ್ನುವಂಥ ಮಾತನ್ನು ಒತ್ತಿ ಹೇಳಿದ್ದಾರೆ. ಬೆಳಗ್ಗೆ ದತ್ತಾರವರು ಮಾತನಾಡುವಾಗ ಒಂದು ಮಾತನ್ನು ತಪ್ಪಾಗಿ ಆಡಿದರು, ಸರ್ಕಾರ ಕಾರ್ಖಾನೆಗಳ ಮಾಲೀಕರ ಜೊತೆ mingle ಆಗಿದೆ ಎನ್ನುವಂಥ ಮಾತನ್ನು ಹೇಳಿದರು. ಆಗ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಬಹಳ ಕೋಪ ಬಂತು. ಬಹುಶಃ ದತ್ತಾರವರು ತಪ್ಪು ಮಾತನಾಡಿರಬಹುದು. ಸರ್ಕಾರ ಕಾರ್ಖಾನೆಯವರು ಜೊತೆ ಶಾಮೀಲಾಗಿದೆ ಎನ್ನುವ ಶಬ್ದವನ್ನು ಬಳಸಬಾರದಾಗಿತ್ತು. ಏಕೆಂದರೆ ಅಂಥ ಸರ್ಕಾರ ಇದಲ್ಲ. ಯಾವುದೇ ಲಾಬಿಗೆ ಮಣಿಯತಕ್ಕಂಥ ಸರ್ಕಾರವೂ ಇದಲ್ಲ. ಕೊಟ್ಟ ಮಾತಿಗೆ ತಕ್ಕಂತೆ ನಾವು ನಡೆಯುತ್ತೇವೆ, ಕೊಟ್ಟ ಮಾತಿನಿಂದ ನಾವು ಯಾವತ್ತೂ ಹಿಂದೆ ಸರಿಯುವುದಿಲ್ಲ ಎನ್ನುವಂಥ ಮಾತನ್ನು ಸರ್ಕಾರದ ಚುನಾವಣಾ ಪೂರ್ವದಲ್ಲಿ ಹೇಳಿದೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಆದರೆ ನಾನು ಆ ಮಾತನ್ನು ಬಳಸಲು ಹೋಗುವುದಿಲ್ಲ. ನೀವು ಕಾರ್ಖಾನೆಗಳವರ ಲಾಬಿಗೆ ಮಣಿದಿದ್ದೀರಿ ಎಂದೂ ಹೇಳುವುದಿಲ್ಲ. ಹೊರಗೆ ಜನ ಮಾತನಾಡುತ್ತಾರೆ. ಖಾಸಗಿ ಕಾರ್ಖಾನೆಗಳವರೆಲ್ಲರೂ ಕೂಡಿಕೊಂಡು ಹಣ ಸಂಗ್ರಹ ಮಾಡಿಕೊಂಡು ಚುನಾವಣಾ ಪೂರ್ವದಲ್ಲಿ ಈ ಸರ್ಕಾರವನ್ನು ನಾವು ಮ್ಯಾನೇಜ್ ಮಾಡಿದ್ದೇವೆ ಎಂದು ಮಾತನಾಡುತ್ತಾರೆ. ಅದನ್ನು ನಾನು ಒಪ್ಪುವುದಿಲ್ಲ. ಖಾಸಗಿ ಕಾರ್ಖಾನೆಗಳವರು ಎಲ್ಲೋ ಮಾತನಾಡಿರಬಹುದು, ಅವರು ಮಾತನಾಡಿಕೊಳ್ಳಲಿ. ಅದನ್ನು ನೀವೂ ಒಪ್ಪುವುದಿಲ್ಲ, ಅದು ನನಗೆ ಗೊತ್ತಿದೆ. ಆದರೆ ಏಕೆ ನಿಮ್ಮ ಮೇಲೆ ನಮಗೆ doubt ಪ್ರಾರಂಭವಾಗಿದೆ ಎಂದರೆ ಬೆಳಗಾವಿಯಲ್ಲಿ ಅಧಿವೇಶನ ನಡೆದಂಥ ಸಂದರ್ಭದಲ್ಲಿ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಂಡಾಗ ಈ ಸರ್ಕಾರ ಎಚ್ಚೆತ್ತುಕೊಳ್ಳಲಿಲ್ಲ. ಕಾರ್ಖಾನೆಗಳ ಕಡೆಯಿಂದ ನಾವು 2,500 ರೂಪಾಯಿಗಳನ್ನು ಕೊಡಿಸುತ್ತೇವೆ, ಸರ್ಕಾರದಿಂದ 150 ರೂಪಾಯಿಗಳನ್ನು ಕೊಡುತ್ತೇವೆ ಎಂದು ಭರವಸೆ ಕೊಟ್ಟರು. ಒಟ್ಟು 2,650 ರೂಪಾಯಿಗಳನ್ನು ರೈತನಿಗೆ ನೇರವಾಗಿ ಮುಟ್ಟಿಸುವಂಥ ಕೆಲಸವನ್ನು ಈ ಸರ್ಕಾರ ಮಾಡುತ್ತಿದೆ ಎನ್ನುವ ಭರವಸೆಯನ್ನು ಮೂಡಿಸಿದರು.

ನೀವು ಭರವಸೆ ಕೊಟ್ಟು ಎಷ್ಟು ದಿವಸವಾಯಿತು, ಸ್ವಾಮಿ ? ಬೆಳಗಾವಿ ಅಧಿವೇಶನ ಮುಗಿದು ಸುಮಾರು ಏಳು ತಿಂಗಳಾಯಿತು. ಇದುವರೆಗೆ ಯಾವುದೇ ಕಾರ್ಖಾನೆಯ ಮಾಲೀಕ ರೈತರಿಗೆ ಬಿಲ್‌ಅನ್ನು ಪಾವತಿ ಮಾಡಲಿಲ್ಲ. ಯಾವುದೇ ಕಾರ್ಖಾನೆಯ ಮಾಲೀಕರು ಮುಂದೆ ಬಂದು, ನಾವು ಸರ್ಕಾರದ ಆದೇಶವನ್ನು ಪಾಲನೆ ಮಾಡುತ್ತೇವೆ ಎನ್ನುವ ಮಾತನ್ನೂ ಹೇಳಲಿಲ್ಲ. ಆದರೆ ನನಗೆ ಒಂದು ಸಂತೋಷದ ವಿಷಯವೆಂದರೆ, ಸುಮಾರು ಎಂಟು ತಿಂಗಳು ನಿದ್ರಾವಸ್ಥೆಯಲ್ಲಿದ್ದ ಸರ್ಕಾರ, ಮೊನ್ನೆ ಈ ಇಲಾಖೆಯ ಜವಾಬ್ದಾರಿಯನ್ನು ತೆಗೆದುಕೊಂಡು ಮಹದೇವ ಪ್ರಸಾದ್‌ರವರು ಒಂದು ಸ್ಟೇಟ್‌ಮೆಂಟ್ ಮಾಡಿದರು. ಯಾವ ಕಾರ್ಖಾನೆಯವರು ರೈತರಿಗೆ ಹಣ ಕೊಡುವುದಿಲ್ಲ. ಸರ್ಕಾರದ ಆದೇಶವನ್ನು ಪಾಲನೆ ಮಾಡುವುದಿಲ್ಲ, ಅಂಥವರ ಮೇಲೆ ನಾವು ಕಠಿಣವಾಗಿರುವಂಥ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎನ್ನುವಂಥ ಒಂದು ಧೈರ್ಯದ ಮಾತನ್ನು ಅವರು ಹೇಳಿದ್ದಾರೆ. ಮಹದೇವ ಪ್ರಸಾದ್‌ರವರು ಏನಾದರೂ ಆ ಸಾಹಸಕ್ಕೆ ಕೈ ಹಾಕಿದರೆ, ಅವರಲ್ಲಿರುವ ಎರಡೂ ಇಲಾಖೆಗಳು ಅವರ ಕೈತಪ್ಪಿ ಹೋಗುವ ಸನ್ನಿವೇಶ ಬರಬಹುದು ಎಂದು ನನಗನಿಸುತ್ತಿದೆ. ಹಾಗಾಗಿ ನನಗೆ ಅವರ ಮೇಲೆ ಅನುಕಂಪವಿದೆ ಪಾಪ ನೀವೇನೋ ರೈತರ ಬಗ್ಗೆ ಕಾಳಜಿಯನ್ನಿಟ್ಟುಕೊಂಡು ಆ ಮಾತನ್ನು ಹೇಳಿದ್ದೀರಿ. ರೈತರಿಗೆ ಹಣ ಕೊಡಿಸುತ್ತೇನೆ, ಕಾರ್ಖಾನೆಗಳವರನ್ನು ಸುಮ್ಮನೆ ಬಿಡುವುದಿಲ್ಲ ಎಂದು ಹೇಳಿದ್ದೀರಿ. ನೀವೇನಾದರೂ ಗಟ್ಟಿಯಾಗಿ ನಿಂತು ಆ ಕೆಲಸ ಮಾಡಿದರೆ ನೀವು ಮೈಸೂರಿಗೆ ಹೋಗುವಂಥ ಕಾಲ ಸಮೀಪಕ್ಕೆ ಬರುತ್ತದೆ ಎನ್ನುವುದನ್ನು ನೀವು ಮರೆಯಬಾರದು. ನಿಮ್ಮನ್ನು ಸಂಪುಟದಿಂದ ಕಿತ್ತು ಹಾಕುತ್ತಾರೆ. ಏಕೆಂದರೆ, ಈ ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳ ಮಾಲೀಕರಿಗೆ ಅಂಥ ಶಕ್ತಿಯಿದೆ. ಈ ಸರ್ಕಾರವನ್ನು ನಿಯಂತ್ರಣ ಮಾಡುವಂಥ ಶಕ್ತಿ ಇರುವಂಥ ಮಾಲೀಕರಿದ್ದಾರೆ. ಒಬ್ಬೊಬ್ಬರು ನಾಲ್ಕೈದು ಕಾರ್ಖಾನೆಗಳನ್ನು ಇಟ್ಟಿರುವ ಅವರ ಶಕ್ತಿಯ ಮುಂದೆ ನಿಮ್ಮ ಶಕ್ತಿ ನಿಲ್ಲುವುದಿಲ್ಲ. ಇದು ಕೇವಲ ಟೀಕೆ-ಟಿಪ್ಪಣಿ ಮಾಡುವಂಥ ಪ್ರಶ್ನೆಯಲ್ಲ. ಸರ್ಕಾರ ನಮಗೆ ಏನಾದರೂ ಮಾಡಬಹುದು ಎನ್ನುವ ನಿರೀಕ್ಷೆಯನ್ನಿಟ್ಟುಕೊಂಡು ರಾಜ್ಯದ ಮೂಲೆಮೂಲೆಗಳಿಂದ ಕಬ್ಬು ಬೆಳೆಗಾರರು ಇಲ್ಲಿಗೆ ಬಂದಿದ್ದಾರೆ. ಇಂಥ ವಿಚಾರಕ್ಕಾಗಿಯೇ ಕಳೆದ ವರ್ಷ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಂಡು ಸತ್ತಿದ್ದಾನೆ. ಇದಕ್ಕೆ ನೀವು ಅವಕಾಶ ಕೊಡಬಾರದು. ನೀವೆಲ್ಲರೂ ಸಹ ರೈತರ ಮತಗಳನ್ನು ಪಡೆದುಕೊಂಡು ಬಂದಿರತಕ್ಕವರಾಗಿದ್ದೀರಿ. ನೀವು ರೈತರ ಮಕ್ಕಳಾಗಿದ್ದೀರಿ. ಇಂಥ ವಿಷಯದಲ್ಲಿ ಪಕ್ಷಾತೀತವಾಗಿ ಎಲ್ಲರೂ ಪಾಲ್ಗೊಂಡು ಒಂದು ಉತ್ತಮವಾಗಿರುವಂಥ ಚರ್ಚೆಯಾಗಬೇಕಾಗಿದೆ.

ಶ್ರೀ ರಾಜೀವ್ ಪಿ. (ಕುಡಚಿ) : ಮಹದೇವ ಪ್ರಸಾದ್‌ರವರು ರೈತರಿಗೆ ಅನುಕೂಲವಾಗುವ ಹಾಗೆ ಘೋಷಣೆ ಮಾಡಬೇಕೆಂದು ಬಂದಿದ್ದರು. ಆದರೆ ಈಗ ನಿಮ್ಮ ಮಾತನ್ನು ಕೇಳಿ ಬಹುಶಃ ಹೆದರಿಬಿಡುತ್ತಿದ್ದಾರೆನೋ ಎಂದು ನನಗನ್ನಿಸುತ್ತಿದೆ.

ಶ್ರೀ ವೈ.ಎನ್. ರುದ್ರೇಶ್ ಗೌಡ : ಹಿಂದಿನ ಸರ್ಕಾರ ಐದು ವರ್ಷ ನಿದ್ರಾವಸ್ಥೆಯಲ್ಲಿತ್ತು.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಕಬ್ಬು ಎಂದರೆ ಏನೆಂದು ನಿಮಗೆ ಗೊತ್ತಿಲ್ಲ, ನೀವು ಕುಳಿತುಕೊಳ್ಳಿ, ನಮ್ಮ ಕಡೆ ನಿಮ್ಮಂಥವರಿಗೆ "ತೊಗಲಾಗೇನು ಬಲ್ಲ ತಿಮ್ಮಣ್ಣಂಗೆ" ಎಂದು ಹೇಳುತ್ತಾರೆ.

ಉಪಾಧ್ಯಕ್ಷರು : ರುದ್ರೇಶ್‌ಗೌಡರೇ ಅವರು ಯೀಲ್ಡ್ ಆಗಿಲ್ಲ, ನೀವು ಕುಳಿತುಕೊಳ್ಳಿ, ಸವದಿಯವರೇ ನೀವು ಮಾತನಾಡಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ಇನ್ನೊಬ್ಬ ನಾಯಕರು ಹೇಳಿದರು. ಎಸ್.ಎ.ಪಿ. ಮತ್ತು ಎಫ್.ಆರ್.ಪಿ ಪ್ರಕಾರ ಕೇಂದ್ರ ಸರ್ಕಾರ ನಿಗದಿ ಮಾಡಿರುವಂಥ ಬೆಲೆ ಇದು. ನಾನು ಸನ್ಮಾನ್ಯ ಸಕ್ಕರೆ ಸಚಿವರ ಗಮನಕ್ಕೆ ತರುತ್ತೇನೆ, ಈ ಎಫ್.ಆರ್.ಪಿ. ರೇಟ್ ಫಿಕ್ಸ್ ಆಗಿರುವುದು ಕಳೆದ ವರ್ಷದ್ದು. ಇದು ಈ ವರ್ಷದ್ದಲ್ಲ. ಈ ವರ್ಷದ್ದು ಈಗ ಆಗುತ್ತಿದೆ. ಕಳೆದ ವರ್ಷ ಫಿಕ್ಸ್ ಆಗಿರುವಂಥ ಎಫ್.ಆರ್.ಪಿ ಪ್ರಕಾರ ಯಾವ ಯಾವ ಕಾರ್ಖಾನೆಗಳು ಹಣವನ್ನು ಸಂದಾಯ ಮಾಡಿಲ್ಲ. ಈಗ ನೀವು ಎಸ್.ಎ.ಪಿ. ಯನ್ನು ಬಿಡಿ, ಎಸ್.ಎ.ಪಿ. ಗೋಸ್ಕರವೇ ಕಾರ್ಖಾನೆಗಳ ಮಾಲೀಕರು ಕೋರ್ಟಿಗೆ ಹೋಗಿರಬಹುದು, ಕೋರ್ಟಿಗೆ ಹೋಗುವಂಥ ಸಂದರ್ಭದಲ್ಲಿ ಏನೇನಾಗಿದೆ ಎನ್ನುವುದು ನನಗೆ ಗೊತ್ತಿದೆ. ಖಾಸಗಿ ಕಾರ್ಖಾನೆಗಳು ಮತ್ತು ಸರ್ಕಾರದ ಮಧ್ಯೆ ಏನೇನು ಮಾತುಕತೆಯಾಯಿತು, ಮಾತುಕತೆಯಾದಂಥ ಸಂದರ್ಭ ಮತ್ತು ಕಾರ್ಖಾನೆಗಳ ಮಾಲೀಕರು ಕೋರ್ಟಿಗೆ ಹೋದಂಥ ವಿಷಯವನ್ನು ನಾನು ಇನ್ನೊಂದು ಸಲ ಸಂದರ್ಭ ಬಂದಾಗ ಚರ್ಚೆ ಮಾಡುತ್ತೇನೆ. ಆದರೆ ಕಳೆದ ವರ್ಷ ಕೇಂದ್ರ ಸರ್ಕಾರ ನಿಗದಿ ಮಾಡಿರುವಂಥ ಎಫ್.ಆರ್.ಪಿ ಬೆಲೆಯನ್ನು ಎಷ್ಟು ಕಾರ್ಖಾನೆಗಳ ಮಾಲೀಕರು ಸಂದಾಯ ಮಾಡಿದ್ದಾರೆ ? ರಾಜ್ಯದಲ್ಲಿರುವಂಥ ಕಾರ್ಖಾನೆಗಳಲ್ಲಿ ಎರಡು ಸಕ್ಕರೆ ಕಾರ್ಖಾನೆಗಳು ಮಾತ್ರ ಎಫ್.ಆರ್.ಪಿ.ಯನ್ನು ಸಂದಾಯ ಮಾಡಿವೆ. ಅವುಗಳೆಂದರೆ, ಬೆಳಗಾವಿಯ ಅಥಣಿಯಲ್ಲಿರುವ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ ಮತ್ತು ಬೆಳಗಾವಿಯ ಚಿಕ್ಕೋಡಿಯಲ್ಲಿರುವ ದೂದ್ ಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆ. ಇವೆರಡೂ ಸಹ ಸಹಕಾರಿ ತಳಹದಿಯ ಮೇಲಿರುವ ಕಾರ್ಖಾನೆಗಳು. ಕಳೆದ ವರ್ಷ ನಿಗದಿ ಮಾಡಿದ್ದಂಥ ಎಫ್.ಆರ್.ಪಿ. ಗಿಂತ 50 ರೂಪಾಯಿಗಳನ್ನು ಹೆಚ್ಚು ಮಾಡಿರುವಂಥ ಒಂದೇ ಒಂದು ಕಾರ್ಖಾನೆಯೆಂದರೆ ಅದು ಅಥಣಿಯಲ್ಲಿರುವ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ. ಸಹಕಾರಿ ತಳಹದಿಯ ಮೇಲಿರುವ ಕಾರ್ಖಾನೆಗಳಿಗೆ ನಿಗದಿಪಡಿಸಿರುವ ದರವನ್ನು ಕೊಡಲು ಸಾಧ್ಯವಾಗುತ್ತದೆ. ಅದೂ ಸಹ ಅಲ್ಲಿ ಡಿಸ್ಟಿಲರಿ ಇಲ್ಲ, ಕೋ–ಜನರೇಷನ್ ಇಲ್ಲ, ಕೇವಲ ಸಕ್ಕರೆಯನ್ನು ಮಾತ್ರ ಉತ್ಪಾದನೆ ಮಾಡಿ, ನಿಗದಿಪಡಿಸಿದ ದರವನ್ನು ಕೊಡಲು ಸಹಕಾರಿ ತಳಹದಿಯ ಮೇಲಿರುವ ಕಾರ್ಖಾನೆಗಳಿಗೆ ಸಾಧ್ಯವಾಗಿದೆ. ಆದರೆ ಖಾಸಗಿ ಸಕ್ಕರೆ ಕಾರ್ಖಾನೆಗಳವರು ಡಿಸ್ಟಿಲರಿ ಮಾಡುತ್ತಾರೆ, ಕೋ–ಜನರೇಷನ್ ವಿದ್ಯುತ್ ಉತ್ಪಾದನೆ ಮಾಡುತ್ತಾರೆ,

ಇವರು ಸರ್ಕಾರದ ಸವಲತ್ತುಗಳೆಲ್ಲವನ್ನೂ ಪಡೆದುಕೊಳ್ಳುತ್ತಾರೆ. ಆದರೂ ಕೂಡ ಇವತ್ತು ಅವರು ನಿಗದಿ ಮಾಡಿರುವಂಥ ಎಫ್.ಆರ್.ಪಿ ಪ್ರಕಾರ ಹಣವನ್ನು ರೈತರಿಗೆ ಸಂದಾಯ ಮಾಡಿಲ್ಲ. ನಾನು ಸನ್ಮಾನ್ಯ ಸಕ್ಕರೆ ಸಚಿವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ನೀವು ನಿಷ್ಠೂರವಾಗಬೇಕಾಗುತ್ತದೆ. ಜೀವನದಲ್ಲಿ ಒಂದು ಸಲ ಅಧಿಕಾರ ಬರುತ್ತದೆ ಹೋಗುತ್ತದೆ. ಇದು ಎಲ್ಲರಿಗೂ ಗೊತ್ತಿರುವಂಥಾದ್ದು. ಆಯುಷ್ಯ, ಅಧಿಕಾರ ಮತ್ತು ಅಂತಸ್ತು ಯಾವ ವ್ಯಕ್ತಿಗೂ ಶಾಶ್ವತವಾಗಿರುವುದಿಲ್ಲ. ಜೀವನದಲ್ಲಿ ಒಂದು ಸಲ ಬರುತ್ತವೆ. ನಿಮಗೆ ಈ ಜೀವನದಲ್ಲಿ ಒಂದು ಸಲ ಅಂಥ ಅವಕಾಶ ಸಿಕ್ಕದೆ, ರೈತರಿಗೆ ಕಲ್ಯಾಣ ಮಾಡುವಂಥ ಇಲಾಖೆ ನಿಮಗೆ ಸಿಕ್ಕಿದೆ, ಅದು ಸಹಕಾರಿ ಇಲಾಖೆಯಾಗಿರಬಹುದು, ಅದರ ಜೊತೆಗೆ ಸಕ್ಕರೆ ಇಲಾಖೆಯಾಗಿರಬಹುದು. ಸಹಕಾರಿ ತಳಹದಿಯ ಮೇಲಿರುವ ಸಕ್ಕತೆ ಕಾರ್ಖಾನೆಗಳ ಅಧ್ಯಕ್ಷರು ಮತ್ತು ಎಂ.ಡಿ.ಗಳನ್ನು disqulify ಮಾಡಿ. ಎರಡೂ ಇಲಾಖೆಗಳೂ ನಿಮ್ಮಲ್ಲಿಯೇ ಇವೆ, ನಿಮಗೆ ಅಧಿಕಾರವಿದೆ. ಮೊದಲು ಅಂಥ ಅಧಿಕಾರವಿರಲಿಲ್ಲ. ಒಬ್ಬರಲ್ಲಿ ಸಹಕಾರಿ ಇಲಾಖೆ ಇದ್ದರೆ, ಇನ್ನೊಬ್ಬರ ಕಡೆ ಸಕ್ಕರೆ ಇಲಾಖೆ ಇರುತ್ತಿತ್ತು. ನಿಮ್ಮ ಫೈಲ್ ಅಲ್ಲಿಗೆ ಹೋಗಬೇಕು, ಅವರ ಫೈಲ್ ಇಲ್ಲಿಗೆ ಬರಬೇಕು ಎನ್ನುವಂತೆ ಇತ್ತು. ಆದರೆ ಈಗ ನಿಮಗೆ ಒಳ್ಳೆಯ ಅವಕಾಶ ಸಿಕ್ಕದೆ. ಮೊದಲನೆಯದಾಗಿ ನೀವು ಸಹಕಾರಿ ತಳಹದಿಯ ಮೇಲಿರುವ ಎಲ್ಲ ಸಕ್ಕರೆ ಬೋರ್ಡ್‌ಗಳನ್ನು ಸೂಪರ್‌ಸೀಡ್ ಮಾಡಿ, ಅವುಗಳನ್ನು ನಿಮ್ಮ ವಶಕ್ಕೆ ಪಡೆದುಕೊಳ್ಳಿ, ನಿಮ್ಮದೇ ಆಗಿರುವಂಥ ಅಧಿಕಾರಿಗಳನ್ನು ಅಲ್ಲಿಗೆ ಹಾಕಿ 2,650 ರೂಪಾಯಿಗಳನ್ನು ಕೊಡುತ್ತೇವೆ ಎಂದು ರಾಜ್ಯದ ರೈತರಿಗೆ ನೀವೇನು ಭರವಸೆ ಕೊಟ್ಟಿದ್ದೀರಿ ಘೋಷಣೆ ಮಾಡಿದ್ದೀರಿ ಅದರಂತೆ ನೀವು ರೈತರಿಗೆ ಹಣವನ್ನು ಸರ್ಕಾರದ ಖಜಾನೆಯಿಂದ ಕೊಡಿ. ಆ ಕಾರ್ಖಾನೆಗಳು ನಿಮ್ಮ ಹದ್ದುಬಸ್ತಿನಲ್ಲಿರುತ್ತವೆ. ಆ ಮೇಲೆ ನೀವು ಕೊಟ್ಟಿರುವಂಥ ಅಸಲು ಮತ್ತು ಬಡ್ಡಿಯನ್ನು ಆ ಕಾರ್ಖಾನೆಗಳಿಂದ ವಾಪಸ್ಸು ಪಡೆದುಕೊಳ್ಳುವಂಥ ಕೆಲಸವನ್ನು ಮಾಡಬೇಕು. ಎರಡನೇಯದಾಗಿ, ಖಾಸಗಿ ಸಕ್ಕರೆ ಕಾರ್ಖಾನೆಗಳವರು ಅವರದೇ ಆದಂಥ ಒಂದು ಒಕ್ಕೂಟವನ್ನು ರಚನೆ ಮಾಡಿಕೊಂಡಿದ್ದಾರೆ. ಅದನ್ನು ನೀವು ಎಷ್ಟರ ಮಟ್ಟಿಗೆ ಮಣಿಸುತ್ತೀರಿ, ಎಷ್ಟರ ಮಟ್ಟಿಗೆ ಅವರನ್ನು ನೀವು ಹತೋಟಿಗೆ ತರುತ್ತೀರಿ ಎನ್ನುವ ಅನುಮಾನ ಇವತ್ತು ರಾಜ್ಯದಲ್ಲಿರುವ ಎಲ್ಲ ಕಬ್ಬು ಬೆಳೆಗಾರರಿಗೆ ಬಂದುಬಿಟ್ಟಿದೆ. ಏಕೆಂದರೆ, ಏಳು ತಿಂಗಳ ಹಿಂದೆ ಆಗಿರುವಂಥ ಮಾತನ್ನು ನೀವು ಉಳಿಸಿಕೊಳ್ಳದೇ ಇರುವುದರಿಂದ, ಈ ಸಂದರ್ಭದಲ್ಲಿ ಸರ್ಕಾರ ತನ್ನ ಮಾತನ್ನು ಯಾವ ರೀತಿ ಉಳಿಸಿಕೊಳ್ಳಬಹುದು ಎನ್ನುವ ಅನುಮಾನವಿದೆ. ಸರ್ಕಾರ ತನ್ನ ಮಾತನ್ನು ಉಳಿಸಿಕೊಳ್ಳಬಹುದು ಎನ್ನುವ ನಿರೀಕ್ಷೆಯನ್ನಿಟ್ಟುಕೊಂಡು ರಾಜ್ಯದ ಮೂಲೆಮೂಲೆಗಳಿಂದ ಕಬ್ಬು ಬೆಳೆಗಾರರು ಇವತ್ತು ಬೆಂಗಳೂರಿಗೆ ಬಂದಿದ್ದಾರೆ. ಅವರದು ಒಂದು ಆಶಯ ಇದೆ. ಬೆಳಗಾವಿಯಲ್ಲಿ ಆಗಿರುವಂಥ ತಪ್ಪನ್ನು ಈ ಸರ್ಕಾರ ಪುನರಾವರ್ತನೆ ಮಾಡುವುದಿಲ್ಲ, ನಿಜವಾಗಿಯೂ ನಮಗೆ

ಏನಾದರೊಂದು ಭರವಸೆಯನ್ನು ಕೊಟ್ಟು, ಹಣವನ್ನು ಕೊಟ್ಟು ನಮ್ಮನ್ನು ಊರಿಗೆ ವಾಪಸ್ಸು ಕಳುಹಿಸುತ್ತಾರೆ ಎನ್ನುವ ನಿರೀಕ್ಷೆಯನ್ನಿಟ್ಟುಕೊಂಡು ಅವರು ಇವತ್ತು ಬೆಂಗಳೂರಿಗೆ ಬಂದಿದ್ದಾರೆ. ನನಗೆ ಒಂದು ಆಶಯ ಇದೆ. ದಿಟ್ಟತನವಿರುವಂಥ ಒಬ್ಬ ಸಕ್ಕರೆ ಸಚಿವರು ಇವತ್ತು ನಮಗೆ ಸಿಕ್ಕಿರುವುದರಿಂದ, ಅವರು ತಮ್ಮ ಉತ್ತರದಲ್ಲಿ ಹೇಳಬಹುದು, ಈ ಅಧಿವೇಶನ ಮುಗಿಯುವುದರೊಳಗಾಗಿ ಸರ್ಕಾರದಿಂದ ಕೊಡತಕ್ಕಂಥ ಬಾಕಿ ಹಣ ಮತ್ತು ಕಾರ್ಖಾನೆಗಳವರು ಕೊಡಬೇಕಾದಂಥ ಬಾಕಿ ಹಣವನ್ನು ಸಂಪೂರ್ಣವಾಗಿ ಸರ್ಕಾರದಿಂದ ಕೊಡುತ್ತೇವೆ. ಖಾಸಗಿ ಸಕ್ಕರೆ ಕಾರ್ಖಾನೆಗಳ ಮಾಲೀಕರನ್ನು ಮತ್ತು ಸಹಕಾರಿ ತಳಹದಿಯ ಮೇಲಿರುವಂಥ ಎಲ್ಲ ಕಾರ್ಖಾನೆಗಳ ಮಾಲೀಕರನ್ನು ಜೈಲಿಗೆ ಹಾಕಿಯಾದರೂ ಸಹ ನಾವು ಹಣ ವಸೂಲು ಮಾಡುತ್ತೇವೆ ಎನ್ನುವ ಒಂದು ಹೇಳಿಕೆ ತಮ್ಮಿಂದ ಬರಲಿ ಎನ್ನುವ ನಿರೀಕ್ಷೆಯಲ್ಲಿ ನಾನೂ ಕೂಡ ಇದ್ದೇನೆ. ನಿಮ್ಮ ಮಾತನ್ನು ಉಳಿಸಿಕೊಳ್ಳಬೇಕಾದರೆ, ಖಾಸಗಿ ಕಾರ್ಖಾನೆಗಳವರ ಲಾಬಿಗೆ ನೀವು ಒಳಗಾಗಿಲ್ಲ ಎನ್ನುವುದನ್ನು ಪ್ರೂವ್ ಮಾಡಬೇಕಾದರೆ ನೀವು ಸ್ಪಷ್ಟವಾಗಿ ಹೇಳಬೇಕು, ಆ ಹಣವನ್ನು ನಾವು ಕೊಡುತ್ತೇವೆ. ನಂತರ ಆ ಕಾರ್ಖಾನೆ ಮಾಲೀಕರನ್ನು ಜೈಲಿಗೆ ಆದರೂ ಸಹ ಹಾಕಿ ಆ ಹಣವನ್ನು ವಸೂಲಿ ಮಾಡುತ್ತೇವೆ ಎನ್ನತಕ್ಕಂಥ ಒಂದು statement ನಿಮ್ಮಿಂದ ಬಂದಿದ್ದೇ ಆದರೆ ನಾವೇ ಹೋಗಿ ಆ ರೈತರ ಕೈಕಾಲು ಮುಗಿದು ನೀವು ಊರಿಗೆ ಹೋಗಿ, ಸರ್ಕಾರದ ಮೇಲೆ ಭರವಸೆ ಇಡೋಣ, ಆ ಹಣ ತೆಗೆದುಕೊಂಡು ನಾವೂ ಕೂಡ ವಿಧಾನಸಭೆ ಮುಗಿಸಿಕೊಂಡು ಊರುಗಳಿಗೆ ಬರುತ್ತೇವೆ ಎನ್ನುವ ಮಾತನ್ನು ಆ ರೈತರುಗಳಿಗೆ ಹೇಳುತ್ತೇವೆ. ಅದಕ್ಕೆ ದಯಮಾಡಿ, ಸರ್ಕಾರ ಬಹಳ ದಿಟ್ಟತನದ ನಿಲುವನ್ನು ತೆಗೆದುಕೊಳ್ಳಿ. ಇವತ್ತು ಆ ಕಡೆ ಈ ಕಡೆ ಎನ್ನುವ ಪ್ರಶ್ನೆಯಲ್ಲ. ನಮ್ಮ ಕೋನರೆಡ್ಡಿಯವರು ಬಿಜೆಪಿಯವರದ್ದು ಮತ್ತು ಕಾಂಗ್ರೆಸ್‌ನವರದ್ದಷ್ಟೇ ಇಲ್ಲಿ ಕಾರ್ಖಾನೆಗಳಿವೆ ಎಂದು ಹೇಳಿದರು. ಎಲ್ಲಾ ಪಕ್ಷಗಳವರದ್ದೂ ಕಾರ್ಖಾನೆಗಳಿವೆ. ಇಲ್ಲಿ ಪಕ್ಷಾತೀತವಾಗಿ ನಾವು ಆಲೋಚನೆ ಮಾಡಬೇಕು. ಆ ಕಬ್ಬು ಬೆಳೆಗಾರರು ಯಾವುದೇ ಪಕ್ಷಕ್ಕೆ ಸೀಮಿತವಾದವರಲ್ಲ. ಉದಾಹರಣೆ ನೋಡಿದ್ದೇವೆ. ಕಳೆದ ಚುನಾವಣೆಯ ಸಂದರ್ಭದಲ್ಲಿ ಸಕ್ಕರೆ ಸಚಿವರಾಗಿದ್ದಂಥ ಪ್ರಕಾಶ್ ಹುಕ್ಕೇರಿಯವರು, ನಾನು ರೈತರಿಗೆ ಖಂಡಿತವಾಗಿಯೂ ಸಹಾಯ ಮಾಡುತ್ತೇನೆ, ಹಣ ಕೊಡಿಸುತ್ತೇನೆ ಎಂದು ಹೇಳಿದ್ದ ಒಂದೇ ಭರವಸೆಯನ್ನು ಇಟ್ಟುಕೊಂಡು ಆ ಭಾಗದಲ್ಲಿರತಕ್ಕಂಥ ಕಬ್ಬು ಬೆಳೆಗಾರರು ಅವರನ್ನು ಆಯ್ಕೆ ಮಾಡಿ ಇಲ್ಲಿಗೆ ಕಳುಹಿಸಿರತಕ್ಕಂಥದ್ದು. ಡಿ.ಕೆ. ಶಿವಕುಮಾರ್‌ರವರು ಎಲ್ಲಿಯೋ ಹೋದರು. ಅವರು, ನಾವು ಕತ್ತಿಯವರ ಜೊತೆಗೆ mingle ಆಗಿದ್ದೇವೆಯೇ ಎಂದು ಹೇಳಿದರು. ಕತ್ತಿಯವರು ಇಷ್ಟು ಹಣ ಕೊಡುವುದಕ್ಕಾಗುವುದಿಲ್ಲವೆಂದು ಒಂದೇ statement ಮಾಡಿದರು. ಅಷ್ಟು ಹಣ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ ಒಂದೇ ಒಂದು ಮಾತಿಗೆ ಅವರ ಸೋದರನನ್ನು ಸೋಲಿಸಿದ ಉದಾಹರಣೆ ಆ ಕಬ್ಬು ಬೆಳೆಗಾರರದ್ದು ಇದೆ.

ನಾನು ಪಕ್ಷಾತೀತವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ರೈತರು ಯಾವತ್ತೂ ನಿರ್ಣಯಗಳನ್ನು ಮಾಡುತ್ತಾರೆ. ಆ ರೈತರ ಭರವಸೆಗಳನ್ನು ನಾವು ಯಾವತ್ತು ಈಡೇರಿಸುವುದಿಲ್ಲವೋ ಆ ರೈತ ತಿರುಗಿ ಬಿದ್ದಿದ್ದೇ ಆದರೆ ಬಹುಶಃ ಆ ಕಡೆ ಕುಳಿತವರು ಇರಬಹುದು, ಈ ಕಡೆ ಕುಳಿತವರು ಇರಬಹುದು ಅಥವಾ ಎಲ್ಲೇ ಕುಳಿತವರು ಇರಬಹುದು, ಅವರಿಗೆ ತಕ್ಕ ಪಾಠವನ್ನು ಕಲಿಸುವಂಥ ಕಬ್ಬು ಬೆಳೆಗಾರರು ಈ ರಾಜ್ಯದಲ್ಲಿದ್ದಾರೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ನೀವು ನನಗೆ ಸಮಯ ಕೊಟ್ಟಿದ್ದೀರಿ. ನಾನು ಹೆಚ್ಚು ಮಾತನಾಡಲಿಕ್ಕೆ ಹೋಗುವುದಿಲ್ಲ. ಇನ್ನೂ ಒಂದು ತಿಂಗಳು ಈ ಅಧಿವೇಶನ ನಡೆಯುತ್ತದೆ. ಇವತ್ತು ಪ್ರಾರಂಭವಾಗಿದೆ. ನಿಮ್ಮ ಮೂಲಕ ನನ್ನದೊಂದೇ ವಿನಂತಿ, ಈ ರಾಜ್ಯದಲ್ಲಿರತಕ್ಕಂಥ 3 ಕೋಟಿ 80 ಲಕ್ಷ ಕಬ್ಬು ಬೆಳೆಗಾರರಿಗೆ ಸರ್ಕಾರದಿಂದ ಬರತಕ್ಕಂಥ ಬಾಕಿ ಹಣವನ್ನು ಮತ್ತು ಕಾರ್ಖಾನೆ ಮಾಲೀಕರಿಂದ ಕೊಡತಕ್ಕಂಥ ಹಣವನ್ನು ನೀವು ಖಂಡಿತವಾಗಿಯೂ ಈ ಅಧಿವೇಶನ ಮುಗಿಯುವುದರೊಳಗಾಗಿ ಕೊಡಿಸುತ್ತೇವೆ, ಅದರ ಬಗ್ಗೆ ವಿರೋಧ ಪಕ್ಷದವರು ಕಾಳಜಿ ಮಾಡಬೇಡಿ ಎಂದು ರೈತರಿಗೆ ಭರವಸೆ ಮೂಡಿಸುವುದರ ಜೊತೆಗೆ ನಮಗೂ ಭರವಸೆಯನ್ನು ಮೂಡಿಸುತ್ತೀರಿ ಎನ್ನುವಂಥ ಆಶಯ ವ್ಯಕ್ತಪಡಿಸುತ್ತೇನೆ. ದಯಮಾಡಿ, ಮಹದೇವ ಪ್ರಸಾದ್‌ರವರು ಬಹಳ ದಿಟ್ಟತನದ ಹೆಜ್ಜೆಯನ್ನು ಇಡಬೇಕಾಗುತ್ತದೆ. ಏಕೆಂದರೆ, ನೀವು ಇಡೀ ರಾಜ್ಯದಲ್ಲಿ ಹೆಸರು ಗಳಿಸಿಕೊಳ್ಳಲಿಕ್ಕೆ ಅವಕಾಶವಿದೆ. ಅಧಿಕಾರದಲ್ಲಿ ಎಷ್ಟು ದಿವಸ ಇದ್ದೆ ಎನ್ನುವುದಕ್ಕಿಂತಲೂ ಇದ್ದಂಥ ಸಂದರ್ಭದಲ್ಲಿ ಈ ರಾಜ್ಯದೊಳಗೆ ಏನು ಮಾಡಿದ್ದೇನೆ ಎನ್ನುವಂಥ ಒಂದು ಇತಿಹಾಸದೊಳಗೆ ಬರೆಯುವಂಥ ಅವಕಾಶ ನಿಮಗೆ ಸಿಕ್ಕಿದೆ. ಖಾಸಗಿ ಕಾರ್ಖಾನೆಯವರು ಇರಲಿ ಅಥವಾ ಸಹಕಾರ ಕಾರ್ಖಾನೆಯವರು ಇರಲಿ. ಅವರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ FRP ತೆಗೆದುಕೊಳ್ಳಲಿಕ್ಕೆ ನಿಮಗೇನೂ ತೊಂದರೆ ಇಲ್ಲ. ನೀವು ಕೋರ್ಟ್‌ನಲ್ಲಿ stay ಇದೆ, stay vacate ಅಗಲಿ, ಆ ಮೇಲೆ ನಾವು ಹಣ ಕೊಡಿಸುವುದರ ಸಲುವಾಗಿ ಕ್ರಮ ತೆಗೆದುಕೊಳ್ಳುತ್ತೇವೆಂದು ಸಬೂಬು ಹೇಳಬಹುದು. ಆದರೆ ಈ FRP ಕೊಡತಕ್ಕಂಥ ಸಂದರ್ಭದಲ್ಲಿ ಯಾವುದೇ ಕೋರ್ಟ್‌ನ ನಿಬಂಧನೆ ಇಲ್ಲ. ಈ FRP ಪ್ರಕಾರ ಅವರು ಖಾಸಗಿಯವರಿರಲಿ ಅಥವಾ ಸಹಕಾರ ತಳಹದಿ ಮೇಲಿರುವವರು ಇರಲಿ FRP ಪ್ರಕಾರ ಮೊದಲು ಹಣ ಕೊಡಿಸಬೇಕು. ಆ ಹಣ ಕೊಡಿಸಿದ್ದಾದರೆ ಮೊದಲನೇ ಗಟ್ಟಿತನದ ಹೆಜ್ಜೆಯನ್ನು ನೀವು ಇಟ್ಟಿರಿ ಎನ್ನತಕ್ಕಂಥ ಕೀರ್ತಿಯನ್ನು, ಇಡೀ ರಾಜ್ಯದ ಕಬ್ಬು ಬೆಳೆಗಾರರು ನಿಮಗೆ ಒಂದು ಶ್ರೇಯಸ್ಸನ್ನು ಕೊಡುವಂಥ ಕೆಲಸ ಮಾಡುತ್ತಾರೆ. ಏಕೆಂದರೆ, ಪ್ರಕಾಶ್ ಹುಕ್ಕೇರಿಯವರಿಗೆ ಅಷ್ಟು ಧೈರ್ಯವಿರಲಿಲ್ಲ. ಏಕೆಂದರೆ ಮಾನ್ಯ ಮುಖ್ಯಮಂತ್ರಿಯವರು ತಮ್ಮ ಸಹಾಯಕ್ಕೆ ಬರುತ್ತಾರೋ, ಇಲ್ಲವೋ ಎಂದು ಹೆದರುತ್ತಿದ್ದರು. ಆದರೆ, ನನಗೆ ಭರವಸೆ ಇದೆ. ಮಾನ್ಯ ಮುಖ್ಯಮಂತ್ರಿಯವರು ಮತ್ತು ನೀವು ಒಂದೇ

ಜಿಲ್ಲೆಯವರಾಗಿರುವುದರಿಂದ ಮತ್ತು ಮೂಲತಃ ಒಂದೇ ಕಡೆಯಿಂದ ಬಂದವರು, ಒಂದೇ ಮನಸ್ಸಿರುವವರು. ಒಂದೇ ನಿಲುವು ಇರುವವರು. ಯಾವುದೇ ಕಾರ್ಯಗಳನ್ನು ಮಾಡಿದರೂ ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಹದೇವ ಪ್ರಸಾದ್‌ರವರು ಸೇರಿ ಮಾಡುತ್ತಾರೆ ಎನ್ನುವ ಇಡೀ ರಾಜ್ಯದೊಳಗೆ ಒಂದು ಪ್ರಚಾರವಿದೆ. ನಿಮ್ಮ ಮಾತನ್ನು ಅವರು ಮೀರುವುದಿಲ್ಲ. ಅವರ ಮಾತನ್ನು ನೀವು ಮೀರುವುದಿಲ್ಲವೆನ್ನತಕ್ಕಂಥದ್ದು ಇಡೀ ರಾಜ್ಯದಲ್ಲಿ ಕಿವಿ ಮಾತಾಗಿದೆ. ಅದಕ್ಕೆ ದಯಮಾಡಿ ಸನ್ಮಾನ್ಯ ಮುಖ್ಯಮಂತ್ರಿಯವರೆ, ಅವರೇನು ಒಂದು ನಿಲುವು ತೆಗೆದುಕೊಳ್ಳುತ್ತಾರೆ, ಆ ನಿಲುವಿಗೆ ಯಾವುದೂ ಅಡ್ಡ ಬರುವುದಕ್ಕೆ ಹೋಗಬೇಡಿ. ಅವರು ಇನ್ನು ಎರಡೇ ನಿಮಿಷಗಳಲ್ಲಿ ಹೇಳುವವರಿದ್ದಾರೆ. ಈ ರಾಜ್ಯದಲ್ಲಿರತಕ್ಕಂಥ ಕಾರ್ಖಾನೆ ಮಾಲೀಕರು ಸರ್ಕಾರದ ಆದೇಶವನ್ನು ಉಲ್ಲಂಘನೆ ಮಾಡಿರತಕ್ಕಂಥ ಮಾಲೀಕರನ್ನು ನಾನು ಜೈಲಿಗೆ ಹಾಕುತ್ತೇನೆ ಎನ್ನುವ ಮಾತನ್ನು ಹೇಳುವವರಿದ್ದಾರೆ. ಅದಕ್ಕೆ ದಯಮಾಡಿ ನೀವು ಅಡ್ಡ ಬರುವುದಕ್ಕೆ ಹೋಗಬೇಡಿ. ನಿಮ್ಮ ಮಂತ್ರಿಮಂಡಲದಲ್ಲಿ ಯಾರೇ ಇದ್ದರೂ ಸ್ವಲ್ಪ ದಿವಸ ತಡೆದು ಬರಲಿ. ಮತ್ತೆ ಬೇರೆಯವರನ್ನು ತೆಗೆದುಕೊಳ್ಳಿ, ಅವರು ಜೈಲಿಗೆ ಹೋಗಿ ಹೊರಗೆ ಬಂದಮೇಲೆ ಹಣ ಕೊಟ್ಟರೆ ಮತ್ತೆ ಅವರಿಗೆ double promotion ಕೊಟ್ಟು ಎರಡೆರಡು ಖಾತೆಗಳನ್ನು ಕೊಡುವಂಥ ಕೆಲಸ ಮಾಡಿ. ನನ್ನ ತಕರಾರು ಇಲ್ಲ. ಆದರೆ, ಇಡೀ ರಾಜ್ಯದ ರೈತರಿಗೆ ನೀವು ಭರವಸೆ ಕೊಟ್ಟಿದ್ದಿರಿ. ನೀವು ಎಲ್ಲ ಕಡೆ, ಕೊಟ್ಟ ಮಾತಿಗೆ ನಡೆಯುವಂಥ ಯಾವುದಾದರೂ ಸರ್ಕಾರ ಇದ್ದರೆ ಅದು ಸಿದ್ದರಾಮಯ್ಯನವರ ಸರ್ಕಾರ ಎಂದು ಅನೇಕ ಬಾರಿ ಹೇಳಿದ್ದೀರಿ. ಅದಕ್ಕೆ ನನಗೆ ಖುಷಿ ಇದೆ. ಏಕೆಂದರೆ, ಅಂಥ ಒಂದು ಗಟ್ಟಿ ನಿಲುವನ್ನು ತೆಗೆದುಕೊಳ್ಳತಕ್ಕಂಥ ಒಬ್ಬ ಮುಖ್ಯಮಂತ್ರಿ ಇರುವಾಗ ನಿಮ್ಮ ಕೈಕೆಳಗೆ ಕೆಲಸ ಮಾಡುವಂಥ ನಿಮ್ಮ ಜಿಲ್ಲೆಯವರು, ಅತ್ಯಂತ ಆತ್ಮೀಯರಾಗಿರುವ ಮಹದೇವ ಪ್ರಸಾದ್‌ರವರು ಇದ್ದಾರೆ, ಅವರು ಏನು ಕ್ರಮ ತೆಗೆದುಕೊಳ್ಳುತ್ತಾರಲ್ಲ, ದಯಮಾಡಿ ನೀವು ಅಡ್ಡ ಬರಬೇಡಿ ಅದಕ್ಕೆ Support ಮಾಡಿ. ಇಡೀ ರಾಜ್ಯದ ರೈತ ಕಬ್ಬು ಬೆಳೆಗಾರರು ನಿಮ್ಮ ಪರವಾಗಿ ನಿಲ್ಲುತ್ತಾರೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆದಷ್ಟು ಬೇಗನೆ ಆ ಕಾರ್ಖಾನೆ ಮಾಲೀಕರ ಜೊತೆಗೆ ನೀವು ಯಾವುದೇ ಮಾತುಕತೆ ಮಾಡಲಾರದೆ ನಿರ್ದಾಕ್ಷಿಣ್ಯವಾಗಿ, ಕಾನೂನಿನಲ್ಲಿ ಅವಕಾಶವಿದೆ, ನಮಗೆ ಆ High Court ನೆಪ ಹೇಳುವುದಕ್ಕೆ ಹೋಗಬೇಡಿ FRP ಪ್ರಕಾರ ಯಾರು ಬೆಲೆಯನ್ನು ಕೊಟ್ಟಿಲ್ಲ ಅವರ ಮೇಲೆ ಕೇಸ್ ಹಾಕಿ ಜೈಲಿಗೆ ಕಳುಹಿಸುವಂಥ ಕೆಲಸವನ್ನು ನೀವು ಮಾಡಬೇಕೆನ್ನುವ ಮಾತನ್ನು ಹೇಳುತ್ತೇನೆ. ಅದು ಲಕ್ಷ್ಮಣ ಸವದಿಯವರ ಕಾರ್ಖಾನೆಯಾದರೂ ಸಹ ಲಕ್ಷ್ಮಣ ಸವದಿಯಲ್ಲ, ಲಕ್ಷ್ಮಣ ಸವದಿಯ ಅಪ್ಪ ಕೊಡುವುದಿಲ್ಲವೆಂದರೂ ಲಕ್ಷ್ಮಣ ಸವದಿಯ ಅಪ್ಪನನ್ನೂ ಕೂಡ ತಂದು ಜೈಲಿಗೆ ಹಾಕುವ ಕೆಲಸವನ್ನು ಮಾಡಬೇಕು. ನಾನು ಒಬ್ಬರದೇ ಎಂದು ಹೇಳುತ್ತಿಲ್ಲ. ಯಾವುದೇ ಕಾರ್ಖಾನೆ ಇರಲಿ. ಅಥಣಿ ಕೃಷ್ಣ ಸಕ್ಕರೆ ಕಾರ್ಖಾನೆಯವರಿಗೆ FRP

ಕ್ಕಿಂತಲೂ ಹೆಚ್ಚು ಬೆಲೆ ಕೊಡಲಿಕ್ಕೆ ಸಾಧ್ಯವಾದಾಗ ಉಳಿದ ಕಾರ್ಖಾನೆಯವರಿಗೆ ಏಕೆ ಆಗುವುದಿಲ್ಲ ಎನ್ನುವುದನ್ನು ಹೇಳಬೇಕು. ಅದಕ್ಕೆ ದತ್ತಾತ್ರರವರು ಬೆಳಗ್ಗೆ ಒಂದು ಶಬ್ದವನ್ನು ಉಪಯೋಗ ಮಾಡಿದರು. ಆಗ ಮಾನ್ಯ ಮುಖ್ಯಮಂತ್ರಿಯವರು ಇರಲಿಲ್ಲ. ಆಗ ನಿಮಗೆ ಸ್ವಲ್ಪ ಕೋಪ ಬಂತು. ಶಾಮೀಲಾಗಿದ್ದಾರೆ ಎಂದರು. ಆಗ ನಾವು ಶಾಮೀಲಾಗಿದ್ದಾರೆಂದು ಹೇಳುವುದಕ್ಕೆ ಹೋಗಬೇಡಿ ಎಂದೆವು. ಸಹಾಯ ಮಾಡುವುದಕ್ಕೆ ಹೊರಟಿದ್ದಾರೆ ಎಂದರೆ ಬಹುಶಃ ತಪ್ಪಾಗುವುದಿಲ್ಲ. ಶಾಮೀಲಾಗಿದ್ದಾರೆಂದರೆ ನಿಮಗೆ ಸ್ವಲ್ಪ ಕೋಪ ಬರುತ್ತದೆ. ಕಾರ್ಖಾನೆ ಮಾಲೀಕರಿಗೆ ನೀವು ಸಹಾಯ ಮಾಡುತ್ತಿದ್ದಾರೆ ಎಂದರೆ ಬಹುಶಃ ನಿಮಗೆ ಕೋಪ ಬರುವುದಿಲ್ಲ. ಅದಕ್ಕೆ ಸಹಾಯ ಮಾಡುವುದನ್ನು ನಿಲ್ಲಿಸಬೇಕು. ಯಾವುದೇ ಕಾರಣಕ್ಕೆ ಆ ಕಾರ್ಖಾನೆಯವರ ಪರವಾಗಿ ನೀವು ನಿಲ್ಲಬಾರದು ಎಂದು ಹೇಳಿ ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕರುಣೆಯಿಂದ ಕೇಳಿಕೊಂಡು ನನ್ನ ಮಾತು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ರಾಮನಗರ) : ನಾನೇನೂ ಸುದೀರ್ಘವಾಗಿ ಚರ್ಚೆಗೆ ಹೋಗುವುದಿಲ್ಲ. ಏಕೆಂದರೆ ಈಗಾಗಲೇ ಬೆಳಗಾವಿಯ ಅಧಿವೇಶನದಲ್ಲಿ ಇದರ ಬಗ್ಗೆ ಒಂದು ಗಂಟೆ ಕಾಲ ಚರ್ಚೆ ನಡೆಸಿದ್ದೇವೆ. ನಾನೂ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇನೆ. ಇವತ್ತು ಈ ಸರ್ಕಾರ ಎರಡೂವರೆ ಸಾವಿರ ರೂಪಾಯಿಗಳನ್ನು ನಿಗದಿ ಮಾಡಿದಾಗ ಸಕ್ಕರೆ ಕಾರ್ಖಾನೆ ಮಾಲೀಕರ ಸಭೆ ಕರೆದು ನಿಗದಿ ಮಾಡುವ ಘೋಷಣೆಯನ್ನೇನು ಮಾಡಿದ್ದಾರೆ ಅವತ್ತೇ ನಾವು, ಸಕ್ಕರೆ ಕಾರ್ಖಾನೆ ಮಾಲೀಕರಿಗೆ ಗುತ್ತಿಗೆ ಕೊಟ್ಟಿದ್ದಾರೆಯೇ ಎಂದು ಹೇಳಿದ್ದೆವು. ನಾವು ಕೊಡಿಸುತ್ತೇವೆಂದು ಹೇಳಿದರು. ಬೆಳಗಾವಿ ಅಧಿವೇಶನದಲ್ಲೂ ನಾವು ಪ್ರಸ್ತಾಪ ಮಾಡಿದೆವು. ಆಗಲೂ ನಿಮ್ಮ ಗಮನಕ್ಕೆ ತಂದಿದ್ದೇವೆ. ಎರಡೂವರೆ ಸಾವಿರ ರೂಪಾಯಿಗಳನ್ನೇನು ನಿಗದಿ ಮಾಡಿದ್ದೀರಿ ಅದನ್ನು ಕಾರ್ಖಾನೆ ಮಾಲೀಕರು ಯಾರೂ ಕೊಡುವುದಿಲ್ಲ ಎಂದು ರಾಜಾರೋಷವಾಗಿ ಹೇಳುತ್ತಿದ್ದಾರೆ ಸರ್ಕಾರ ನೀವು ಎರಡೂವರೆ ಸಾವಿರ ರೂಪಾಯಿಗಳ ಜವಾಬ್ದಾರಿಯನ್ನು ನೀವೇ ತೆಗೆದುಕೊಂಡು ರೈತರಿಗೆ ಕೊಟ್ಟು ಆಮೇಲೆ ನೀವು ಕಾರ್ಖಾನೆಗಳಿಂದ ವಸೂಲಿ ಮಾಡಿಕೊಳ್ಳಿ ಎನ್ನುವುದನ್ನು ಬೆಳಗಾವಿ ಅಧಿವೇಶನದಲ್ಲಿಯೇ ನಾನು ಬಹಳ ಸ್ಪಷ್ಟವಾಗಿ ಅವತ್ತು ಚರ್ಚೆ ಮಾಡಿದ್ದೇನೆ. ಈಗಾಗಲೇ ಜಗದೀಶ್ ಶೆಟ್ಟರ್‌ರವರು, ಗೋವಿಂದ ಕಾರಜೋಳರವರು, ಸವದಿಯವರು ಸುದೀರ್ಘವಾಗಿ ಚರ್ಚೆ ಮಾಡಿದ್ದಾರೆ. ಬಹುಶಃ ಮಾನ್ಯ ಮುಖ್ಯಮಂತ್ರಿಯವರು ಇದೇ ತಿಂಗಳ 19ನೇ ತಾರೀಖು ಒಂದು ಹೇಳಿಕೆ ಕೊಟ್ಟಿದ್ದನ್ನು ಮಾಧ್ಯಮದಲ್ಲಿ ನಾನು ಗಮನಿಸಿದ್ದೇನೆ. ಇನ್ನು ಎರಡು ದಿನಗಳಲ್ಲಿ ಸಕ್ಕರೆ ಕಾರ್ಖಾನೆಗಳ ಮಾಲೀಕರು ರೈತರ ಬಾಕಿ ಹಣವನ್ನು ಕೊಡದೇ ಇದ್ದರೆ ಅವರ ಆಸ್ತಿ ಮುಟ್ಟುಗೋಲು ಹಾಕಿಕೊಂಡು ಇವತ್ತು ರೈತರಿಗೆ ಹಣ ಕೊಡತಕ್ಕಂಥ ಕೆಲಸ ಮಾಡುತ್ತೇವೆ. ಅವರ ಆಸ್ತಿ ಜಪ್ತಿ ಮಾಡುತ್ತೇವೆ ಇನ್ನು ಎರಡು ದಿನಗಳ ಗಡುವು ಕೊಟ್ಟಿದ್ದೇನೆ ಎನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಯವರು 19ನೇ ತಾರೀಖು

ಮಾಧ್ಯಮಗಳ ಮುಂದೆ ಹೇಳಿರುವುದನ್ನು ನಾನು ಗಮನಿಸಿದ್ದೇನೆ. ಇಲ್ಲಿ ನಾನು ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ಇವತ್ತು ಇಲ್ಲಿ ನಾವು ಮತ್ತೆ ಎಲ್ಲಾ ವಿಷಯಗಳನ್ನು ಚರ್ಚೆ ಮಾಡುವುದಕ್ಕಿಂತ ಹೆಚ್ಚಾಗಿ ಇವತ್ತು ರೈತರೇನು ಆತಂಕಕ್ಕೆ ಒಳಗಾಗಿದ್ದಾರೆ, ಈಗಾಗಲೇ ಕಬ್ಬನ್ನು ಕಾರ್ಖಾನೆಗಳಿಗೆ ಸರಬರಾಜು ಮಾಡಿ 7–8 ತಿಂಗಳು ಸಮಯ ಏನು ಕಳೆದಿದೆ, ಇವತ್ತು ಯಾವುದೇ ಕಾರ್ಖಾನೆ ಮಾಲೀಕರುಗಳು ಬಹುಶಃ ನಮ್ಮ ಸಹಕಾರ ಸಚಿವರು ಎಲ್ಲರಿಗೂ ನೋಟಿಸ್‌ಗಳನ್ನು serve ಮಾಡಿದ್ದೇವೆ ಎನ್ನುವ ಮಾತು ಹೇಳಿದರು. ಅದನ್ನು ನಾನು ಮಾಧ್ಯಮಗಳಲ್ಲಿ ಗಮನಿಸಿದ್ದೇನೆ. ಬಹುಶಃ ನಿಮ್ಮ ನೋಟಿಸ್‌ಗಳಿಗೆ ಕಾರ್ಖಾನೆ ಮಾಲೀಕರು ಯಾವ ಕಿಮ್ಮತ್ತನ್ನೂ ಕೊಟ್ಟಿಲ್ಲವೆಂಬುದು ನನ್ನ ಅಭಿಪ್ರಾಯ. ಕಾರ್ಖಾನೆಯವರು ಉತ್ತರವನ್ನೇ ಕೊಟ್ಟಿಲ್ಲ. ನಿಮ್ಮ ನೋಟಿಸ್‌ಗಳಿಗೆ ಕಿಮ್ಮತ್ತು ಇಲ್ಲ. ಈಗಾಗಲೇ High Court ನಲ್ಲಿ FRP rate ಅನ್ನಾದರೂ ಕೊಡಬೇಕೆಂದು ಆದೇಶ ಮಾಡಿದರು. ಆದೇಶ ಮಾಡಿ ಎಷ್ಟು ತಿಂಗಳಾಯಿತು ? 2100 ರೂ.ಗಳನ್ನಾದರೂ ಕೊಡಲಿಕ್ಕೆ ಕಾರ್ಖಾನೆ ಮಾಲೀಕರು ಇಲ್ಲಿಯವರೆಗೆ High Court ನ ಆದೇಶವನ್ನಾದರೂ ಪಾಲನೆ ಮಾಡಿದ್ದಾರೆಯೇ ? ಅದೂ ಮಾಡಲಿಲ್ಲ. ಕೇವಲ ಹೇಳಿಕೆಗಳನ್ನು ಕೊಡುವುದರಿಂದ ನೀವು ಮಾಧ್ಯಮಗಳ ಮುಖಾಂತರ ಕಾರ್ಖಾನೆ ಮಾಲೀಕರಿಗೆ ಗಡುಸು ಮಾತುಗಳನ್ನು ಹೇಳುವುದರಿಂದ ಇವತ್ತು ಬಹುಶಃ ಯಾವುದೇ ಕಾರ್ಖಾನೆ ಮಾಲೀಕರು ಕೊಡುವಂಥ ಪರಿಸ್ಥಿತಿಯಲ್ಲಿಲ್ಲ. ಪಾಪ ರೈತರು ಸರ್ಕಾರಕ್ಕೆ ಕೇಳಿದ್ದಾರೆ. ಇವತ್ತು ಸರ್ಕಾರ ನಮಗೆ ಬಡ್ಡಿರಹಿತವಾಗಿ ನಮಗೆ ಸಾಲದ ರೂಪದಲ್ಲಾದರೂ ಹಣವನ್ನು ಕೊಡಿ ನಂತರ ನೀವು ಯಾವಾಗಲಾದರೂ ಸಕ್ಕರೆ ಕಾರ್ಖಾನೆ ಮಾಲೀಕರ ಹತ್ತಿರ ಹಣ ವಸೂಲಿ ಮಾಡಿಕೊಳ್ಳಿ ಎನ್ನುವ ಮಾತನ್ನು ಈಗಾಗಲೇ ರೈತರ ಮುಖಂಡರುಗಳು ಬಂದು ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಇವತ್ತು at least ಆ ರೈತರಿಗೆ ನಿಮ್ಮ ಸಹಕಾರಿ ಬ್ಯಾಂಕ್‌ನಿಂದ ಕೊಡುತ್ತೀರೋ, ಇನ್ಯಾವ ಬ್ಯಾಂಕುಗಳಿಂದ ಕೊಡಿಸುತ್ತೀರೋ ಆ ರೈತನಿಗೆ ಇವತ್ತು ಹೋಗಲಿ ಆ ಬ್ಯಾಂಕ್‌ನಿಂದ ಬಡ್ಡಿರಹಿತ ಸಾಲ ಕೊಡಿಸಿ. ಆಮೇಲೆ, ನೀವು ಆ ಕಾರ್ಖಾನೆ ಮಾಲೀಕರಿಂದ ವಸೂಲಿ ಮಾಡಿ ಅದನ್ನು ಬ್ಯಾಂಕ್‌ಗಳಿಗೆ ಕಟ್ಟುವ ವ್ಯವಸ್ಥೆ ಮಾಡಿಕೊಳ್ಳುವುದು ಸೂಕ್ತ. ಅದರ ಜೊತೆಗೆ, ಇವತ್ತು ಮಾನ್ಯ ಮುಖ್ಯಮಂತ್ರಿಯವರು ಬೆಳಗ್ಗೆ ಒಂದು ಮಾತು ಹೇಳಿದ್ದನ್ನು ಒಬ್ಬರು ಸ್ನೇಹಿತರು ಹೇಳುತ್ತಿದ್ದರು. ಇವತ್ತು ನಮ್ಮ ಸರ್ಕಾರ ದಿಟ್ಟವಾದ ನಿರ್ಧಾರ ತೆಗೆದುಕೊಂಡು 150 ರೂ. ಬೆಂಬಲ ಬೆಲೆ ಕೊಟ್ಟಿದ್ದೇವೆ, ಯಾವ ಸರ್ಕಾರ ಈ ರಾಜ್ಯದಲ್ಲಿ ಮಾಡಿತ್ತು ಎನ್ನುವ ಮಾತನ್ನು ಹೇಳಿರತಕ್ಕಂಥದ್ದನ್ನು ಬೆಳಿಗ್ಗೆ ಇಲ್ಲಿ ಪ್ರಸ್ತಾಪ ಮಾಡಿದರು. ನಿಮ್ಮ ಹೃದಯ ವೈಶಾಲ್ಯತೆಗೆ ರೈತರ ಪರವಾಗಿ ನಿಮಗಿರತಕ್ಕಂಥ ಆ ಒಂದು ಬದ್ಧತೆಗೆ ನಿಮಗೆ ನಾವು ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಆದರೆ, ನಿಮ್ಮಲ್ಲಿ ನಾನು ಒಂದು ಮನವಿ ಮಾಡುತ್ತೇನೆ. ನೀವು ಈ ಭಾಗದಲ್ಲಿದ್ದಾಗ ಒಮ್ಮೆ ಬಹುಶಃ ಜುಲೈ 22, 2009 ರಲ್ಲಿ ಕಬ್ಬು

ಬೆಳಗಾರರ ಬಗ್ಗೆ ಚರ್ಚೆ ಮಾಡಿದ್ದೀರಿ. "ಕಬ್ಬಿಗೆ 1600/- ಬೆಂಬಲ ಬೆಲೆಗೆ ಆಗ್ರಹ. ಕಬ್ಬಿಗೆ ಪ್ರತಿ ಟನ್‌ಗೆ 1600/- ಕನಿಷ್ಠ ಬೆಂಬಲ ನಿಗದಿ ಮಾಡಬೇಕೆಂದು ಪ್ರತಿ ಪಕ್ಷದ ಸಿದ್ದರಾಮಯ್ಯ ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ. ಬುಧವಾರ ಶೂನ್ಯವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಸಿದ್ದರಾಮಯ್ಯ ಮಾತೆತ್ತಿದರೆ ರೈತರ ಪರ ಎಂದು ಹೇಳುವ ಸರ್ಕಾರ ಇದುವರೆವಿಗೂ ಕಬ್ಬಿಗೆ ಬೆಂಬಲ ಬೆಲೆ ಘೋಷಣೆ ಮಾಡಲಿಲ್ಲ. ಕೆಲವೆಡೆ ಬೆಲ್ಲ ತಯಾರಿಸಲು ಖಾಸಗಿ ವ್ಯಕ್ತಿಗಳು ಪ್ರತಿ ಟನ್‌ಗೆ 1700/- ರೂಪಾಯಿ ನೀಡಿ ಕಟಾವು ಮಾಡಿಕೊಂಡು ಹೋಗುತ್ತಿದ್ದಾರೆ ಎಂದು ಈ ಜಾಗದಲ್ಲಿ ಕುಳಿತಾಗ ನೀವೇ ಹೇಳಿದ್ದೀರಿ. 1600/- ರೂಪಾಯಿ ಬೆಂಬಲ ಬೆಲೆಯನ್ನು ಸರ್ಕಾರ ರೈತರಿಗೆ ಕೊಡಿ ಎಂದು ನೀವು ಅಂದು ಇಲ್ಲಿ ಕುಳಿತಾಗ ಹೇಳಿದ್ದೀರಿ. ಇಂದು ಈ ಭಾಗದಲ್ಲಿದ್ದವರು ಅಂದು ಆಡಳಿತ ನಡೆಸುತ್ತಿದ್ದರು. ಅಂದು ತಾವು ವಿರೋಧ ಪಕ್ಷದಲ್ಲಿದ್ದಾಗ ರೈತರ ಪರವಾಗಿ ಇಲ್ಲಿ ಚರ್ಚೆ ಮಾಡಿದ್ದೀರಿ. ಇಂದು ಜನ ಇವರು 1600/- ಬೆಂಬಲ ಬೆಲೆ ಕೊಡಲಿಲ್ಲವೆಂದು ನಿಮ್ಮನ್ನು ಅಲ್ಲಿ ಕೂಡಿಸಿದ್ದಾರೆ. 150/- ರೂಪಾಯಿ ಕೊಟ್ಟಿದ್ದೀರಿ, ಅದರ ಜೊತೆಗೆ 2,500/- ರೂಪಾಯಿ ಏನು ಫಿಕ್ಸ್ ಮಾಡಿದ್ದೀರಿ, 1 ಲಕ್ಷದ 38 ಸಾವಿರ ಕೋಟಿ ಬಜೆಟ್ ಮಂಡನೆ ಮಾಡಿರತಕ್ಕಂಥ ಸರ್ಕಾರಕ್ಕೆ ಇನ್ನೊಂದು 1500 ರಿಂದ 1750 ಕೋಟಿ ಬರಬಹುದು. ಇಂದು ರೈತರಿಗೆ ಕಾರ್ಖಾನೆಯ ಮಾಲೀಕರು ಹಣ ಕೊಟ್ಟಿಲ್ಲ ಆ ಹಣವನ್ನು ಸರ್ಕಾರದಿಂದ ರೈತರಿಗೆ ಕೊಟ್ಟುಬಿಡಿ. ಏಕೆಂದರೆ, ನಮ್ಮ ಕಾಲದಲ್ಲಿ ಒಮ್ಮೆ ಕಾರ್ಖಾನೆಯ ಮಾಲೀಕರು ಕಬ್ಬು ತೆಗೆದುಕೊಳ್ಳಲಿಲ್ಲ. ಆಗ ಕಬ್ಬು ಹೊಲದಲ್ಲಿ ಒಣಗಿ ನಿಂತಿತ್ತು. ಆಗ ಸಮ್ಮಿಶ್ರ ಸರ್ಕಾರದಲ್ಲಿ 338 ಕೋಟಿ ಹಣ ಬಿಡುಗಡೆ ಮಾಡಿದೆವು. ಹೆಕ್ಟೇರ್‌ಗೆ 25 ಸಾವಿರ ಸಹಾಯಧನ ಕೊಟ್ಟಿದ್ದೇವೆ. ಆ ಸಂದರ್ಭದಲ್ಲಿ ಕೇವಲ 38 ಸಾವಿರ ಕೋಟಿ ರೂಪಾಯಿ ಬಜೆಟ್ ಇದ್ದಾಗ ನಾವು ಇದನ್ನು ಮಾಡಿ ತೋರಿಸಿದ್ದೇವೆ. ಈಗ 1 ಲಕ್ಷದ 38 ಸಾವಿರ ಕೋಟಿ ರೂಪಾಯಿ ಬಜೆಟ್ ಮಂಡನೆ ಮಾಡಿರುವಂಥ ನಿಮ್ಮ ಸರ್ಕಾರಕ್ಕೆ, ಇಂದೇನು ಕಾರ್ಖಾನೆಯ ಮಾಲೀಕರು ರೈತರಿಗೆ ಹಣ ಕೊಟ್ಟಿಲ್ಲ ಆ ಹಣ ನೀವು ಮೊದಲು ರೈತರಿಗೆ ಕೊಟ್ಟು ನಂತರ ಕಾರ್ಖಾನೆಯ ಮಾಲೀಕರಿಂದ ಪಡೆಯಿರಿ, ಅವರ ಆಸ್ತಿಯನ್ನು ಜಪ್ತಿಯಾದರೂ ಮಾಡಿಕೊಳ್ಳಿ, ಇಲ್ಲದಿದ್ದರೆ ಜೈಲಿಗಾದರೂ ಕಳುಹಿಸಿ ಆಮೇಲೆ ನೀವು ಇದನ್ನೆಲ್ಲಾ ಮಾಡಿಕೊಳ್ಳಿ, ನೀವು ಈ ಕ್ರಮ ತೆಗೆದುಕೊಳ್ಳುವುದರೊಳಗೆ ರೈತ ಅಲ್ಲಿ ಉಳಿಯುವುದಿಲ್ಲ. ಬಿಜಾಪುರದಲ್ಲಿರಬಹುದು ಹಲವಾರು ಕಡೆ ಇಂದು ರೈತ ಬೀದಿಗೆ ಬಂದು ಪ್ರತಿಭಟನೆ ನಡೆಸುತ್ತಿದ್ದಾನೆ, ಇಂದು ಆ ರೈತನನ್ನು ಉಳಿಸುವುದಕ್ಕೆ ನೀವು ಮುಂದಾಗಬೇಕು. ಕೊಟ್ಟ ಮಾತನ್ನು ನಡೆಸತಕ್ಕಂಥ ಸರ್ಕಾರ ನಮ್ಮದು ಎಂದು ನೀವು ಪದೇ ಪದೇ ಹೇಳುತ್ತೀರಿ. ಇಂದು ರೂ. 2,500 ಎಂದು ಘೋಷಣೆ ಮಾಡಿ ಕಾರ್ಖಾನೆಯ ಮಾಲೀಕರು ರೈತರಿಂದ ಕಬ್ಬನ್ನು ಪಡೆದುಕೊಂಡು ಏಳು ತಿಂಗಳಾದರೂ ಅವರಿಗೆ ಹಣ ಕೊಡಲಿಲ್ಲ. ಕೇವಲ ಹೇಳಿಕೆ ಕೊಡುವುದಕ್ಕಿಂತಲೂ ಹೆಚ್ಚಾಗಿ,

ಸರ್ಕಾರ ಏನು ಬಾಕಿ ಹಣ ಕೊಡಬೇಕಾಗಿದೆ, ತಾವೇ ಮೊದಲು ಕೊಟ್ಟು ನಂತರ ಕಾರ್ಖಾನೆಯ ಮಾಲೀಕರಿಂದ ಈ ಹಣವನ್ನು ಜಪ್ತಿ ಮಾಡಿಕೊಳ್ಳಿ ಎನ್ನತಕ್ಕಂಥದ್ದನ್ನು ಉಪಾಧ್ಯಕ್ಷರೆ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡುವುದಕ್ಕೆ ಬಯಸುತ್ತೇನೆ.

ಉಪಾಧ್ಯಕ್ಷರು : ಈಗ ಚರ್ಚೆ ಮುಗಿಯಿತು. ಸರ್ಕಾರದಿಂದ ಉತ್ತರ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ನಾನೂ ಕೂಡ ಸಹಿ ಮಾಡಿದ್ದೇನೆ. ಶೂನ್ಯವೇಳೆಯಲ್ಲಿ ಕೊಟ್ಟಿದ್ದೇನೆ.

ಉಪಾಧ್ಯಕ್ಷರು : ಕೊಟ್ಟಿಲ್ಲ, ಇದು ಶೂನ್ಯವೇಳೆಯಲ್ಲ. ಇದು ಬೇರೆ.

ಶ್ರೀ ಪಿ. ರಾಜೀವ್ : ನಾನೂ ಸಹಿ ಮಾಡಿ ಕೊಟ್ಟಿದ್ದೇನೆ. ನನಗೆ ಅವಕಾಶ ಕೊಡಿ.

ಶ್ರೀ ಜಗದೀಶ ಶೆಟ್ಟರ್ : ಈ ವಿಷಯ ನಿಯಮ 69ಕ್ಕೆ convert ಆದಾಗ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಕ್ಕೆ ನಿಮಗೆ ಅವಕಾಶವಿದೆ. ಬೇರೆಯವರು ಮಾತನಾಡಲಿ.

ಉಪಾಧ್ಯಕ್ಷರು : ಈಗಾಗಲೇ ಸಮಯ ಆಗಿದೆ. ಬೇಡಿಕೆಗಳ ಮೇಲೆ ಚರ್ಚೆಯಾಗಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಆ ಪ್ರದೇಶದಿಂದ ಬಂದವರಿಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಜಗದೀಶ ಶೆಟ್ಟರ್ : ಈ ವಿಷಯ 69ಕ್ಕೆ convert ಮಾಡಿದಾಗ ಸಹಿ ಮಾಡಿದವರು ಮಾತ್ರವಲ್ಲ ಬೇರೆಯವರೂ ಇದರಲ್ಲಿ ಮಾತನಾಡಬಹುದು.

ಉಪಾಧ್ಯಕ್ಷರು : ತಾವು ಹೇಳುವುದು ಸರಿ. ಆದರೆ ಬೇಡಿಕೆಗಳ ಮೇಲೆ ಚರ್ಚೆಯನ್ನು ಪ್ರಾರಂಭಿಸಬೇಕಲ್ಲ ?

ಶ್ರೀ ಜಗದೀಶ ಶೆಟ್ಟರ್ : ಇದು ಮಹತ್ವದ ವಿಚಾರ ಇದ್ದುದರಿಂದ ಅವಕಾಶ ಕೊಡಬೇಕಾಗುತ್ತದೆ.

ಶ್ರೀ ಪಿ. ರಾಜೀವ್ : ನಾನೂ ಕೂಡ ಸಹಿ ಮಾಡಿ ಕೊಟ್ಟಿದ್ದೇನೆ, ನನಗೂ ಅವಕಾಶ ಕೊಡಿ.

ಉಪಾಧ್ಯಕ್ಷರು : ಕುಳಿತುಕೊಳ್ಳಿ, ಎರಡು ನಿಮಿಷದಲ್ಲಿ ಮಾತನಾಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಎರಡು ನಿಮಿಷ ಆಗುವುದಿಲ್ಲ ಹತ್ತು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ.

ಉಪಾಧ್ಯಕ್ಷರು : ಸಮಯವಿಲ್ಲ, ಈಗ ಬೇಡಿಕೆಗಳ ಮೇಲೆ ಚರ್ಚೆ ಮಾಡಬೇಕಾಗಿದೆ. ಬೇಗನೆ ಮುಗಿಸಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಮೇಲುಕೋಟೆ) : ಇಲ್ಲಿ ಏನಾಗಿದೆ ಎಂದರೆ, ಇದಕ್ಕೆ ನೀತಿ ಸೃಷ್ಟಿ ಮಾಡದಿದ್ದರೆ ಪ್ರತಿ ವರ್ಷ ಕಬ್ಬು ಬೆಳೆಗಾರರು ಬೀದಿಗಿಳಿದು ಹೋರಾಟ ಮಾಡತಕ್ಕಂಥ ಸ್ಥಿತಿ ಇದೆ. ಹಿಂದೆ ಇದ್ದಂಥ ಸರ್ಕಾರಗಳು, MSP, FRP, SMP ಹೀಗೆ ಇಂಗ್ಲೀಷ್ ಅಕ್ಷರಗಳನ್ನು ಬದಲಾವಣೆ ಮಾಡಿ ಮಾಡಿ ಬೆಂಬಲ ಬೆಲೆ, ಬೆಂಬಲ ಬೆಲೆ ಎಂದು ನಿರಂತರವಾಗಿ ಘೋಷಣೆ ಮಾಡಿದ್ದಾರೆ. ರೂ. 2100/– ಬೆಲೆ ನಿಗದಿ ಮಾಡಿರುವುದು ಸಕ್ಕರೆಗೆ ಮಾತ್ರ, ಯಾವುದೇ ಉಪ ಉತ್ಪನ್ನಗಳನ್ನು ಸೇರಿಸಿ ಆ ಬೆಲೆ ನಿಗದಿ ಇಲ್ಲ. ಅದು ಸಕ್ಕರೆಗೆ ಮಾತ್ರ. ಉದಾಹರಣೆಗೆ, ನಾವು rice mill ಗೆ ಹೋಗುತ್ತೇವೆ. Rice mill ನಲ್ಲಿ ಭತ್ತವನ್ನು hulling ಮಾಡಿಸಿದರೆ ಮುಕ್ಕಣ್ಣು ನುಚ್ಚು, ತೌಡು, ಎಲ್ಲಾ ನಮಗೆ ವಾಪಸ್ ಕೊಡುತ್ತಾರೆ. ಅವನು ತೆಗೆದುಕೊಳ್ಳುವುದು ಬರೀ ಭತ್ತ hulling ಮಾಡುವುದಕ್ಕೆ ಮಾತ್ರ. ಹಾಗೆಯೇ ನಮಗೆ molasses, ಸಿಪ್ಪೆ ಎಲ್ಲಾ ವಾಪಸ್ ಕೊಟ್ಟು ಬಿಟ್ಟರೆ ತೊಂದರೆಯಿಲ್ಲ. ಅವೆಲ್ಲವನ್ನು ಉಪಯೋಗಿಸಿ ಉಪ ಉತ್ಪನ್ನಗಳನ್ನು ಮಾಡುತ್ತಾರೆ. ಸರ್ಕಾರ ಏನು ಹೇಳುತ್ತದೆ ಎಂದರೆ, excise lobby ಯಿಂದ ಸುಮಾರು 13,000 ಕೋಟಿ ರೂಪಾಯಿ ನಮಗೆ ತೆರಿಗೆ ಬರುತ್ತದೆ. ಕಬ್ಬಿನ ದುಡ್ಡು ಎಷ್ಟು ಆಗಿದೆ ಎಂದರೆ 11,000 ಕೋಟಿ. Excise ನಲ್ಲಿ 2,000 ಕೋಟಿ ಮಾತ್ರ ಜಾಸ್ತಿ ಬರುತ್ತದೆ. ಇದಕ್ಕೆ ಯಾವ ರೀತಿ ಬೆಲೆ ನಿಗದಿ ಮಾಡಬೇಕು ? ಇದಕ್ಕೆ ಯಾವ ರೀತಿ ಅವರ್ತ ನಿಧಿ create ಮಾಡಬೇಕು ? ಹೇಗೆ ರೈತರನ್ನು ರಕ್ಷಣೆ ಮಾಡಬೇಕು ? ಇದು ಸರ್ಕಾರ ಅತ್ಯಂತ ಗಂಭೀರವಾಗಿ ಆಲೋಚನೆ ಮಾಡಬೇಕು. ಕೈಯಿಂದ ಕೊಡುತ್ತೇನೆ, ಅಲ್ಲಿಂದ ಕೊಡುತ್ತೇನೆ ಎನ್ನುವ ಪ್ರಶ್ನೆಯಲ್ಲ. ನಿರಂತರವಾಗಿ ಇದಕ್ಕೆ ನೀತಿ ಇಲ್ಲದೆ ಇರುವುದರಿಂದ ಈ ರೀತಿಯಾಗಿದೆ. ಇದು ಜೀವನಾವಶ್ಯಕ ವಸ್ತು ಏನಲ್ಲ. ಈಗಲೂ ಕೂಡ ಜೀವನಾವಶ್ಯಕ ವಸ್ತು ಏನಲ್ಲ ಇದು. ಇದು ವಾಣಿಜ್ಯ ಬೆಳೆ ಸುಮಾರು 26 ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತದೆ, ಏಕೆ ಇದರ ಬಗ್ಗೆ ಆಲೋಚನೆ ಮಾಡುತ್ತೀರಿ ? SAP ಕಾಯ್ದೆ ತಂದಿದ್ದೀರಿ ಎಂದು ಹೇಳುತ್ತಿರಲ್ಲ ಅದು ಎಲ್ಲಿದೆ ? ಅದನ್ನು ಸದನದಲ್ಲಿ introduce ಮಾಡಿ, unanimous ಆಗಿ resolution ಆಗಿದೆ. SAP ಕಾಯ್ದೆ ಮಾಡಬೇಕಾದರೆ ಯಾವಾಗಲು ಸದನದಲ್ಲಿ ಮಂಡಿಸಿ ಎಲ್ಲಾ ಪಕ್ಷಗಳು ಏಕ ಕಾಲದಲ್ಲಿ resolution ಮಾಡಿದರೆ ಮಾತ್ರ ಅದು ಅನುಷ್ಠಾನಕ್ಕೆ ಬರುವುದಕ್ಕೆ ಸಾಧ್ಯ. State Advisory Price ಎನ್ನುವ ಕಾಯ್ದೆ ತರುವುದಕ್ಕೆ ಸರ್ಕಾರ ಹೇಳಿದರೆ ಅದು ಆಗುವುದಿಲ್ಲ. ಸದನದ ಮೂಲಕ ಒಂದು resolution ಆಗಬೇಕು. SAP ಕಾಯ್ದೆಯಲ್ಲಿ ಯಾವ್ಯಾವ ಅಂಶಗಳು ಇರಬೇಕು, ಯಾವ್ಯಾವ ಅಂಶದ ಮೇಲೆ ಬೆಲೆ ನಿಗದಿ ಮಾಡಬೇಕೆನ್ನುವುದರ ಬಗ್ಗೆ ಇಲ್ಲಿ ಚರ್ಚೆಯಾಗಬೇಕು. ಇದು ಬಹಳ ದೊಡ್ಡದೇನೂ ಅಲ್ಲ. ಈಗ ಇವರು ಹೇಳಿದರು. ತಾವು ಹೇಳಿದ ಹಾಗೆ ಕೇಂದ್ರ ಸರ್ಕಾರ ex-gate or ex-field ಎಂದು ಎಲ್ಲೂ ಹೇಳಿಲ್ಲ. ಯಾವುದೇ FRP (Fair and Remunerative Price)

ಕೊಟ್ಟಿರತಕ್ಕಂಥದ್ದು ex-gate or ex-field ಎಂದು ಹೇಳಿಲ್ಲ. ಏಕೆಂದರೆ, ಈ ಬಗ್ಗೆ ಗೊಂದಲ ಸೃಷ್ಟಿಸಿ ಕಾರ್ಖಾನೆಯ ಮಾಲೀಕರು ರೈತರನ್ನು exploit ಮಾಡಿಕೊಂಡು ಬಂದಿದ್ದಾರೆ. ಆದ್ದರಿಂದ, ಈ ಬಗ್ಗೆ ಸಂಪೂರ್ಣವಾದ ವಿವರವುಳ್ಳ ಚರ್ಚೆ ಸದನದಲ್ಲಿ ಒಂದು ಆಗಿ unanimous resolution ಆಗಬೇಕು. ಕೇಂದ್ರ ಸರ್ಕಾರ ಬಹಳ ಹಿಂದೆ,ಯಾರ್ಯಾರು ರೈತರಿಗೆ ಬಾಕಿ ಕೊಡಬೇಕಾಗಿತ್ತು ಅವರಿಗೆ ಬಡ್ಡಿರಹಿತವಾದ ಸಾಲವನ್ನು ಕೊಡುತ್ತೇವೆಂದು ಘೋಷಣೆ ಮಾಡಿತ್ತು. ನಾನು ಫೋನು ಮೂಲಕ ತಿಳಿದುಕೊಂಡೆ, ಇದು ಸುಮಾರು 1060 ಕೋಟಿ ಕರ್ನಾಟಕಕ್ಕೆ ಬರುತ್ತದೆ. ಬಡ್ಡಿ ಇಲ್ಲದೆ ರೈತರುಗಳಿಗೆ payment ಮಾಡಲಿಕ್ಕೆ ಕಾರ್ಖಾನೆಗಳಿಗೆ ಅವರ excise duty ಮೇಲೆ ಎಷ್ಟೆಷ್ಟು ಕೋಟಿ ಕೊಡಬಹುದು, ಫ್ಯಾಕ್ಟರಿಗೆ ಹಂಚಿಕೆಯಾಗತಕ್ಕಂಥ ಪರಿಸ್ಥಿತಿ ಸೃಷ್ಟಿಯಾಯಿತು. 1060 ಕೋಟಿ ರೂಪಾಯಿಗಳನ್ನಾದರೂ ಬಡ್ಡಿ ರಹಿತ ಸಾಲ ಕೊಡಿ. ನಿಮಗೂ ಅವರಿಗೂ ಚರ್ಚೆ ನಡೆಯುತ್ತಿರುವುದು ಎಷ್ಟು ? ಸರ್ಕಾರ ಮತ್ತು ಕಾರ್ಖಾನೆಗಳ ಮಧ್ಯೆ ಚರ್ಚೆ ನಡೆಯುತ್ತಿರುವುದು ಸುಮಾರು 600 ರಿಂದ 700 ಕೋಟಿ ರೂಪಾಯಿಗಳು. ನಾವು ಕೇವಲ ಕಾನೂನು ಮೂಲಕ ಎಲ್ಲಾ ಬದಲಾಯಿಸುವುದಕ್ಕೆ ಸಾಧ್ಯವಿಲ್ಲ. ನೀವು ಕಾನೂನು ಮಾಡುತ್ತೀರಿ, ಸರ್ಕಾರ ಮತ್ತು ಕಾರ್ಖಾನೆಗಳ ಮಾಲೀಕರ ಮಧ್ಯೆ ಚರ್ಚೆ ನಡೆಯುತ್ತಿರುವುದರಿಂದ, ಗಂಡ-ಹೆಂಡತಿಯರ ಜಗಳದ ಮಧ್ಯೆ ಕೂಸು ಬಡವಾಯ್ತು ಎನ್ನುವ ಹಾಗೆ ಇಲ್ಲಿ ಬಡವಾಗಿರುವವರು ಯಾರು ? ರೈತರು ಆದ್ದರಿಂದ, ತಾವು ಅತ್ಯಂತ ಗಂಭೀರವಾಗಿ ಆಲೋಚನೆ ಮಾಡಬೇಕು. ನಾನು ಸುಮಾರು ಒಂದು ಸಾವಿರ ಸಲ ಹೇಳಿದ್ದೇನೆ. Karnataka Sugar Development Fund Create ಮಾಡಿ, ಇಂಥ ಕಷ್ಟಕಾಲದಲ್ಲಿ ರೈತರನ್ನು ರಕ್ಷಣೆ ಮಾಡುವಂಥ ಕೆಲಸ ಮಾಡಿ ಎಂದು ಸುಮಾರು ಎಸ್.ಎಂ. ಕೃಷ್ಣರವರ ಕಾಲದಿಂದ ಇಲ್ಲಿಯವರೆಗೆ ಹೇಳಿಕೊಂಡು ಬಂದಿದ್ದೇನೆ. But, ಯಾರೂ ಕೂಡ ಆ ದಿಕ್ಕಿನಲ್ಲಿ ಪ್ರಯತ್ನ ಪಡದೆ ಇರುವುದರಿಂದ ತೊಂದರೆಯಾಗಿದೆ. 2-3 ಫ್ಯಾಕ್ಟರಿಗಳರವರು ಕೊಟ್ಟಿದ್ದಾರೆ. ನಮ್ಮ ವಿರೋಧ ಪಕ್ಷದ ನಾಯಕರು ಒಂದು ಮಾತು ಹೇಳಿದರು. FRP rate ಕೊಟ್ಟರೆ ಬಹಳ loss ಆಗುತ್ತದೆ. ಈಗ ಇವರು purchase tax ಮನ್ನಾ ಮಾಡಿ ಸುಮಾರು 210 ರೂಪಾಯಿ ನಮಗೆ ಕೊಟ್ಟಿರುವುದು. ಕಾರ್ಖಾನೆಯವರು 2040/- ಮಾತ್ರ ಕೊಡಬೇಕಾಗಿರುವುದು "purchase tax ಮನ್ನಾ ಮಾಡಿದ್ದೀರಲ್ಲಾ ಅಲ್ಲಿಗೆ purchase tax 60/- ರೂಪಾಯಿ ಹೋಯಿತು. ಆದ್ದರಿಂದ, ಕಾರ್ಖಾನೆಯ ಮಾಲೀಕರ ಮೇಲೆ ಏನು ಕಾನೂನು ಕ್ರಮ ತೆಗೆದುಕೊಳ್ಳುತ್ತೀರೋ ಏನು ಮಾಡುತ್ತೀರೊ ? ಕಬ್ಬು ಬೆಳೆಗಾರರ ಬಾಕಿ ಎಷ್ಟು ಇದೆ ? ನೀವು ಕೇಸ್ ಹಾಕಿ ಕಾನೂನು ಹೋರಾಟ ಮಾಡುವುದು ಬೇರೆ ಪ್ರಶ್ನೆ. ಕೆಲವು ಕಾರ್ಖಾನೆಗಳು ನೀವು ಹೇಳಿರುವುದಕ್ಕಿಂತಲೂ ಜಾಸ್ತಿ ಕೊಟ್ಟಿದ್ದಾರೆ. ಅವರು ಹೇಗೆ ಜಾಸ್ತಿ ಕೊಟ್ಟರು ? ಈಗ ಅದನ್ನೆಲ್ಲಾ tally ಮಾಡಬೇಕು. ಇಲ್ಲೊಂದು sharing formula

ಎನ್ನುವ ಸಮಿತಿಯನ್ನು ರಚಿಸಿದಿರಿ. sharing formula ನೂ ಕೂಡ success ಆಗಲಿಲ್ಲ. ಏಕೆಂದರೆ, ಸ್ಥಿರವಾದ ಬೆಲೆ ಇಲ್ಲದೇ ಇರುವುದರಿಂದ ಯಾವಾಗಲೂ sharing formula success ಆಗುವುದಿಲ್ಲ. ಆದ್ದರಿಂದ, ಏರುಪೇರುಗಳ ಮಧ್ಯೆ ಕಬ್ಬು ಬೆಳೆಗಾರರು ಬದುಕಿದ್ದಾರೆ. ಸರ್ಕಾರದ ಬೊಕ್ಕಸಕ್ಕೆ excise lobby ಯಿಂದ ಸಿಕ್ಕಾಪಟ್ಟೆ ದುಡ್ಡು ಬರುತ್ತದೆ. ಈಗ ಸರ್ಕಾರ ಮಧ್ಯ ಪ್ರವೇಶ ಮಾಡಿ, ಅವರಿಗೂ ಮತ್ತು ನಿಮಗೆ ಇರತಕ್ಕಂಥ ಸಮಸ್ಯೆ ಏನೆಂದು ಕುಳಿತು ಚರ್ಚೆ ಮಾಡಿ. ಕೋರ್ಟಿನಲ್ಲಿ ತೀರ್ಮಾನ ಆಗುವವರೆವಿಗೂ ಕಾಯುವುದಕ್ಕಾಗುವುದಿಲ್ಲ. ಕೋರ್ಟಿಗೆ ನೀವು ಹೋಗಬಹುದು, ಇನ್ನೂ 6 ತಿಂಗಳು prolong ಆಗಬಹುದು, ಅವರು ಇಲ್ಲಿ ಆಗಿಲ್ಲವೆಂದರೆ, Supreme Court ಗೆ ಹೋಗುತ್ತಾರೆ, ಅಲ್ಲಿ ಇನ್ನೂ 6 ತಿಂಗಳು ಮುಂದೂಡಿದರೆ ರೈತರ ಗತಿ ಏನಾಗಬೇಕು ? ಇವತ್ತು ಎರಡು ಸಾವಿರ ಜನ ರೈತರು ಮುತ್ತಿಗೆ ಹಾಕಿದ್ದರಿಂದ ಅವರನ್ನು ಜೈಲಿಗೆ ಹಾಕಿರತಕ್ಕಂಥ ಪರಿಸ್ಥಿತಿ ಸೃಷ್ಟಿಯಾಗಿದೆ. ಸದನದಿಂದ ಒಂದು ಆದೇಶ ಕೊಡುವುದರ ಮೂಲಕ ಸಂಪೂರ್ಣ ಕಬ್ಬು ಬೆಳೆಗಾರರ ರಕ್ಷಣೆ ಮಾಡಬೇಕೆಂದು ಹೇಳುತ್ತಾ, ನಾವು ಎಲ್ಲರೂ ಇದಕ್ಕೆ ಸಹಕಾರ ಕೊಡಬೇಕಾಗಿದೆ. ಇದರಲ್ಲಿ ಯಾವುದೇ ಪಕ್ಷದ ಪ್ರಶ್ನೆಯಲ್ಲ, ಪಕ್ಷ ಬೇರೆ. ತಾವು ಆಡಳಿತ ನಡೆಸುತ್ತಿದ್ದೀರಿ ಇವತ್ತು ಕಟಿಬದ್ಧವಾಗಿ ರೈತರನ್ನು ರಕ್ಷಣೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ರಾಜೀವ್ ಕುಡಚಿ ಯವರು ತಾವು ಮಾತನಾಡಿ.

ಶ್ರೀ ಗೋವಿಂದ ಎಂ. ಕಾರಜೋಳ : ಸನ್ಮಾನ್ಯ ಉಪಾಧ್ಯಕ್ಷರೆ, ಪುಟ್ಟಣ್ಣಯ್ಯನವರ ಮಾತಿಗನುಗುಣವಾಗಿ ಈ ಸದನಕ್ಕೆ ಒಂದು ಮಾಹಿತಿ ಕೊಡುವ ಪ್ರಯತ್ನ ಮಾಡುತ್ತೇನೆ. ಗುಜರಾತ್ ಜ್ಞಾನದೇವಿ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ಪ್ರತಿ ಟನ್‌ಗೆ 2013-14 ರಲ್ಲಿ 3,300/- ರೂಪಾಯಿ ಕೊಟ್ಟಿದ್ದಾರೆ. ಉತ್ತರ ಪ್ರದೇಶದ ಕಾರ್ಖಾನೆಗಳಲ್ಲಿ 2,800/- ರೂಪಾಯಿ ಕೊಟ್ಟಿದ್ದಾರೆ. ತಮಿಳುನಾಡಿನ ಕಾರ್ಖಾನೆಯಲ್ಲಿ 2,650/- ರೂಪಾಯಿ ಕೊಟ್ಟಿದ್ದಾರೆ. ಮಹಾರಾಷ್ಟ್ರದಲ್ಲಿ ಒಂದು ಟನ್ ಕಬ್ಬಿಗೆ 2400 ರೂಪಾಯಿಗಳಿಂದ 2700 ರೂಪಾಯಿಗಳವರೆಗೆ ಕೊಟ್ಟಿದ್ದಾರೆ. ಬೇರೆ ಬೇರೆ ರಾಜ್ಯಗಳಲ್ಲಿ ಈ ರೀತಿಯಾಗಿ ರೈತರುಗಳಿಗೆ paymnet ಮಾಡಿದ್ದಾರೆ. ಮಹಾರಾಷ್ಟ್ರದಲ್ಲಿ ನಮ್ಮ ರಾಜ್ಯದ procedure ಇಲ್ಲ, ಅದು clear ಇಲ್ಲ. ಈ ರೀತಿಯಾಗಿ payment ಮಾಡಿದ್ದಾರೆ. ಸರ್ಕಾರವು ಹಣವನ್ನು ಕೊಡುವ ಬಗ್ಗೆ ಅದು ದೊಡ್ಡ ಕೆಲಸವೇನೂ ಅಲ್ಲ. ಸರ್ಕಾರವು ಈ ಬಗ್ಗೆ ಮನಸ್ಸು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಉಪಾಧ್ಯಕ್ಷರು : ರಾಜೀವ್‌ರವರೆ, ತಮಗೆ 5 ನಿಮಿಷಗಳ ಕಾಲಾವಕಾಶ ಕೊಟ್ಟಿದ್ದೇನೆ ತಾವು ಮಾತನಾಡಿ.

ಶ್ರೀ ಪಿ. ರಾಜೀವ್ (ಕುಡಚಿ) : ಸನ್ಮಾನ್ಯ ಉಪಾಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳು, ಸರ್ಕಾರವು ರೈತರಿಗೆ ಹಣವನ್ನು ಕೊಡುತ್ತೇನೆಂದು ಘೋಷಣೆ ಮಾಡಿತ್ತು. ಆದರೆ ಆ ಹಣವನ್ನು ಇವತ್ತಿಗೂ ರೈತರಿಗೆ ಕೊಡಿಸುವುದಕ್ಕಾಗಲಿಲ್ಲ. ಇದರಲ್ಲಿ ಸರ್ಕಾರದ ವೈಫಲ್ಯ ಏನು ? ಈ ರಾಜ್ಯದಲ್ಲಿ ಕಾನೂನುಗಳು ಪುಸ್ತಕದಲ್ಲಿ ಮಾತ್ರ ಇದೆಯೋ ಅಥವಾ ಅದು ಆಚರಣೆಗೆ ಬರುತ್ತಿದೆಯೇ ? SAP ಕಾಯಿದೆಯು ರೈತನು ಕಬ್ಬು ಪೂರೈಕೆ ಮಾಡಿದ 14 ದಿನದ ಒಳಗಡೆ ಅವನಿಗೆ ಹಣವನ್ನು ಕೊಡಬೇಕೆಂದು ಹೇಳುತ್ತದೆ. ಕೊಡದೇ ಇದ್ದರೆ ಬ್ಯಾಂಕ್ ಬಡ್ಡಿಯೊಂದಿಗೆ ಅವನಿಗೆ ಹಣವನ್ನು ಕೊಡಬೇಕು. ಬ್ಯಾಂಕ್ ಬಡ್ಡಿಯನ್ನು ಸೇರಿಸಿ ರೈತನಿಗೆ ಕೊಟ್ಟಿದ್ದೇವೆಂದು ಇವತ್ತಿಗೂ ಒಂದು ಉದಾಹರಣೆಯನ್ನು ಸರ್ಕಾರವು ಕೊಡಲಿ, ಈ ಸದನದಲ್ಲಿ ಮಾಡಿದಂತಹ ಕಾನೂನುಗಳು ಆಚರಣೆಗೆ ಬರುತ್ತಿಲ್ಲ. ಹಾಗಿದ್ದರೆ ಈ ಸದನದಲ್ಲಿ ಮಾಡುವಂತಹ ಘೋಷಣೆಗಳಿಗೆ ಜನರು ಯಾವ ರೀತಿ ನಂಬಿಕೆಯನ್ನು ಇಡುತ್ತಾರೆ ? 2012-13ನೇ ಸಾಲಿಗೆ Fair and Remunerative Price ಕೇಂದ್ರ ಸರ್ಕಾರವು 1700 ರೂಪಾಯಿ ಎಂದು ಘೋಷಣೆ ಮಾಡುತ್ತದೆ. 1700 ರೂಪಾಯಿಗಳೆಂದು ಘೋಷಣೆಯಾದಾಗ 2400 ರೂಪಾಯಿಗಳಿಗೆ ಇಲ್ಲಿ ಕರ್ನಾಟಕದ ರೈತರುಗಳು ತೆಗೆದುಕೊಂಡಿದ್ದಾರೆ. ಸಕ್ಕರೆಯ ಬೆಲೆಯು ಆ ಮಟ್ಟಕ್ಕೆ ಇತ್ತು ಎಂದು ರೈತರುಗಳು ಹೋರಾಟವನ್ನು ಮಾಡಿಕೊಂಡು ತೆಗೆದುಕೊಂಡರು. ಅಂದರೆ ಒಂದು ಟನ್ ಕಬ್ಬಿಗೆ 800 ರೂಪಾಯಿಗಳಷ್ಟು FRP ಗಿಂತ ಹೆಚ್ಚಿನ ಹಣವನ್ನು ರೈತರು ತೆಗೆದುಕೊಂಡರು. ಈ ವರ್ಷ 2013-14ನೇ ಸಾಲಿಗೆ ಕೇಂದ್ರ ಸರ್ಕಾರವು FRP ದರವನ್ನು 2100 ರೂಪಾಯಿಗಳಿಗೆ ಘೋಷಣೆಯನ್ನು ಮಾಡಿದೆ. ಹೋದ ವರ್ಷಕ್ಕೆ FRP ದರಕ್ಕೆ 800 ರೂಪಾಯಿಗಳಷ್ಟು ಹೆಚ್ಚಿಗೆ ತೆಗೆದುಕೊಂಡಿದ್ದಾರಲ್ಲಾ ಒಬ್ಬ ರೈತನು calculation ಮಾಡುತ್ತಾನೆ. ಹೋದಸಾರಿ ತೆಗೆದುಕೊಂಡಷ್ಟೇ FRP ದರಕ್ಕೆ ಸೇರಿಸಿಕೊಟ್ಟರೆ ರೈತನು ಒಂದು ಟನ್ ಕಬ್ಬಿಗೆ 2900 ರೂಪಾಯಿಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಕರ್ನಾಟಕ ಸರ್ಕಾರವು ಒಂದು ಟನ್ ಕಬ್ಬಿಗೆ 2500 ರೂಪಾಯಿಗಳನ್ನು ಕೊಡುತ್ತೇವೆಂದು ಘೋಷಣೆಯನ್ನು ಮಾಡಿತು. ಕಾರ್ಖಾನೆಯಿಂದಲೂ ಸಹ ಕೊಡಿಸುತ್ತೇವೆಂದು ಹೇಳಿದರು. ಸರ್ಕಾರವು ಯಾವ ಮಾನದಂಡವನ್ನು ಇಟ್ಟುಕೊಂಡು ಘೋಷಣೆಯನ್ನು ಮಾಡಿದರು ? ಅಂದರೆ ಸರ್ಕಾರದ ಹತ್ತಿರ ಮಾಹಿತಿ ಇರಲಿಲ್ಲವೇ ? ಈ ಬಗ್ಗೆ ಸರ್ಕಾರವು ವೈಜ್ಞಾನಿಕವಾಗಿ ಯೋಚನೆಯನ್ನು ಮಾಡಿರಲಿಲ್ಲವೇ ? ಸರ್ಕಾರ 2500 ರೂಪಾಯಿಗಳನ್ನು ಒಂದು ಟನ್ ಕಬ್ಬಿಗೆ ಕೊಡಿಸುತ್ತೇವೆಂದು, yes, cost of conversion ಇಷ್ಟಿದೆ, ಇವತ್ತು market rate ಎಷ್ಟು ಆಗಬಹುದು, Cost of conversion ಅನ್ನು minus ಮಾಡಿದರೆ ಕಾರ್ಖಾನೆಯಿಂದ ಇಷ್ಟು ಹಣವನ್ನು ಕೊಡಿಸುವುದಕ್ಕೆ ಸಾಧ್ಯ ಇದೆ ಎನ್ನುವಂತಹ ಯೋಚನೆಯನ್ನು ಸರ್ಕಾರವು ಮಾಡಿರುತ್ತದೆ ಅಲ್ಲವೇ ? ಹಾಗಿದ್ದರೆ ಸರ್ಕಾರವು

ಎಲ್ಲಿ ಎಡವುತ್ತಿದೆ ? FRP ದರಕ್ಕೆ ಯಾವುದೇ stay ಸಿಕ್ಕಿಲ್ಲವೆಂದು ಸದನದಲ್ಲಿ ಮಾನ್ಯ ಹಿರಿಯ ನಾಯಕರು ಮಾತನಾಡುತ್ತಾ ಹೇಳಿದರು. ಈ ಬಗ್ಗೆ ಸರ್ಕಾರವು ಹಾರಿಕೆಯ ಉತ್ತರವನ್ನು ಕೊಡುತ್ತಿದೆ. FRP ದರವನ್ನು ಎಲ್ಲಾ ಕಾರ್ಖಾನೆಗಳು ಕೊಟ್ಟಿದೆ ಎಂದು ಹೇಳುತ್ತಿದ್ದಾರೆ. ಇವರು ಹೇಗೆ ಉತ್ತರವನ್ನು ಹೇಳುತ್ತಿದ್ದಾರೆ ? ಅದು Ex-field ನಿಂದ 2100 per tonne ಅದನ್ನು count ಮಾಡಿದರೆ Ex-field ನಿಂದ ಕಾರ್ಖಾನೆಗೆ ತರುವುದಕ್ಕೆ transporation ಗೆ ಎಷ್ಟು ಖರ್ಚಾಗುತ್ತದೆ ಎಂದು ಹೇಳಿಬಿಡುತ್ತಾರೆ, ಎಲ್ಲಿಯೂ ಕೂಡ ನಿಖರವಾದಂತಹ ನಿಖರವಾದಂತಹ ಸ್ಪಷ್ಟತೆಯನ್ನು ಇಲ್ಲ ಇವತ್ತು ಸರ್ಕಾರವು ಏನು ಮಾಡಿದೆ ? ಇವರು ಕೇಂದ್ರ ಸರ್ಕಾರದಿಂದ ಸ್ಪಷ್ಟತೆಯನ್ನು ತೆಗೆದುಕೊಳ್ಳಬಹುದಾಗಿತ್ತಲ್ಲಾ ? ನೀವು FRP 2100 ರೂಪಾಯಿ 9.5 recovery ಗೆ ಘೋಷಣೆಯನ್ನು ಮಾಡಿದ್ದೀರಿ, ಈ ಘೋಷಣೆಯು ಅದು ex-field ಗೆ ಅನ್ವಯ ಆಗುತ್ತದೆಯೋ ? ಅಥವಾ ex-gate ಗೆ ಅನ್ವಯವಾಗುತ್ತದೆಯೋ? ಈ ಬಗ್ಗೆ ಸ್ಪಷ್ಟೀಕರಣವನ್ನು ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರವು ತೆಗೆದುಕೊಳ್ಳುವುದಕ್ಕೆ ಸಾಧ್ಯತೆಯಾಗಿಲ್ಲವೆ ? ಈ ಬಗ್ಗೆ ಸಂಬಂಧಪಟ್ಟಂತಹ ಅಧಿಕಾರಿಗಳು ಏನು ಮಾಡಿದ್ದಾರೆ ? ಸರ್ಕಾರಕ್ಕೆ ಈ ಬಗ್ಗೆ ಸ್ಪಷ್ಟತೆ ಬೇಕಾಗಿಲ್ಲ. ರೈತರನ್ನು ಮತ್ತೆ ಶೋಷಣೆಯಲ್ಲಿಡಬೇಕೆಂದು ಇದೆ, ಇಲ್ಲಿ ರೈತರಿಗೆ ಎರಡು ರೀತಿಯಲ್ಲಿ ಶೋಷಣೆಯು ಆಗುತ್ತಿದೆ FRP ಘೋಷಣೆಯನ್ನು ಮಾಡುವಾಗ ಕೇಂದ್ರ ಸರ್ಕಾರವು ಹೇಳುತ್ತದೆ 9.5 recovery ಗೆ ಒಂದು ಟನ್ ಕಬ್ಬಿಗೆ 2100 ರೂಪಾಯಿಗಳನ್ನು ಕೊಡಬೇಕೆಂದು ಇದೆ. ಅಂದರೆ recovery ಯಲ್ಲಿ ಬಹಳ ಪ್ರಮುಖವಾದಂತಹ ಅಂಶವನ್ನು ನಾವು ಗಮನಿಸಬೇಕಾಗಿದೆ. ಕಾರ್ಖಾನೆಗಳು recovery ಯನ್ನು ಸುಳ್ಳು ತೋರಿಸುತ್ತಾರೆ. ತೂಕದಲ್ಲಿ ಮೋಸ ನಡೆಯುತ್ತಿದೆ, ಸರ್ಕಾರವು ಈ ಬಗ್ಗೆ ಏನು ನಿಲುವಿಗೆ ಬಂದಿದೆ ? ಯಾವುದೇ ಕಾರ್ಖಾನೆ ರೈತನಿಗೆ ವೈಜ್ಞಾನಿಕವಾದಂತಹ ಬೆಲೆ ಸಿಗಬೇಕಾದರೆ ತೂಕದಲ್ಲಿ, recovery ಯಲ್ಲಿ ಮೋಸ ಆಗಬಾರದು. ಈ ಬಗ್ಗೆ ಸರ್ಕಾರವು ಯಾವ ನಿರ್ಧಾರವನ್ನು ತೆಗೆದುಕೊಂಡಿದೆ ? ಈ ಬಗ್ಗೆ ಏನು ವ್ಯವಸ್ಥಾಪನೆ ಮಾಡಿದೆ ? ನಮ್ಮ ತೂಕದಲ್ಲಿ ಮತ್ತು ನಮ್ಮ recovery ಯಲ್ಲಿ ಮೋಸ ಮಾಡುತ್ತಿದ್ದಾರೆಂದು ರೈತರು ಘೋಷಣೆ ಕೂಗುತ್ತಾ ಹೋರಾಟವನ್ನು ಮಾಡುತ್ತಾರೆ. ಅದಕ್ಕಾಗಿ sealed cabin ಒಳಗಡೆ ನಾನು ಕಷ್ಟಪಟ್ಟು ಬೆಳೆದಿರುವಂತಹ ಕಬ್ಬಿನ recovery ಯಾವುದೇ ಕಾರ್ಖಾನೆಯು ಮೋಸ ಮಾಡದೆ ಇರುವಂತಹದ್ದನ್ನು ತಾವು ನೋಡಿಕೊಳ್ಳಿ ಎಂದು ಹೇಳುತ್ತಾರೆ. ಇದು ರಾಜ್ಯ ಸರ್ಕಾರದ ಜವಾಬ್ದಾರಿ ಅಲ್ಲವೇ ? ರೈತನ recovery ಯಲ್ಲಿ ಮೋಸ ಆಗದೆ ಇರುವಂತಹ ರೀತಿಯಲ್ಲಿ ನೋಡಿಕೊಳ್ಳುವುದು, ಆ ಬದ್ಧತೆಯನ್ನು ಸರ್ಕಾರವು ತೋರಿಸಬೇಕಾಗಿತ್ತು. ಅದೇ ರೀತಿಯಾಗಿ cost of conversion, ಒಂದೊಂದು ಕಾರ್ಖಾನೆಯು ಒಂದೊಂದು ರೀತಿ ಮಾಡುತ್ತಿದೆ, ಒಂದು ಟನ್ ಕಬ್ಬನ್ನು ಹೊಲದಿಂದ factory ವರೆಗೆ ತಂದು ಆ ಕಬ್ಬಿನಿಂದ ಸಕ್ಕರೆ

ಮತ್ತು ಬಗಾಸ್, ಸ್ಪಿರಿಟ್, co-generation, ethanol ಎಲ್ಲವನ್ನು conversion ಮಾಡುವುದಕ್ಕೆ ಎಷ್ಟು cost ಆಗುತ್ತದೆ ? ಒಂದು ಟನ್ ಕಬ್ಬನ್ನು ನೀನು ಸಕ್ಕರೆಯನ್ನಾಗಿ ಪರಿವರ್ತನೆ ಮಾಡುವುದಕ್ಕೆ ನೀನು ಇಷ್ಟೇ ಸಿದ್ದತೆಯನ್ನು ಮಾಡಿಕೊಳ್ಳಬೇಕು, cost of conversion ಇಷ್ಟೇ ಆಗಬೇಕು, ಅದಕ್ಕಿಂತ ನೀನು ಜಾಸ್ತಿ ತೋರಿಸುತ್ತೇನೆಂದು ಹೇಳಿದರೆ ಸರ್ಕಾರವು ಅದನ್ನು ಒಪ್ಪಿಕೊಳ್ಳುವುದಿಲ್ಲ. ರೈತನನ್ನು ಎಲ್ಲೋ ಒಂದು ಕಡೆ ಲೂಟಿ ಮಾಡಿದಂತಾಗುತ್ತದೆ ಎನ್ನುವ ಬಗ್ಗೆ ಸರ್ಕಾರವು ಒಂದು ನಿರ್ದೇಶನವನ್ನು ಕೊಡಬೇಕಾಗಿತ್ತಲ್ಲಾ ? ಒಂದೊಂದು ಕಾರ್ಖಾನೆ ಒಂದೊಂದು cost of conversion ಅನ್ನು ತೋರಿಸುತ್ತಾರೆ. ಈ ನಿಟ್ಟಿನಲ್ಲಿ ರೈತರಿಗೆ ಬಹಳಷ್ಟು ಮೋಸ ನಡೆಯುತ್ತಿದೆ. ಸರ್ಕಾರವು ಘೋಷಣೆಯನ್ನು ಮಾಡಿದ ಮೇಲೆ ಇಲ್ಲಿಯವರೆಗೆ ಒಂದು ಟನ್ ಕಬ್ಬಿಗೆ 2500 ರೂಪಾಯಿಗಳು ನೀವು ಕೊಡುವುದಕ್ಕೆ ಸಾಧ್ಯತೆ ಇದೆ. ಅದಕ್ಕಾಗಿ ನನ್ನ ಹತ್ತಿರ ಈ ರೀತಿಯಾಗಿ ಸಂಶೋಧನೆ ಇದೆ. ಅದಕ್ಕಾಗಿ ನಾನು ಒಂದು ಸಮಿತಿಯನ್ನು ಮಾಡಿದ್ದೇನೆಂದು ಎಂದು ಹೇಳುವಂತಹ ಸ್ಥಿತಿಯಲ್ಲಿ ಸರ್ಕಾರವು ಇಲ್ಲ. ಅದಕ್ಕಾಗಿ ನಾನು ಇವತ್ತು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ ಸರ್ಕಾರವು ಒಂದು ಟನ್ ಕಬ್ಬಿಗೆ 2500 ರೂಪಾಯಿಗಳಂತೆ ಕೊಡಿಸುತ್ತೇನೆಂದು ಹೇಳಿದರೆ ಈ ಬಗ್ಗೆ ಸರ್ಕಾರಕ್ಕೆ ಖಚಿತವಾದಂತಹ ಮಾಹಿತಿ ಇತ್ತು ವಿಚಾರ ಮತ್ತು ಸಂಶೋಧನೆ ಬದ್ಧತೆ ಇತ್ತು ಅದಕ್ಕಾಗಿ ಮೊದಲು ಸರ್ಕಾರವು ಪ್ರತಿ ಟನ್ ಕಬ್ಬಿಗೆ 2500 ರೂಪಾಯಿಗಳಂತೆ ಕೊಡಲಿ. ಆನಂತರ ಕಾರ್ಖಾನೆಯಿಂದ ಅದನ್ನು ವಸೂಲು ಮಾಡಿಕೊಳ್ಳುವುದಕ್ಕೆ supersede ಮಾಡಲಿ, seize ಮಾಡಿಕೊಳ್ಳಲಿ ಅಥವಾ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿ, ಅದಕ್ಕಾಗಿ ಇವತ್ತಿನ ದಿವಸ ರೈತರುಗಳು ಹೋರಾಟವನ್ನು ಮಾಡುತ್ತಿದ್ದಾರೆ. ಈ ಸರ್ಕಾರವು ರೈತರು ಏನು ಹೋರಾಟ ಮಾಡುತ್ತಿದ್ದಾರೆ ಅದಕ್ಕೆ ಬದ್ಧತೆಯನ್ನು ತೋರಿಸಬೇಕು ಪ್ರತಿ ಟನ್‌ಗೆ ಸರ್ಕಾರವು ಘೋಷಣೆ ಮಾಡಿರುವಂತೆ ಕಾರ್ಖಾನೆಯಿಂದ ಪ್ರತಿ ಟನ್‌ಗೆ 2500 ರೂಪಾಯಿಗಳಂತೆ ಮತ್ತೆ 150 ರೂಪಾಯಿಗಳು ಕೊಡಬೇಕು. ಸರ್ಕಾರವು ಇನ್ನು ಅರ್ಧ ಕೊಡುವುದು ಬಾಕಿ ಉಳಿಸಿಕೊಂಡಿದೆ. ಅದನ್ನು ಕೊಡುವುದರ ಮೂಲಕ ರೈತರ ಪರವಾದಂತಹ ಸರ್ಕಾರ ಎನ್ನುವಂತಹ ಸಂದೇಶವನ್ನು ಈ ರಾಜ್ಯಕ್ಕೆ ಕೊಡಬೇಕೆಂದು ಹೇಳುತ್ತಾ ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಈಗ ಸರ್ಕಾರದಿಂದ ಉತ್ತರ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಮಾನ್ಯ ಸಹಕಾರ ಸಚಿವರು ಮತ್ತು ಸಕ್ಕರೆ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಕಬ್ಬು ಬೆಳಗಾರರಿಗೆ ಹಣ ಪಾವತಿ ಮಾಡಿಲ್ಲ ಎನ್ನುವಂತಹ ವಿಚಾರದಲ್ಲಿ ನಿಯಮ 60ರ ಅಡಿಯಲ್ಲಿ ನಿಲುವಳಿ ಸೂಚನೆಯನ್ನು ತಂದಿದ್ದು, ಅದನ್ನು ನಿಯಮ 69ರ ಅಡಿಯಲ್ಲಿ ಚರ್ಚಿಸಲು ಮಾನ್ಯ ಸಭಾಧ್ಯಕ್ಷರು ಅವಕಾಶ ನೀಡಿದ್ದಾರೆ. ಈ ಬಗ್ಗೆ ಸದನದಲ್ಲಿ ಮಾನ್ಯ

ವಿರೋಧಪಕ್ಷದ ನಾಯಕರು, ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ. ಕುಮಾರಸ್ವಾಮಿಯವರು, ಶ್ರೀ ಗೋವಿಂದ ಎಂ. ಕಾರಜೋಳರವರು, ಶ್ರೀ ಲಕ್ಷ್ಮಣ ಸಂಗಪ್ಪ ಸವದಿ, ಶ್ರೀ ಕೆ.ಎಸ್. ಪುಟ್ಟಣ್ಣಯ್ಯನವರು, ಶ್ರೀ ಪಿ. ರಾಜೀವ್‌ರವರು ಇನ್ನು ಮುಂತಾದವರೆಲ್ಲರೂ ಸರ್ಕಾರದ ಗಮನ ಸೆಳೆದಿದ್ದಾರೆ. ಈ ವರ್ಷಕ್ಕೆ ಹಿಂದೆ ಕಬ್ಬಿನ ಬೆಲೆಯನ್ನು ನಿಗದಿಪಡಿಸುವುದಕ್ಕೆ ಯಾವುದೇ ಒಂದು ವಿಧೇಯಕವು ರಾಜ್ಯದಲ್ಲಿ ಇರಲಿಲ್ಲ. ಹಿಂದಿನ ಸರ್ಕಾರದ ಕೊನೆಯ ಅಧಿವೇಶನದಲ್ಲಿ, ಬೆಳಗಾಂ ಅಧಿವೇಶನದಲ್ಲಿ ಈ ವಿಧೇಯಕವನ್ನು ಸದನದಲ್ಲಿ ಮಂಡಿಸಿ ಅದನ್ನು ತರಲಾಯಿತು. ಆ ವಿಧೇಯಕವನ್ನು ತಂದ ನಂತರ ನಮ್ಮ ರಾಜ್ಯದಲ್ಲಿ ಆ ವಿಧೇಯಕದ ಅಡಿಯಲ್ಲಿ ಬೆಲೆ ನಿಗಧಿಪಡಿಸುವಂತಹ ಒಂದು ತೀರ್ಮಾನ ಕೈಗೊಳ್ಳಲಾಗಿದೆ. ಅದಕ್ಕಿಂತಲೂ ಹಿಂದೆ sugar control order 1966 ಪ್ರಕಾರ ರಾಜ್ಯದಲ್ಲಿ SAP-FRP ಅಡಿಯಲ್ಲಿ ಬೆಲೆ ನಿಗದಿಪಡಿಸುವಂತಹ ಒಂದು ವಿಧಾನ ಇತ್ತು. ಆಗ ಸರ್ಕಾರದ ನೇರವಾದ ಹಸ್ತಕ್ಷೇಪ ಇರಲಿಲ್ಲ. ಕಾರ್ಖಾನೆಗಳು ಮತ್ತು ರೈತರು ಒಪ್ಪಂದವನ್ನು ಮಾಡಿಕೊಂಡು ಬೆಲೆಯನ್ನು ನಿಗದಿಪಡಿಸಿ ಕಬ್ಬನ್ನು factory ಗೆ supply ಮಾಡುತ್ತಿದ್ದರು. ನಮ್ಮ ಸರ್ಕಾರವು ಅಸ್ತಿತ್ವಕ್ಕೆ ಬಂದು ನಂತರ, ಈ ಒಂದು ವಿಧೇಯಕದ ಅಡಿಯಲ್ಲಿ, ಇರತಕ್ಕಂತಹ ಕಬ್ಬಿಗೆ ಬೆಲೆ ಮತ್ತು ಸಾಗಾಣಿಕೆಯ ವೆಚ್ಚ ನಿಗದಿಪಡಿಸುವಂತಹ ಒಂದು ಸಮಿತಿಯನ್ನು ಸಕ್ಕರೆ ಸಚಿವರ ಅಧ್ಯಕ್ಷತೆಯಲ್ಲಿ constitute ಮಾಡಿ ಅದಕ್ಕೆ ಕೃಷಿ ಸಚಿವರು ಮತ್ತು ಸಹಕಾರ ಸಚಿವರನ್ನೂ ಕೂಡ ಸದಸ್ಯರನ್ನಾಗಿ ನೇಮಕ ಮಾಡಿ ರೈತ ಪ್ರತಿನಿಧಿಗಳೂ ಸಕ್ಕರೆ ಕಾರ್ಖಾನೆಯ ಪ್ರತಿನಿಧಿಗಳು, ಅಧಿಕಾರಿಗಳು ಒಳಗೊಂಡಂತಹ ಸಮಿತಿ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದ ಮೇಲೆ ಆ ಸಮಿತಿಯು ಮೂರು ಸಭೆಗಳನ್ನು ಸೇರಿ ಈ ರಾಜ್ಯದಲ್ಲಿ ಕಬ್ಬಿಗೆ ಯಾವ ರೀತಿಯಾಗಿ ಬೆಲೆಯನ್ನು ನಿಗದಿಪಡಿಸಬೇಕು ಎನ್ನುವಂತಹ ತೀರ್ಮಾನ ಕೈಗೊಂಡಿದೆ. FRP ಏನು 9.5 recovery ಗೆ 2100 ರೂ.ಗಳಂತೆ ಕೇಂದ್ರ ಸರ್ಕಾರವು ನಿಗದಿಪಡಿಸಿದೆ ಅದರ ಆಧಾರದ ಮೇಲೆ ಕನಿಷ್ಠ 2100 ರೂಪಾಯಿಗಳಂತೆ ಕೊಡಲೇಬೇಕು. ಅದರ ಮೇಲೆ ಎಷ್ಟು ಕಬ್ಬು ಎಷ್ಟು ಇಳುವರಿ ಬರುತ್ತದೆ, ಸಕ್ಕರೆಯು ಎಷ್ಟು recovery ಆಗುತ್ತದೆ. ಅದರ ಮೇಲೆ ಒಂದು ಪಾಯಿಂಟ್‌ಗೆ 21 ರೂಪಾಯಿಗಳಂತೆ ಹೆಚ್ಚಿಸುತ್ತಾ ಹೋಗಬೇಕೆಂದು ಹೇಳಿ ಆದೇಶ ಇದೆ.

ಅದನ್ನೆಲ್ಲಾ ನಾವು ಗಮನದಲ್ಲಿಟ್ಟುಕೊಂಡು ಸುಮಾರು 12 ಫ್ಯಾಕ್ಟರಿಗಳು ದಕ್ಷಿಣ ಭಾಗದಲ್ಲಿರತಕ್ಕಂಥ ಫ್ಯಾಕ್ಟರಿಗಳಲ್ಲಿ ಸಾಮಾನ್ಯವಾಗಿ ಇಳುವರಿ 9 1/2, 10, 8 1/2, 9 ಇರುವಂಥ ಫ್ಯಾಕ್ಟರಿಗಳು ಇವೆ. ಹಾಗಾಗಿ ಈ 12 ಫ್ಯಾಕ್ಟರಿಗಳಿಗೆ ಒಂದು ex-gate ಎಂದರೆ ರೈತ ಫ್ಯಾಕ್ಟರಿಗೆ ಕಬ್ಬನ್ನು ಸರಬರಾಜು ಮಾಡತಕ್ಕಂಥದ್ದು. ಉಳಿದಂಥ 42 ಕಾರ್ಖಾನೆಗಳಿಗೆ ಅಲ್ಲಿ ex-field ಎಂದು ಹೇಳಿ average 11 ಇಳುವರಿ ಬರುವಂಥದ್ದನ್ನು ನಾವು ಗಮನಕ್ಕೆ ತೆಗೆದುಕೊಂಡು 2500 ರೂ.ಗಳನ್ನು ಆ ex-field ಎಂದು ನಿಗದಿಯನ್ನು ಪಡಿಸಿದ್ದೆವು. ಕಬ್ಬು ಸರಬರಾಜು ಆದ ಕೂಡಲೇ

ಅವರು 14 ದಿವಸದಲ್ಲಿ ಪಾವತಿ ಮಾಡಬೇಕೆಂದು ಕಾಯಿದೆಯಲ್ಲಿಯೇ ಇದೆ. ಅದನ್ನು ರಾಜ್ಯ ಸರ್ಕಾರ ಮಾಡುವುದಕ್ಕೆ ಮುಂಚೆ ನಾನಾ ವಿಚಾರಗಳು ಅದರಲ್ಲಿ ಇವೆ. ಈ ಸದನದ ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣಯ್ಯನವರು ಆ ಸಮಿತಿಯಲ್ಲಿದ್ದಾರೆ. ಅದರಲ್ಲಿ ನಾವು ಈ ರೆಕವರಿಯ ಜೊತೆಗೆ ಅಲ್ಲಿ ಇತರ ಉತ್ಪನ್ನಗಳು ಫ್ಯಾಕ್ಟರಿಯಿಂದ ಆಗುತ್ತವೆ. ಅದು ಕಾಕಂಬಿ ಇರಬಹುದು, ಮೊಲಾಸಿಸ್ ಇರಬಹುದು, ಮಡ್ ಇರಬಹುದು, ಪ್ರೆಸ್ ಮಡ್, ಕೋಜೆನ್ ಇರಬಹುದು. ಇವನ್ನೆಲ್ಲಾ ಗಮನಿಸಿಕೊಂಡು overall ಒಂದು ರೇಟ್‌ನ್ನು ಫಿಕ್ಸ್ ಮಾಡಿದ್ದು ಉಂಟು. ಆದಾದ ಮೇಲೆ ಬೆಳಗಾಂ ಅಧಿವೇಶನದಲ್ಲಿ ಫ್ಯಾಕ್ಟರಿಯವರಿಗೆ ನೀವು ರೈತರಿಗೆ ex-gate ಮತ್ತು ex-field ನಲ್ಲಿ ರೂ. 2500 ಪಾವತಿ ಮಾಡಬೇಕೆಂದು ಸರ್ಕಾರ ಕೂಡ ಹೇಳಿದೆ. ಇವತ್ತು ಕೂಡ ಸರ್ಕಾರ ಆ ನಿಲುವಿಗೆ ಬದ್ಧವಾಗಿದೆ. ಅದರಲ್ಲಿ ಯಾವುದೇ ಅನುಮಾನವಿಲ್ಲ. ಆದರೆ ಈ ಒಂದು ವಿಚಾರದಲ್ಲಿ ವಿಳಂಬ ಮಾಡುತ್ತಿದ್ದಾರೆ. ರೈತರಿಗೆ ಹಣದ ಪಾವತಿ ಆಗುತ್ತಿಲ್ಲವೆನ್ನುವ ಒಂದು ಕಾರಣಕ್ಕೆ ನಾವು ಜಿಲ್ಲಾಧಿಕಾರಿಗಳ ಮುಖಾಂತರ ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೆ notice ನ್ನು ಜಾರಿ ಮಾಡಿರುತ್ತೇವೆ. ನಾವು ಆ notice ನ್ನು ಈ ವಿಧೇಯಕದ ಅಡಿಯಲ್ಲಿ 2500 ರೂ.ಗಳ ಹಣವನ್ನು ನೀವು ಪಾವತಿ ಮಾಡುತ್ತಿಲ್ಲ, ಏಕೆ ನಿಮ್ಮ ಮೇಲೆ ನಾವು ಕ್ರಮ ತೆಗೆದುಕೊಳ್ಳಬಾರದೆಂದು ನಾವು notice ನ್ನು ಜಾರಿ ಮಾಡಿದ ಕಾರಣ ಆ notice ನ್ನು question ಮಾಡಿ 4–6 ಸಕ್ಕರೆ ಕಾರ್ಖಾನೆಯವರು ಹೈಕೋರ್ಟಿಗೆ ರಿಟ್ ಹೋದರು. ರಿಟ್ ಹೋದ ಮೇಲೆ ನಾವೇನು ಈ ವಿಧೇಯಕದಲ್ಲಿ ಇದಕ್ಕೆ 2500 ರೂ.ಗಳು ಎಂದು ನಾವು ನಿಗದಿಪಡಿಸಿದ್ದೆವು. ಅದಕ್ಕೆ ಹೈಕೋರ್ಟ್‌ನಲ್ಲಿ ಒಂದು ತಡೆಯಾಜ್ಞೆಯನ್ನು ಜುಲೈ 31 ರವರೆಗೆ ನೀಡಿದರು. ನಮ್ಮ ಸರ್ಕಾರದ ವಿರೋಧ ಪಕ್ಷದ ನಾಯಕರು ಈಗಾಗಲೇ ಹೈಕೋರ್ಟಿನ ಜಡ್ಜಮೆಂಟ್‌ನ್ನು ಕೂಡ ಓದಿದ್ದಾರೆ. ಅದರ ಪ್ರಕಾರವೆ FRP ಏನು ಇದೆ ಅದನ್ನು ರೈತರಿಗೆ ಪಾವತಿ ಮಾಡಿಸುವುದಕ್ಕೆ ಏನೂ ಅಡ್ಡಿ ಆತಂಕಗಳು ಇಲ್ಲ ಪಾವತಿ ಮಾಡಿಸಬಹುದೆಂದು ಹೈಕೋರ್ಟ್ ಕೂಡ ಸೂಚನೆಯನ್ನು ಮಾಡಿದೆ. ನಮ್ಮ ತೀರ್ಮಾನದ ವಿಧೇಯಕಕ್ಕೆ ಒಂದು ತಡೆಯಾಜ್ಞೆ ಇದ್ದುದರಿಂದ ನಾವು FRP ಪ್ರಕಾರ ನೀವು ಹಣ ಪಾವತಿ ಮಾಡಬೇಕೆಂದು ಕೋರ್ಟ್ ಆದೇಶ ಬಂದು ನಮ್ಮ ಕೈಗೆ ಸೇರಿದ ನಾಲ್ಕೇ ದಿವಸದಲ್ಲಿ ನಮ್ಮ sugar commissioner ರವರು ಎಲ್ಲಾ 60 Sugar factory ಯವರಿಗೆ ಕೂಡ notice ನ್ನು ಜಾರಿ ಮಾಡಿ 7 ದಿವಸದಲ್ಲಿ ನೀವು ನಿಮ್ಮ ನಿಮ್ಮ ಫ್ಯಾಕ್ಟರಿಗೆ ಏನೇನು payment ಮಾಡಿದ್ದೀರಿ ಏನು ರೆಕವರಿ ಇದೆ ಮತ್ತು ನೀವು ಯಾವ ರೀತಿ transportation, payment ಮಾಡಿದ್ದೀರಿ ಎನ್ನುವ ಎಲ್ಲವನ್ನೂ ಕೇಳಿದ್ದಾರೆ. ಅದರಂತೆ ನಮಗೆ 60 ಫ್ಯಾಕ್ಟರಿಗಳಲ್ಲಿ 6 ಕಾರ್ಖಾನೆಯವರು ನಮಗೆ ಯಾವುದೇ ರೀತಿಯ ಉತ್ತರವನ್ನೂ ಇದುವರೆಗೆ ಕಳುಹಿಸಿರುವುದಿಲ್ಲ. ಉಳಿದಂತಹ 54 ಫ್ಯಾಕ್ಟರಿಯವರೂ ಕೂಡ ಉತ್ತರ ಕೊಟ್ಟಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಆ ಫ್ಯಾಕ್ಟರಿಯವರ ಹೆಸರನ್ನು ಹೇಳಿ.

ಶ್ರೀ ಲಕ್ಷ್ಮಣ ಸವದಿ : ಯಾರು notice ಗೆ ಉತ್ತರವನ್ನು ಕೊಟ್ಟಿಲ್ಲವೆನ್ನುವುದನ್ನು ಮತ್ತು ಯಾರ್ಯಾರು ಬಿಲ್ ಕೊಟ್ಟಿಲ್ಲವೆನ್ನುವುದನ್ನೂ ಹೇಳುತ್ತಾರೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಹೇಳುತ್ತೇನೆ. ಇದರಲ್ಲಿ ಏನು ಮುಚ್ಚುಮರೆ ಇಲ್ಲ. ನಾನು ಅದೇ ವಿಷಯಕ್ಕೆ ಬರುತ್ತೇನೆ. ಕೋರ್ಟ್ ಆದೇಶದ ಅನ್ವಯ FRP ಪ್ರಕಾರ ಎಲ್ಲರಿಗೂ ಪಾವತಿ ಮಾಡಬೇಕೆಂದು notice ನ್ನು ಮೇ ಕೊನೆಯಲ್ಲಿ ಕೊಟ್ಟಿರುತ್ತೇವೆ. ಒಂದು ವಾರದವರೆಗೆ ಅವರಿಗೆ ರಿಪ್ಲೈ ಕೊಡುವುದಕ್ಕೆ ಟೈಮ್‌ನ್ನು ಕೊಟ್ಟಿದ್ದೆವು. 7–8ನೇ ತಾರಿಕಿನಲ್ಲಿ ಅವರಿಂದ ನಾವು ರಿಪ್ಲೈ ನಿರೀಕ್ಷೆ ಮಾಡುತ್ತಿದ್ದೆವು. ಮಧ್ಯದಲ್ಲಿ 2–3 ದಿವಸ ರಜೆ ಬಂದಿರುವುದರಿಂದ ಆ statement ಎಲ್ಲವನ್ನೂ consolidate ಮಾಡಿ ಮತ್ತೆ ಒಂದು ಸಲ ಆ ಕಾರ್ಖಾನೆಯ ಮಾಲೀಕರ ಸಭೆಯನ್ನು 4–5 ದಿವಸದ ಹಿಂದೆ ಕರೆದಿದ್ದೆ. ಸಭೆ ಕರೆದಾಗ ಎಲ್ಲಾ ಭಾಗವಹಿಸಿ, ಕೆಲವರು ಏನು payment ಮಾಡಿದ್ದಾರೆ, ಅದೆಲ್ಲವನ್ನು statement ಕೊಟ್ಟಿದ್ದಾರೆ. ಅದಕ್ಕೆ ನಾವು ನೀವು FRP ಪ್ರಕಾರ Payment ಮಾಡದಿದ್ದರೆ ನಿಮ್ಮ ಮೇಲೆ ಕಠಿಣವಾದ ಕ್ರಮ ಈ ಕ್ಷಣದಿಂದಲೇ ಜರುಗಿಸಬೇಕಾಗುತ್ತದೆಂದು ಅವರಿಗೆ ಒಂದು ಸೂಚನೆಯನ್ನು ಕೊಟ್ಟು ಈಗಾಗಲೇ ನಾವು ಸರ್ಕಾರ 18 ಕಾರ್ಖಾನೆಗಳ ಮ್ಯಾನೇಜ್‌ಮೆಂಟ್‌ಗಳಿಗೆ Recovery Certificate ನ್ನು ಶನಿವಾರ ಜಾರಿಗೊಳಿಸಿದ್ದೇವೆ. ಅದರಂತೆ ಈ 18 ಫ್ಯಾಕ್ಟರಿಗಳನ್ನು ಹೊರತು ಪಡಿಸಿ ಉಳಿದ ಫ್ಯಾಕ್ಟರಿಗಳು ಅವರು ಕೊಟ್ಟಿರುವಂಥ statement ಗಳಲ್ಲಿ FRP ಪ್ರಕಾರ ಹಣ ಪಾವತಿ ಮಾಡಿರುವಂಥ ಮಾಹಿತಿ ನಮಗೆ ದೊರಕಿರುವುದರಿಂದ ಆ 42 ಫ್ಯಾಕ್ಟರಿಗಳನ್ನು ಹೊರತು ಪಡಿಸಿ ಉಳಿದಂಥ 18 ಕಾರ್ಖಾನೆಗಳಿಗೆ ಈಗಾಗಲೇ ನಾವು Recovery Certificate ನ್ನು issue ಮಾಡಿದ್ದೇವೆ. ಅದನ್ನು ಮುಂದೆ ಜಿಲ್ಲಾಧಿಕಾರಿಗಳು ಆ 18 ಫ್ಯಾಕ್ಟರಿಗಳ ಮೇಲೆ ಕ್ರಮ ಜರುಗಿಸಿ ಆ Sugar ನ್ನು ತಮ್ಮ ವಶಕ್ಕೆ ತೆಗೆದುಕೊಂಡು ರೈತರಿಗೆ ಪಾವತಿ ಮಾಡುವಂಥ ಕೆಲಸಗಳು ಆಗುತ್ತದೆ. ತಾವು ಹೇಳಿದಂತೆ 2500 ರೂ.ಗಳಂತೆ payment ಮಾಡಬೇಕೆಂದರೆ ಇನ್ನೂ 2100 ಕೋಟಿ ರೂ.ಗಳಷ್ಟು ಬಾಕಿ ಬರಬೇಕು. ಆದರೆ FRP ಪ್ರಕಾರ ex-gate ಮತ್ತು ex-field ಎನ್ನುವುದನ್ನು ನೀವು ಖಚಿತ ಮಾಡಿಕೊಳ್ಳಬೇಕೆಂದು ಅವರು ಹೇಳಿದರು. FRP ಪ್ರಕಾರ ಅವರದ್ದು ex-gate ಎಂದು ಇದೆ. ಅವರದು ex-gate ನಲ್ಲಿ 2100 ರೂ.ಗಳು ಎಂದು ಲೆಕ್ಕ ನಮ್ಮ ರಾಜ್ಯದ ಒಂದು ಪರಿಸ್ಥಿತಿ ಮತ್ತು ಹಿಂದಿನ ಒಂದು ಸಂಪ್ರದಾಯವನ್ನು ಬೆಳೆದುಕೊಂಡು ಬಂದಿದೆ. ಆ ಭಾಗದಲ್ಲಿರುವ ಎಂದರೆ ಫ್ಯಾಕ್ಟರಿಯವರು ಕಬ್ಬು ಇರುವ ಜಾಗದಿಂದ ತರುತ್ತಿರುವಂಥದ್ದು ಅದರ ಮೇಲೆ ನಾವು ex-gate ಮತ್ತು ex-field ಎಂದು ನಾವು ನಮ್ಮ ರಾಜ್ಯದಲ್ಲಿ ಮಾಡಿರುತ್ತೇವೆ. ಆದರೆ sugar control

order ಪ್ರಕಾರ FRP ಪ್ರಕಾರ ನಿಗದಿ ಪಡಿಸಿರುವುದು ex-gate ನಲ್ಲಿ. So, ಅವರು ಆ ex-gare ಆಧಾರದ ಮೇಲೆ Payment ಮಾಡಿರುವಂಥ ಲೆಕ್ಕಾಚಾರದಲ್ಲಿ 42 ಫ್ಯಾಕ್ಟರಿಯವರು ಹಣ ಪಾವತಿಯನ್ನು ಮಾಡಿರುತ್ತಾರೆ. ಇನ್ನು 18 ಫ್ಯಾಕ್ಟರಿಯವರಿಗೆ ಈಗಾಗಲೇ notice ಅನ್ನು ಜಾರಿ ಮಾಡಿದ್ದೇವೆ. ಆ 18 ಫ್ಯಾಕ್ಟರಿಗಳು ಯಾವುವು ಎನ್ನುವುದನ್ನು ನಾನು ಸದನದಲ್ಲಿ ಮುಂದೆ ಪ್ರಸ್ತಾಪ ಮಾಡುತ್ತೇನೆ. ಇದರ ಜೊತೆಗೆ ದೀರ್ಘವಾದ ಉತ್ತರವನ್ನು ಓದುವ ಅವಶ್ಯಕತೆ ಇಲ್ಲವೆಂದು ನಾನು ಭಾವಿಸುತ್ತೇನೆ. ಈ ರಾಜ್ಯದಲ್ಲಿ 60 ಲಕ್ಷ ಜನ ಹಿಡುವಳಿ ರೈತರು ಇದ್ದಾರೆ. ಅದರಲ್ಲಿ 5 ಲಕ್ಷ ಜನ ರೈತರು ಕಬ್ಬು ಬೆಳೆಯುವವರು ಇದ್ದಾರೆ. ಹಾಗಾಗಿ ಈ 5 ಲಕ್ಷ ಜನ ರೈತರು ಈ 60 ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಅರೆಯುವುದಕ್ಕೆ ಕೊಡುತ್ತಾರೆ. ಸಕ್ಕರೆ ಕಾರ್ಖಾನೆಗಳವರು ಸಕ್ಕರೆಯನ್ನು ಮಾರಾಟ ಮಾಡಿ ಹಣ ಕೊಡಬೇಕು ಇಲ್ಲವೆ ಅವರು ಸಾಲ ತೆಗೆದುಕೊಂಡು ಅಥವಾ ಅವರಲ್ಲಿ ಇರುವ ಹಣದಲ್ಲಿ ರೈತರಿಗೆ ಹಣ ಪಾವತಿ ಮಾಡಬೇಕು. ಈ ಕಾರಣಕ್ಕಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹಿಂದೆ 100 ರೂ.ಗಳ ಟ್ಯಾಕ್ಸ್, ವ್ಯಾಟ್, ಸೆಸ್, ಏನು ಕಾರ್ಖಾನೆಯ ಮೇಲೆ ಹಾಕುತ್ತಿದ್ದೆವು ಅದನ್ನೂ ಕೂಡ ನಾವು FRP 1700 ಇದ್ದಾಗಲೇ ಕಾರ್ಖಾನೆಯವರು 2400 ರೂ.ಗಳನ್ನು ಕಳೆದ ಬಾರಿ ಕೊಟ್ಟಿದ್ದಾರೆ. ರೈತರಿಗೆ ತೊಂದರೆ ಆಗಬಾರದು. ಕಳೆದ ವರ್ಷ ಸಕ್ಕರೆ ಬೆಲೆ 31 ರೂ.ಗಳು ಇತ್ತು. ನಾವು ಹೆಚ್ಚಿಗೆ ಅಂದರೆ 2400 ರೂ.ಗಳನ್ನು ಕೊಟ್ಟಿದ್ದೆವು. ಈಗ ಸಕ್ಕರೆ ಬೆಲೆ 26 ರೂ.ಗಳು ಆಗಿದೆ. ಆ ಕಾರಣಕ್ಕಾಗಿ ಆ ಪ್ರಮಾಣದಲ್ಲಿ ಹಣ ಕೊಡುವುದಕ್ಕಾಗುವುದಿಲ್ಲವೆಂದು ನಮ್ಮ ಸಮಿತಿಯಲ್ಲಿಯೂ ಕೂಡ ಕಾರ್ಖಾನೆಯ ಪ್ರತಿನಿಧಿಗಳು ಪ್ರಸ್ತಾಪ ಮಾಡಿದ್ದರು. ಅದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದ ಮೇಲೆ ಅವರು 100 ರೂ.ಗಳು ಏನಿದೆ ಅದನ್ನು ನಾವು ಒಂದು ವರ್ಷದ ಅವಧಿಗೆ ಮನ್ನಾ ಮಾಡೋಣ, ಅದನ್ನು ಅವರು ರೈತರಿಗೆ ಸೇರಿಸಿ 2500 ರೂ.ಗಳನ್ನು ರೈತರಿಗೆ ಕೊಡಲಿ ಎನ್ನುವ ಒಂದು ತೀರ್ಮಾನವನ್ನು ರೈತರ ಪರವಾಗಿ ಸರ್ಕಾರ ಕೈಗೊಂಡಿರುವಂಥದ್ದು. ಆದಾದ ನಂತರ ಇದಕ್ಕೆ ಇನ್ನೂ ಬೇಡಿಕೆ ಮತ್ತು ಒತ್ತಡ ಬೆಳಗಾಂ ಅಧಿವೇಶನದಲ್ಲಿ ಬಂದ ನಂತರ 150 ರೂ.ಗಳನ್ನು ಒಂದು ಟನ್ ಕಬ್ಬಿಗೆ ಹೆಚ್ಚುವರಿಯಾಗಿ ಕೊಡುವುದಕ್ಕೆ ಸರ್ಕಾರದವರು ಘೋಷಣೆ ಮಾಡಿದರು. ಅದಕ್ಕೆ 587 ಕೋಟಿ ರೂ.ಗಳು ಸರ್ಕಾರ ಹೆಚ್ಚುವರಿಯಾಗಿ ರೈತರಿಗೆ ಈ ಒಂದು ಬಾಬ್ತಿನಲ್ಲಿ ಕೊಟ್ಟಿದೆ. ಅದರಲ್ಲಿ 398 ಕೋಟಿ ರೂ.ಗಳನ್ನು ಈಗಾಗಲೇ ಜಿಲ್ಲಾಧಿಕಾರಿಗಳ ಮುಖಾಂತರ ಡಿಸೆಂಬರ್ ವರೆಗೆ ಕೊಟ್ಟಿತ್ತು. ಉಳಿದಂಥ 189 ಕೋಟಿ ರೂ.ಗಳನ್ನು ಈಗ ಒಂದು ವಾರದ ಹಿಂದೆ ಬಿಡುಗಡೆ ಮಾಡಿ ಜಿಲ್ಲಾಧಿಕಾರಿಗಳಿಂದ ಪೂರ್ಣವಾಗಿ ಹಣವನ್ನು ರೈತರಿಗೆ ತಲುಪಿಸುವಂಥ ಕೆಲಸವನ್ನು ಮಾಡಿದೆ. ಹಾಗಾಗಿ ಸರ್ಕಾರ ಏನು 150 ರೂ.ಗಳನ್ನು ಕೊಡುತ್ತೇವೆ ಎಂದು ಘೋಷಣೆ ಮಾಡಿತ್ತು ಆ ಹಣದಲ್ಲಿ ನಾವು ಒಂದು ರೂಪಾಯಿಯನ್ನೂ ಉಳಿಸಿಕೊಂಡಿಲ್ಲ.

ಅದನ್ನು ಪೂರ್ಣವಾಗಿ ರೈತರಿಗೆ ತಲುಪಿಸುವಂತಹ ಕೆಲಸ ಮಾಡಿದ್ದೇವೆ. ಈಗಾಗಲೇ 398 ಕೋಟಿ ರೂ.ಗಳು ತಲುಪಿದೆ. 189 ಕೋಟಿ ರೂ.ಗಳನ್ನು ಇನ್ನು 4-6 ದಿವಸದೊಳಗೆ ತಲುಪಿಸಲಾಗುವುದು. ಈಗಾಗಲೇ ಹಣಕಾಸು ಇಲಾಖೆಯಿಂದ ಮಂಜೂರಾಗಿದೆ. ಅದನ್ನು ರೈತರಿಗೆ ತಲುಪಿಸುವಂತಹ ಕೆಲಸ ಆಗುತ್ತದೆ. ಆದ್ದರಿಂದ ಸರ್ಕಾರ ಏನು 150 ರೂ.ಗಳನ್ನು ಕೊಡಬೇಕಾಗಿತ್ತು ಅದರಲ್ಲೂ ಯಾವುದೇ ಹಣವನ್ನು ಬಾಕಿ ಉಳಿಸಿಕೊಂಡಿಲ್ಲ. ಅದನ್ನು ಪೂರ್ಣವಾಗಿ ತಲುಪಿಸುವಂತಹ ಕೆಲಸ ಮಾಡಿದೆ. ಈ 18 factories ಏನು FRP ಪ್ರಕಾರ ಕೊಡಬೇಕೋ ಆ ಬಾಕಿ ಇರತಕ್ಕಂಥದ್ದು 503 ಕೋಟಿ ರೂ.ಗಳು ಇದೆ 25 ನೇ ತಾರೀಖು ಮತ್ತೆ ಈ ವಿಷಯ ಕೋರ್ಟ್‌ನಲ್ಲಿ ಬರುತ್ತಿರುವುದರಿಂದ ಅದನ್ನು ನಮ್ಮ ಸರ್ಕಾರದಿಂದ Advocate General ರವರ ಮುಖಾಂತರ stay vacate ಮಾಡಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಈಗಾಗಲೇ ಎರಡು ಸಲ ಕೋರ್ಟ್‌ನಿಂದ hearing ಬಂದಾಗ ನಮ್ಮ Advocate General ರವರೇ ಸ್ವತಃ appear ಆಗಿ ಅದರ ಬಗ್ಗೆ vacate ಮಾಡಬೇಕೆಂದು ಅದರ ಪರಿಸ್ಥಿತಿಯನ್ನು ಎಲ್ಲಾ ವಿವರಣೆ ಮಾಡಿದ್ದಾರೆ. ಕೋರ್ಟ್ ಕೂಡ 25ನೇ ತಾರೀಖು ಏನು ತೀರ್ಮಾನ ಕೊಡುತ್ತದೆ ಅದನ್ನು ಗಮನದಲ್ಲಿಟ್ಟುಕೊಂಡು ಕಾರ್ಖಾನೆಯವರಿಂದ 2,500 ರೂ.ಗಳಂತೆಯೇ ರೈತರಿಗೆ ಪಾವತಿ ಮಾಡುವಂತಹ ಕೆಲಸ ಸರ್ಕಾರ ಮಾಡುತ್ತದೆ. ಈಗ ಏನು ಸದ್ಯದ Interim ಆದೇಶದ ಅಡಿಯಲ್ಲಿ FRP ಪ್ರಕಾರ ಕೊಡಬೇಕೆಂದು ಹೇಳಿದ್ದಾರೆ, ಅದನ್ನು ಕೊಡಿಸುವುದರಲ್ಲಿ ಯಾವುದೇ ರೀತಿಯ ಮೀನ-ಮೇಷ ಎಣಿಸುವಂತಹ ಪ್ರಶ್ನೆ ಇಲ್ಲ. ಈ ಕೂಡಲೇ ರೈತರಿಗೆ ಹಣ ಪಾವತಿ ಮಾಡಿಸುವುದಕ್ಕೆ ಎಲ್ಲಾ ರೀತಿಯ ಕ್ರಮವನ್ನು ತೆಗೆದುಕೊಂಡಿದ್ದೇವೆ. ಜಿಲ್ಲಾಧಿಕಾರಿಗಳಿಗೆ ಸ್ವಾತಂತ್ರ್ಯ ನೀಡಿದ್ದೇವೆ. ಅವರು ಆ ಹಣವನ್ನು ಕೂಡಲೇ ರೈತರಿಗೆ ಪಾವತಿ ಮಾಡಿಸುವಂತಹ ಕೆಲಸ ಮಾಡುತ್ತಾರೆ. ಜುಲೈ ತಿಂಗಳಿನಲ್ಲಿ south ನಲ್ಲಿ ಕಬ್ಬು ಅರೆಯುವುದನ್ನು ಪ್ರಾರಂಭ ಮಾಡಬೇಕಾಗಿದೆ. ಈಗಾಗಲೇ ಜೂನ್ ಮುಗಿಯುತ್ತಿದೆ. ಜುಲೈನಲ್ಲಿ ಈ ವರ್ಷದ ಕಬ್ಬನ್ನು ಅರೆಯುವುದಕ್ಕೆ ಪ್ರಾರಂಭ ಮಾಡಬೇಕಾಗಿದೆ. ಹೊಸ ಬೆಲೆಯನ್ನು ನಿಗದಿಪಡಿಸಬೇಕಾಗಿದೆ. ಈ ವರ್ಷ FRP 2,200 ರೂ.ಗಳನ್ನು ನಿಗದಿಪಡಿಸಿದ್ದಾರೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳುತ್ತಿರುವುದಕ್ಕೆ ಒಂದೇ ಒಂದು ಸಣ್ಣ clarification...

ಉಪಾಧ್ಯಕ್ಷರು : ಮಾನ್ಯ ಸಚಿವರು ಉತ್ತರ ನೀಡುವುದನ್ನು ಪೂರ್ತಿ ಮಾಡಲಿ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ರೈತರಾಗಲಿ, ಈ ಸದನದ ಸದಸ್ಯರಾಗಲಿ, ಮಾನ್ಯ ವಿರೋಧ ಪಕ್ಷದ ನಾಯಕರಾಗಲಿ ಯಾವುದೇ ಆತಂಕಪಡುವ ಅವಶ್ಯಕತೆ ಇಲ್ಲ FRP ಪ್ರಕಾರ 18

factory ಗಳು ರೈತರಿಗೆ ಏನು 503 ಕೋಟಿ. ರೂ.ಗಳನ್ನು ಪಾವತಿ ಮಾಡಬೇಕೋ ಅದನ್ನು ಇನ್ನು ಕೆಲವೇ ದಿವಸಗಳಲ್ಲಿ ಕೂಡಲೇ ಪಾವತಿ ಮಾಡಿಸುತ್ತೇವೆ. ಕೋರ್ಟ್ ಆದೇಶ ಬಂದ ನಂತರ ಆ ಆದೇಶದ ಪ್ರಕಾರ ಸರ್ಕಾರ ಮುಂದಿನ ಕ್ರಮ ತೆಗೆದುಕೊಳ್ಳುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. Factories ಪಟ್ಟಿಯನ್ನು ತಾವು ಕೇಳಿದ್ದೀರಿ. ನೋಟಿಸ್‌ಗೆ ಉತ್ತರ ಕೊಡದಂತಹ 6 factories ಈ ರೀತಿ ಇವೆ. Indian sugar Manufacturing co., Limited, ಬೋವಿನಾಳ್ ಇಂಡಿ ತಾಲ್ಲೂಕು., ಜಮಖಂಡಿ ಷುಗರ್ಸ್ ಲಿಮಿಟೆಡ್, ನಾಡಕೇಡಿ, ಇಂಡಿ ತಾಲ್ಲೂಕು., ಜಮಖಂಡಿ ಷುಗರ್ಸ್, ಹಿರೀಪಡಸಲಗಿ, ಜಮಖಂಡಿ., Shivasagar Sugars and Agro-product Ltd. ಉಡುಮಡಿ, ರಾಮದುರ್ಗ ತಾಲ್ಲೂಕು, ಬೆಳಗಾಂ ಜಿಲ್ಲೆ., ಸೌಭಾಗ್ಯ ಲಕ್ಷ್ಮಿ ಷುಗರ್ಸ್ ಲಿಮಿಟೆಡ್., ಹಿರೇನಂದಿ ಗೋಕಾಕ್ ತಾಲ್ಲೂಕು., Indian Sugars and Refineries Ltd., ಚಿಟವಾಡಿ ಹೊಸ ಪೇಟೆ ತಾಲ್ಲೂಕು. Management ನದ್ದು ಹೇಳುತ್ತಿದ್ದೇನೆ. ಅಧ್ಯಕ್ಷರದ್ದನ್ನು ನಾನೇನು ಹೇಳುತ್ತಿಲ್ಲ.

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಮಾನ್ಯ ಸಚಿವರೆ ನಿಮ್ಮ ಪರವಾಗಿ ನಾನೇ ಹೇಳುತ್ತೇನೆ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಾನ್ಯ ಸವದಿಯವರೆ, ನಿಮ್ಮ Sugar Factory ಚಲೋ ಇದೆ ಎಂದು ನೀವೇ ಬೆನ್ನು ತಟ್ಟಿಕೊಂಡಿದ್ದೀರಿ.

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ನಾನು ಬೆನ್ನು ತಟ್ಟಿಕೊಳ್ಳುವುದಕ್ಕೆ ಹೇಳುತ್ತಿಲ್ಲ. ನಿಮ್ಮ ಪರವಾಗಿ ಒಂದು ಸಣ್ಣ ಮಾತು ಅವರಿಗೆ ಹೇಳುತ್ತೇನೆ. Management ನಲ್ಲಿ ಯಾರ್‍ಯರು ಇದ್ದಾರೆ ಹೇಳಿ ಎಂದು ಹೇಳಿದರು. ನಿಮ್ಮ ಸರ್ಕಾರದ notice ಹೋಗುವುದರೊಳಗಾಗಿ management change ಆಗಿರುತ್ತದೆ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : 12 Factories ಕೂಡ FRP ಪ್ರಕಾರ ಹಣ ಪಾವತಿ ಮಾಡಿಲ್ಲ ಎಂದು ಅವರ Statement ನಿಂದ ಕಂಡುಬಂದಿರುವುದರಿಂದ Recovery Certificate ಅನ್ನು ಅವರಿಗೂ ಕೂಡ Issue ಮಾಡಿದ್ದೇವೆ. ಅವುಗಳೆಂದರೆ ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆ Lease to ಚಾಮುಂಡೇಶ್ವರಿ ಷುಗರ್ಸ್, ಶ್ರೀನಿವಾಸಪುರ, ಚನ್ನರಾಯಪಟ್ಟಣ ತಾಲ್ಲೂಕು., ಚಾಮುಂಡೇಶ್ವರಿ ಷುಗರ್ಸ್ ಲಿಮಿಟೆಡ್, ಭಾರತಿನಗರ, ಮದ್ದೂರು ತಾಲ್ಲೂಕು., ಬೀದರ್

ಸಹಕಾರಿ ಸಕ್ಕರೆ ಕಾರ್ಖಾನೆ, ಹಳ್ಳಿಖೇಡ್, ಹುಮ್ನಾಬಾದ್ ತಾಲ್ಲೂಕು., ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ, ಎಂ.ಕೆ. ಹುಬ್ಬಳ್ಳಿ, ಬೈಲಹೊಂಗಲ ತಾಲ್ಲೂಕು., ಸಹಕಾರಿ ಸಕ್ಕರೆ ಕಾರ್ಖಾನೆ lease to NSL Sugars, ಭೂಸನೂರು, ಆಳಂದ ತಾಲ್ಲೂಕು., Athani Farmers Sugar Workers Ltd., ವಿಷ್ಣು ಅಣ್ಣ ನಗರ, ಅಥಣಿ ತಾಲ್ಲೂಕು., ಭವಾನಿ ಷುಗರ್ಸ್ ಲಿಮಿಟೆಡ್, ಬಾರೂರು, ಬೀದರ್ ತಾಲ್ಲೂಕು., ಮನಹಳ್ಳಿ ಷುಗರ್ಸ್ ಲಿಮಿಟೆಡ್., ಮಲಘಾಣ, ಸಿಂಧಗಿ ತಾಲ್ಲೂಕು., ದಾನಯೋಗಿ ಶ್ರೀ ಶಿವಕುಮಾರಸ್ವಾಮೀಜಿ ಷುಗರ್ಸ್ ಲಿಮಿಟೆಡ್, ಹಿರೇಬೆವನ್ನೂರು ಇಂಡಿ ತಾಲ್ಲೂಕು., Core green Sugars and Fuels Private Ltd., Tumkuru Village, Shahapura Taluk, Yadgir District., Nirani Sugars Ltd., ಮುಧೋಳ್., ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ಸಂಗಿನಕೇರಿ, ಗೋಕಾಕ್ ತಾಲ್ಲೂಕು, 12 factories ಮತ್ತು 6 factories, ಒಟ್ಟು 18 factories ನಿಂದ ಮಾತ್ರ FRP Payment ಬಾಕಿ ಇದೆ. ಅವರಿಗೆ recovery notice issue ಮಾಡಿರುವುದರಿಂದ ಕೂಡಲೇ ಜಿಲ್ಲಾಧಿಕಾರಿಗಳು ಇವತ್ತಿನಿಂದಲೇ ಕ್ರಮ ಜರುಗಿಸುತ್ತಾರೆ. ರೈತರ ವಿಚಾರದಲ್ಲಿ ಮತ್ತು ಕಬ್ಬು ಬೆಳೆಗಾರರ ವಿಚಾರದಲ್ಲಿ ಸರ್ಕಾರ ಬದ್ಧವಾಗಿದೆ. ರೈತರ ಹಿತ ಕಾಪಾಡುವಂತಹ ವಿಚಾರದಲ್ಲಿ ನಾವು ಯಾರಿಂದಲೂ ಹೇಳಿಸಿಕೊಳ್ಳಬೇಕಾದಂತಹ ಅವಶ್ಯಕತೆ ಇಲ್ಲ ಸರ್ಕಾರ ಏನು ತೀರ್ಮಾನವನ್ನು ಘೋಷಣೆ ಮಾಡಿದೆ ಆ ಪ್ರಕಾರ ನಾವು ಕೊಡಿಸುವಂತಹ ಕೆಲಸವನ್ನು ಮಾಡುತ್ತೇವೆ ಎಂದು ಈ ಸದನದಲ್ಲಿ ಹೇಳುವುದಕ್ಕೆ ಬಯಸಿ ಈ ಚರ್ಚೆಯಲ್ಲಿ ಏನು ತಾವು ಕೇಳಿದ್ದೀರಿ ಅದಕ್ಕೆ ಸಮರ್ಪಕವಾದ ಉತ್ತರವನ್ನು ನಾನು ಕೊಟ್ಟಿದ್ದೇನೆ. ಎಂದು ಭಾವಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : (ಮಾನ್ಯ ವಿರೋಧ ಪಕ್ಷದ ನಾಯಕರು); ಮಾನ್ಯ ಅಧ್ಯಕ್ಷರೆ, ಮಾನ್ಯ ಮಹದೇವ ಪ್ರಸಾದ್‌ರವರು ಹೊಸದಾಗಿ charge ತೆಗೆದುಕೊಂಡ ಮೇಲೆ ಏನಾದರೂ ಒಂದು ಸ್ಪಷ್ಟವಾದಂತಹ ನಿಲುವನ್ನು ತೆಗೆದುಕೊಳ್ಳುತ್ತಾರೆ, ಸ್ಪಷ್ಟವಾದಂತಹ action ತೆಗೆದುಕೊಳ್ಳುತ್ತಾರೆ ಎಂದು ತಿಳಿದಿದ್ದೆವು. ಯಾರೋ ಇದುವರೆಗೂ ಮಾಡಿಲ್ಲ ಅದನ್ನು ಮಾಡುವುದಕ್ಕೆ ಇವರಿಂದಲೂ ಆಗಲಿಲ್ಲ. ಮಾನ್ಯ ಪ್ರಕಾಶ್ ಹುಕ್ಕೇರಿಯವರು fail ಆಗಿದ್ದಾರೆ. ಇವರೂ fail ಆಗಿದ್ದಾರೆ, ನೀವು ರೈತರಿಗೆ ಏನೂ ಮಾಡಿಲ್ಲ.

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್ (ಮಾನ್ಯ ಇಂಧನ ಸಚಿವರು) : ಒಂದು ಸರ್ಕಾರ, ನಾವು ನಿಮಗೆ ದುಡ್ಡು ಕೊಡಿಸೇ ಕೊಡುತ್ತೇವೆ ಎಂದು ಹೇಳಿದ ಮೇಲೂ ನಿಮಗೆ ಇನ್ನೂ ಏನು ಸ್ಪಷ್ಟೀಕರಣ ಬೇಕೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನಾನು ಸೃಷ್ಟೀಕರಣ ಕೇಳುತ್ತಿದ್ದೇನೆ. ಮಾನ್ಯ ಮಹದೇವ ಪ್ರಸಾದ್‌ರವರು ಉತ್ತರ ಕೊಟ್ಟರು. ಆದರೆ ಅವರು ಇಲ್ಲಿಯವರೆಗೆ ಏನು stand ಇತ್ತು ಅದನ್ನೇ ಹೇಳಿದರೆ ಹೊರತು, ಅದಕ್ಕಂತ ಒಂದು ಹೆಜ್ಜೆ ಮುಂದೆ ಹೋಗಲಿಲ್ಲ, 2,500 ರೂ.ಗಳನ್ನು ನೀವೇ fix ಮಾಡಿದ್ದೀರಿ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಕೋರ್ಟ್‌ನಲ್ಲಿ ಅವು ಸ್ಟೇ ಆಗಿವೆ. ಅದರ ಬಗ್ಗೆ ಮಾತನಾಡುವಂತಿಲ್ಲ. . .

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಒಂದು ನಿಮಿಷ ನಾನು ಮಾತನಾಡುವುದು complete ಮಾಡಿಬಿಡುತ್ತೇನೆ. ನೀವು 2,500 ರೂ.ಗಳನ್ನು fix ಮಾಡಿದವರು. ಇವತ್ತು, 2,500 ರೂ.ಗಳನ್ನು ಕೊಡಿ ಎಂದು ರೈತರು ಒದ್ದಾಡುತ್ತಿದ್ದಾರೆ. ಮಹಾರಾಷ್ಟ್ರದಲ್ಲಿ 2,600 ರೂ.ಗಳನ್ನು ಕೊಟ್ಟಿದ್ದಾರೆ. ಗುಜರಾತ್‌ನಲ್ಲಿ 2,800–3000 ರೂ.ಗಳವರೆಗೆ ಕೊಟ್ಟಿದ್ದಾರೆ. ಮೊದಲು ನೀವು ಸರ್ಕಾರದಿಂದ ರೈತರಿಗೆ payment ಮಾಡಿ. ಆನಂತರ ಕೋರ್ಟ್‌ನಲ್ಲಿ success ಮಾಡಿಕೊಂಡು sugar factory ಮಾಲೀಕರಿಂದ recovery ಮಾಡಿಕೊಳ್ಳಿ. ಅದನ್ನು ಮಾಡುವುದಕ್ಕೆ ತಯಾರಿಲ್ಲ. ರೈತರು ಒದ್ದಾಡುತ್ತಿದ್ದಾರೆ. FRP ಪ್ರಕಾರವಾದರೂ ಕೊಡಿ. ಇವತ್ತು ಕೇಂದ್ರ ಸರ್ಕಾರ Ex-gate, Ex-field fix ಮಾಡಿದೆ. ಅದರಲ್ಲಿಯೂ confusion ಇದೆ. Clear ಆಗಿಲ್ಲ. ಇವತ್ತು ನೀವು ಏನು ಮಾಡಿದ್ದೀರಿ? ರಾಜ್ಯ ಸರ್ಕಾರದ ಕಬ್ಬು ನಿಯಂತ್ರಣ ಕಾನೂನು ಏನಿದೆ, ನಮ್ಮ ಸರ್ಕಾರ ಇದ್ದಾಗ ತೆಗೆದುಕೊಂಡು ಬಂದಿರುವುದು, ನೀವು ಇಲ್ಲಿ ಸ್ಪಷ್ಟವಾಗಿ ಹೇಳಿದ್ದೀರಿ. ದಕ್ಷಿಣ ಕರ್ನಾಟಕ ಭಾಗಕ್ಕೆ Ex-gate ಪ್ರತಿ ಮೆಟ್ರಿಕ್ ಟನ್ ಗೆ 2,500 ರೂ. ಗಳು. ಉತ್ತರ ಕರ್ನಾಟಕ ಭಾಗಕ್ಕೆ Ex-field ಪ್ರತಿ ಮೆಟ್ರಿಕ್ ಟನ್ ಗೆ 2,500 ರೂ. ಗಳು ಎಂದು ಸ್ಪಷ್ಟೀಕರಣ ಮಾಡಿದ್ದೀರಿ. ಇವತ್ತು ಕೇಂದ್ರ ಸರ್ಕಾರ 2,100 ರೂ. ಗಳು ಎಂದು FRP ಏನು Fix ಮಾಡಿದೆ ಮತ್ತು ಯಾವುದು recovery ಜಾಸ್ತಿಯಾಗುತ್ತಿದೆ ಅದೂ ಇದೆ. ಆ recovery ಜಾಸ್ತಿಯಾದ ಪ್ರಕಾರ ನೀವು calculation ಮಾಡಿದರೂ. recovery 9.5 ಇರುವುದಕ್ಕೆ 11.5 ಇದ್ದುದಕ್ಕೆ 12.5 ಇದ್ದುದಕ್ಕೆ Sugar commissioner ಅವರು ಪ್ರತಿಯೊಂದು factory ಯದ್ದು calculation ಮಾಡಬೇಕಾಗಿತ್ತು. ಆ factory ಮಾಲೀಕರಿಗೆ ನೀವು ಇಂತಿಷ್ಟು ಕೊಡಬೇಕಾಗುತ್ತದೆ. ಎಂದು ಹೇಳಬೇಕಾಗುತ್ತದೆ. ಇವತ್ತು 2,100 ರೂ.ಗಳು ಅದು base price.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಇಲ್ಲ FPR ಪಕಾರ according to their recovery payment ಆಗಿರುವುದು.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ : ಇಲ್ಲ. ಅದು ಒಂಭತ್ತೂವರೆ ಇಳುವರಿಯದ್ದು.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಕೇವಲ 2,100 ರೂ. ಗಳ ಮೇಲೆ ದರವನ್ನು ನಿಗದಿಪಡಿಸಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : 42 factory ಗಳ calculation.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್: 42 factory ಗಳು FPR ಪ್ರಕಾರ last year ನದ್ದು recovery ಏನಿದೆ, ಅದರ base ಇಟ್ಟುಕೊಂಡು ಈ ವರ್ಷ ಆ ಹಣವನ್ನು ಪೂರ್ತಿಯಾಗಿ ಮಾಡಿದ್ದಾರೆಯೇ ಎಂದು ಗಮನಿಸಿ 42 factories ಅನ್ನು ಹೊರತುಪಡಿಸಿ ಉಳಿದವರಿಗೆ ನೋಟಿಸ್ ಜಾರಿಗೆ ಮಾಡಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸಚಿವರೇ, ಯಾವ್ಯಾವ ಶುಗರ್ ಫ್ಯಾಕ್ಟರಿಗಳು ex-gate ಅಡಿಯಲ್ಲಿ ಎಷ್ಟೆಷ್ಟು ಹಣ ಕೊಟ್ಟಿದ್ದಾರೆಂಬುದು ನನ್ನ ಲಿಸ್ಟ್ ಇದೆ. ಕೆಲವು ಕಾರ್ಖಾನೆಗಳು 1800, 2100, 2,400, ರೂಪಾಯಿ ಕೊಟ್ಟಿದ್ದಾರೆ. ಬೈಲಹೊಂಗಲದ ಸೋಮೇಶ್ವರ ಸಕ್ಕರೆ ಕಾರ್ಖಾನೆಯವರು 1800 ರೂಪಾಯಿ ex-gate ದರ ಕೊಟ್ಟಿದ್ದಾರೆ. ಹಾಗೆಯೇ, ಕೆಲವರು 1600 ರೂಪಾಯಿ ಕೊಟ್ಟಿದ್ದಾರೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ನಾವು ನೋಟಿಸ್ ಕೊಟ್ಟ ಮೇಲೆ ಕೆಲವರು ತರಾತುರಿಯಲ್ಲಿ ಹಣ ಕೊಟ್ಟಿದ್ದಾರೆ. ಅಳಂದದಲ್ಲಿನ ಸಕ್ಕರೆ ಕಾರ್ಖಾನೆಯವರು ಪೇಮೆಂಟ್ ಮಾಡದೆ ಇದ್ದ ಪ್ರಯುಕ್ತ ನಮ್ಮ ಶಾಸಕರಾದ ಮಾನ್ಯ ಬಿ.ಆರ್. ಪಾಟೀಲ್‌ರವರು ರಸ್ತೆ ತಡೆ ಮತ್ತು ಸ್ಟ್ರೈಕ್ ಮಾಡಿದರು/ ಅನಂತರ ಕಾರ್ಖಾನೆಯವರು ಸಾಕಷ್ಟು ಪೇಮೆಂಟ್ ಮಾಡಿದ್ದಾರೆ. ನಿಮ್ಮ ಸ್ಟೇಟ್‌ಮೆಂಟ್ ಹಳೆಯದಾಗಿದೆ ನಿನ್ನೆಯ latest statement ಅನ್ನು ನಾನು ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ನಮಗೆ ಹೊಸ ಸ್ಟೇಟ್‌ಮೆಂಟ್ ಅನ್ನು ಕೊಡಿ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : Latest statement ಅನ್ನು ನಾಳೆ ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಈಗಾಗಲೇ ಕೇಂದ್ರ ಸರ್ಕಾರ ನಿಗದಿ ಮಾಡಿರುವ ಪ್ರಕಾರ ಕೇವಲ 42 ಫ್ಯಾಕ್ಟರಿಗಳು ಕೊಟ್ಟಿದ್ದಾರೆಂದು ತಾವು ಹೇಳಿದ್ದೀರಿ. That is wrong ಸದನದ ಮುಂದೆ ಸರಿಯಾದ ಮಾಹಿತಿ ಕೊಡಿ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : 42 ಫ್ಯಾಕ್ಟರಿಗಳ ಸ್ಟೇಟ್‌ಮೆಂಟ್ ಅನ್ನು ನಾಳೆ ಸದನದ ಮುಂದೆ ಇರುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ತಾವು ಯಾವುದೇ ಮಾಹಿತಿಯನ್ನು ಕೊಟ್ಟಿಲ್ಲ. ಈಗ ಕೇವಲ 12 ಫ್ಯಾಕ್ಟರಿಗಳದು ಮಾತ್ರ ಬಾಕಿ ಉಳಿದಿದೆ ಎಂದು ಹೇಳುತ್ತಿದ್ದೀರಿ. ನೀವು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದೀರಿ. 2500 ರೂಪಾಯಿ ಕೊಡಬೇಕೆಂದು ನಮ್ಮ ಬೇಡಿಕೆ ಇದೆ. ಅದ್ದರಿಂದ, ಸರ್ಕಾರದವರು ಆ ಪ್ರಕಾರ ಇವತ್ತು ರೈತರಿಗೆ ಪೇಮೆಂಟ್ ಮಾಡಬೇಕು. ಇವತ್ತಿನ ದಿವಸ ರೈತರು ಸ್ಟ್ರೈಕ್ ಮಾಡುತ್ತಾ ಬೀದಿಗೆ ಬಂದಿದ್ದಾರೆ. ಪೇಮೆಂಟ್ ಮಾಡದೇ ಇದ್ದರೆ ಇನ್ನೂ ನಾಲ್ಕೈದು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. 7 ತಿಂಗಳ ಹಿಂದೆ 2500 ರೂಪಾಯಿಯನ್ನು ನೀವು ನಿಗದಿ ಮಾಡಿದ್ದೀರಿ. ಅದ್ದರಿಂದ, ಹಣವನ್ನು ರೈತರಿಗೆ ಕೊಡಿಸತಕ್ಕಂಥ ಜವಾಬ್ದಾರಿ ಸರ್ಕಾರದ್ದು ಆಗಿದೆ. ನೀವು ಮೊದಲು ರೈತರಿಗೆ ಪೇಮೆಂಟ್ ಮಾಡಿ. ಅನಂತರ ಶುಗರ್ ಫ್ಯಾಕ್ಟರಿ ಮಾಲೀಕರಿಂದ ರಿಕವರಿ ಮಾಡಿ. ನಿಮಗೆ ಯಾರು ಬೇಡವೆಂದು ಹೇಳುತ್ತಾರೆ? ಈ ಕೆಲಸವನ್ನು ನೀವು ಮಾಡುವುದನ್ನು ಬಿಟ್ಟು ನೀವು ಮ ಶುಗರ್ ಫ್ಯಾಕ್ಟರಿಗಳವರು ಶಾಮೀಲಾಗಿದ್ದೀರಿ/ ಇವತ್ತಿನದಿವಸ ಕಾರ್ಖಾನೆಯವರು ಕೋರ್ಟ್‌ನಲ್ಲಿ ಕೇಸ್ ದಾಖಲು ಮಾಡಿದ್ದಾರೆ. ಅಂದರೆ, ನಾನು ಅಳುವ ಹಾಗೆ ಮಾಡುತ್ತೇನೆ. ನೀವು ಕರೆದ ಹಾಗೆ ಮಾಡಿ ಎನ್ನುವ ರೀತಿಯಲ್ಲಿ ಮಾಡಿದ್ದೀರಿ. ಇಲ್ಲಿ ಒಂದು ರೀತಿಯ ಹೈಡ್ರಾಮಾ ನಡೆಯುತ್ತಿದೆ. ನೀವು ರೈತರಿಗೆ ಅನ್ಯಾಯ ಮಾಡುತ್ತಿದ್ದೀರಿ. 2500 ರೂಪಾಯಿಯನ್ನು ಕೊಡುವುದರ ಬಗ್ಗೆ ನೀವು ವಿಚಾರ ಮಾಡಬೇಕಾಗಿತ್ತು. ಇವತ್ತಿನ ದಿವಸ ಏನು ಕಾನೂನು ಇದೆಯೋ ಆ ಪ್ರಕಾರ ಕೊಡುವುದಕ್ಕೆ ಕುಳಿತು ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕಾಗಿತ್ತು. ಈ ಬಗ್ಗೆ ಬೆಳಗಾಂ ಅಧೀವೇಶನದಲ್ಲಿ ಕೂಡ ಚರ್ಚೆ ಆಯಿತು. 2500 ರೂಪಾಯಿಯನ್ನು ನಿಗದಿ ಮಾಡುವುದಕ್ಕಿಂತ ಮುಂಚಿತವಾಗಿ ನೀವು ಅವರ ಜೊತೆ ಚರ್ಚೆ ಮಾಡಬೇಕಾಗಿತ್ತು. ಹಾಗೆಯೇ ಇಷ್ಟು ನಿಗದಿ ಮಾಡಿರುವುದು ಸರಿಯಲ್ಲವೆಂದು ಹೇಳಬೇಕಾಗಿತ್ತು. ಈ ಬಗ್ಗೆ ಅವರ ಜೊತೆಯಲ್ಲಿ consultation ಮಾಡಿಕೊಂಡು ಒಂದು ಕಮಿಟಿ ಮುಖಾಂತರ ನೀವು ಒಂದು ರೇಟ್ ಅನ್ನು ಫಿಕ್ಸ್ ಮಾಡಿದ ಮೇಲೆ ಇವತ್ತಿನ ದಿವಸ ಅವರು question ಮಾಡುತ್ತಿದ್ದಾರೆ. 2500 ರೂಪಾಯಿ ಕೊಡುತ್ತೇವೆಂದು ನೀವು ರೈತರಿಗೆ ಹೇಳಿದ್ದೀರಿ. ಇಷ್ಟು ಕೊಡುತ್ತೇವೆಂದು ನೀವು declare ಮಾಡಿದ ಮೇಲೆ It is Governments's

responsibility. ಆದ್ದರಿಂದ, ನೀವು ಆ ರೀತಿಯಾಗಿ ಕೊಡಬೇಕಾಗುತ್ತದೆ. ಆದರೆ, ಇದನ್ನು ಕೊಡದೆ ನೀವು ವಿಫಲರಾಗಿದ್ದೀರಿ. ನೀವು ಹೇಳಿ ಈಗಾಗಲೇ 7 ತಿಂಗಳಾಗಿದೆ. ಮೇ ತಿಂಗಳಲ್ಲಿ ನೋಟಿಸ್ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಈ ನಡುವೆ ಅವರನ್ನು ಕರೆದು ಮಾತನಾಡಬೇಕಾಗಿತ್ತು. ಹಾಗೆಯೇ ನೋಟಿಸ್ ಕೊಟ್ಟು ಸಕ್ಕರೆಯನ್ನು ಜಪ್ತಿ ಮಾಡಿ ಫ್ಯಾಕ್ಟರಿಗಳನ್ನು ಬಂದ್ ಮಾಡಬೇಕಾಗಿತ್ತು. Central Government ನ FRP ಪ್ರಕಾರವಾದರು ನೀವು ರಿಕವರಿ ಮಾಡಿ ಕೊಡಬೆಕಾಗಿತ್ತೆಂದು ಮೇ ತಿಂಗಳ 22ನೇ ತಾರೀಖಿನ ದಿವಸ ಕೋರ್ಟ್‌ನಲ್ಲಿ ಆರ್ಡರ್ ಆಗಿದೆ. ಆದರೆ, ಈ ಕೆಲಸವನ್ನು ನೀವು ಮಾಡಲಿಲ್ಲ. ಇದಾದ ಮೇಲೆ ಒಂದು ವಾರ ಬಿಟ್ಟು ಅಂದರೆ, ಆ ತಿಂಗಳ ಕೊನೆಯಲ್ಲಿ ನೀವು ನೋಟಿಸ್ ಕೊಟ್ಟಿದ್ದೀರಿ. ನೋಟಿಸ್ ಕೊಟ್ಟು ಒಂದು ವಾರ ಆದ ಮೇಲೆ ಅವರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳುವುದನ್ನು ಬಿಟ್ಟು ನೀವು ಮತ್ತೆ ಫ್ಯಾಕ್ಟರಿ ಮಾಲೀಕರನ್ನು ಏಕೆ ಕರೆಯಬೇಕಾಗಿತ್ತು? ಅವರ ಜೊತೆ ಏಕೆ ಮಾತನಾಡಬೇಕಾಗಿತ್ತು? ಅವರನ್ನು ಕರೆದು ಮಾತನಾಡಿದ ಮೇಲೆ ಉಳಿದ ಮೊತ್ತದ ಪೇಮೆಂಟ್ ಮಾಡಬೇಕಾಗಿತ್ತು. ಆದರೆ, ಈ ಕೆಲಸವನ್ನು ನೀವು ಮಾಡಲಿಲ್ಲ. ಅಂದರೆ, ಅವರಿಗೆ ಎಲ್ಲಾ ದಾರಿಯನ್ನು ನೀವು ಬಹಳ ಸರಳವಾಗಿ ಹೇಳಿಕೊಂಡುತ್ತಿದ್ದಿರಿ. ಇಲ್ಲಿ ರೈತರಿಗೆ ಅನ್ಯಾಯವಾಗುತ್ತಿದೆ. ಇವತ್ತಿನ ದಿವಸ ಸರ್ಕಾರ ಶುಗರ್ ಫ್ಯಾಕ್ಟರಿ ಮಾಲೀಕರಿಗೆ ಸಹಾಯ, ಅನುಕೂಲ ಮಾಡುವ ಸಲುವಾಗಿ ಶುಗರ್ ಲಾಬಿಗೆ ಸರ್ಕಾರದವರು field ಆಗಿ ರೈತರಿಗೆ ಅನ್ಯಾಯ ಮಾಡುತ್ತಿದ್ದೀರಿ. ಇದನ್ನು ನಾವು protest ಮಾಡುತ್ತಿದ್ದೇವೆ. ಇವತ್ತಿನ ದಿವಸ ರೈತರು ಬೀದಿಗೆ ಬಿದ್ದಿದ್ದಾರೆ ಹಾಗೆಯೇ ಈ ಬಗ್ಗೆ ನಾವೂ ಕೂಡ protest ಮಾಡುತ್ತೇವೆ. ಎಲ್ಲಿಯವರೆಗೆ ಈ ಬಗ್ಗೆ ನೀವು ಸ್ಪಷ್ಟವಾದ ನಿಲುವನ್ನು ಹೇಳುವುದಿಲ್ಲವೋ ಅಲ್ಲಿಯವರೆಗೆ ನಾವು ಬಿಡುವುದಿಲ್ಲ. ನಾವು ಈ ಬಗ್ಗೆ protest ಮಾಡುತ್ತೇವೆ.

(ಈ ಹಂತದಲ್ಲಿ ಬಿಜೆಪಿ ಪಕ್ಷದ ಸದಸ್ಯರು ಸದನದ ಬಾವಿಗೆ ಬಂದರು.)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ನಾವು ಅ ರೀತಿಯಾಗಿ ಕಾರ್ಖಾನೆಯವರ ಜೊತೆಯಲ್ಲಿ ಶಾಮೀಲಾಗುವ ಪರಿಸ್ಥಿತಿ ಇದ್ದರೆ 2500 ರೂಪಾಯಿಯನ್ನು ನಾವು ನಿಗದಿ ಮಾಡುವುದಕ್ಕೆ ಹೋಗುತ್ತಿರಲಿಲ್ಲ. FRP ಪ್ರಕಾರ ಪೇಮೆಂಟ್ ಮಾಡಿ ಎಂದು ಹೇಳಿ ಸುಮ್ಮನೆ ಇರುತ್ತಿದ್ದೆವು. ನಮ್ಮ ಸರ್ಕಾರಕ್ಕೆ ಜವಾಬ್ದಾರಿ ಇದ್ದ ಪ್ರಯುಕ್ತ ರೈತರಿಗೆ ಒಳ್ಳೆಯ ಬೆಲೆ ಸಿಗಲೆಂಬ ಉದ್ದೇಶದಿಂದ 100 ರೂಪಾಯಿ tax exemption ಕೊಟ್ಟಿದ್ದೇವೆ. ಅದನ್ನೂ ಕೂಡ ಹೆಚ್ಚುವರಿಯಾಗಿ ಕೊಡಬೇಕೆಂದು ಎಲ್ಲಾ ಫ್ಯಾಕ್ಟರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ಫ್ಯಾಕ್ಟರಿಯವರು ಮತ್ತೆ ಕೋರ್ಟ್‌ಗೆ ಹೋಗಬಾರದೆಂಬ ಕಾರಣಕ್ಕೆ FRP ಪ್ರಕಾರ ಕೊಡಬೇಕೆಂದು 18 ಕಾರ್ಖಾನೆಗಳಿಗೆ recovery ಮಾಡುವುದಕ್ಕೆ notice ಅನ್ನು issue ಮಾಡಿದ್ದೇವೆ. ಇದರ ಜೊತೆಗೆ ಒಂದು ton ಗೆ 100

ರೂಪಾಯಿಗಳಂತೆ ಹೆಚ್ಚುವರಿಯಾಗಿ ಎಲ್ಲಾ ರೈತರಿಗೆ ನೀವು ಪಾವತಿ ಮಾಡಬೇಕೆಂದು ಹೇಳಿ ಆ ಬಗ್ಗೆಯೂ ಒಂದು notice ಅನ್ನು ಕಮಿಷನರ್ ಮುಖಾಂತರವಾಗಿ ಕೊಡಿಸಿದ್ದೇವೆ. ನಾವು ರೈತರಿಗೆ ಹಣ ಕೊಡಿಸುವಂತಹ ವಿಚಾರದಲ್ಲಿ ಎಲ್ಲೂ ಕೂಡ ಹಿಂದೆ ಬಿದ್ದಿರುವುದಿಲ್ಲ. ಆ ಹಣವನ್ನು ನಾವು ಕೊಡಿಸುತ್ತೇವೆ. ಇವತ್ತಿನ ದಿವಸ ಕೋರ್ಟ್‌ನಲ್ಲಿ . . .

(ಈ ಸಂದರ್ಭದಲ್ಲಿ ಮಾನ್ಯ ಜಗದೀಶ್ ಶೆಟ್ಟರ್‌ರವರು ಸದನ ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಮಾತ್ರ ಒಂದು ಟನ್ ಕಬ್ಬಿಗೆ 150 ರೂಪಾಯಿಗಳ ಪ್ರೋತ್ಸಾಹ ಧನವನ್ನು ಕೊಡಲಾಗಿದೆ. ಈಗ ನಾವು 100 ರೂಪಾಯಿಗಳ tax concession ಕೊಟ್ಟು FRP ಅಲ್ಲದೆ tax concession ಕೊಟ್ಟಿರುವ ಆ 100 ರೂಪಾಯಿಗಳನ್ನು extra ಕೊಡಬೇಕೆಂದು ಹೇಳಿ ಕಾರ್ಖಾನೆಗಳಿಗೆ ನಾವು ಸೂಚನೆಯನ್ನು ಕೊಟ್ಟಿದ್ದೇವೆ. ಈಗ ನಾನು ಸದನದಲ್ಲಿ ಹೇಳುವುದೇನೆಂದರೆ, 398 ಕೋಟಿ ರೂಪಾಯಿ ಈಗಾಗಲೇ ಡಿಸೆಂಬರ್ ತಿಂಗಳಲ್ಲಿ ಪೇಮೆಂಟ್ ಆಗಿದ್ದು, 189 ಕೋಟಿ ರೂಪಾಯಿ ಬಾಕಿ ಇದೆ.

(ಗೊಂದಲ)

ಉಪಾಧ್ಯಕ್ಷರು: ಸದನದ ಬಾವಿಯಲ್ಲಿ ಇರುವವರು ಯಾರು ಕೂಡ ಮಧ್ಯದಲ್ಲಿ ಮಾತನಾಡಬೇಡಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಬಾಕಿ ಉಳಿದುಕೊಂಡಿರುವ ಹಣಕ್ಕೆ financial approval ಆಗಿದೆ. ಇನ್ನು ಮೂರ್ನಾಲ್ಕು ದಿವಸಗಳಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಈ ಹಣ ತಲುಪುತ್ತದೆ.

ಉಪಾಧ್ಯಕ್ಷರು: ಮಾನ್ಯ ಸಚಿವರು ಈ ಬಗ್ಗೆ ಸುದೀರ್ಘವಾಗಿ ಉತ್ತರವನ್ನು ಕೊಟ್ಟಿದ್ದಾರೆ. ದಯವಿಟ್ಟು ಸದನದ ಬಾವಿಯಲ್ಲಿರುವವರೆಲ್ಲ ತಮ್ಮ ಸ್ಥಾನಗಳಿಗೆ ಹೋಗಿ.

(ಈ ಹಂತದಲ್ಲಿ ಸನ್ಮಾನ್ಯ ಜಗದೀಶ್ ಶೆಟ್ಟರ್‌ರವರು ತಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿದರು)

ಶ್ರೀ ಜಗದೀಶ್ ಶೆಟ್ಟರ್ : ಇದುವರೆಗೂ ಆ ಹಣ ಆರ್ಥಿಕ ಇಲಾಖೆಯಿಂದ ಬಿಡುಗಡೆಯಾಗಿರುವುದಿಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಾನ್ಯ ಉಪಾಧ್ಯಕ್ಷರೆ ಈಗ ಬಿಡುಗಡೆ ಆಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ನಮಗೆ ಹಣಕಾಸಿನ ಇಲಾಖೆಯಿಂದ ಯಾವುದೇ ಹಣ ಬಿಡುಗಡೆ ಆಗಿಲ್ಲ. ಈ ಬಗ್ಗೆ ನಮಗೆ ಎಲ್ಲವೂ ಗೊತ್ತಿದೆ.

ಉಪಾಧ್ಯಕ್ಷರು: ಸದನದ ಬಾವಿಯಲ್ಲಿರುವವರು ಯಾರೂ ಮಾತನಾಡಬೇಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಮಾನ್ಯ ಮಂತ್ರಿಗಳು ಹೇಳಬೇಕು, ಅದೇನೆಂದರೆ, FRP rate ಮತ್ತು 2500 ರೂಪಾಯಿಗಳನ್ನು ಕೊಡದೆ ಇರುವಂಥ ಕಾರ್ಖಾನೆಯ ಮಾಲೀಕರು ಯಾರು ಇದ್ದಾರೆ ಅವರ ಕಾರ್ಖಾನೆಯನ್ನು seize ಮಾಡಿ ಅಲ್ಲಿರುವ ಸಕ್ಕರೆಯನ್ನು ನಾವೇ ಮಾರಾಟ ಮಾಡುತ್ತೇವೆ. ಎಂದು ಹೇಳಿದ್ದಾರೆ. ಆದ್ದರಿಂದ, ಆ ಕಾರ್ಖಾನೆಯಲ್ಲಿ ಸಕ್ಕರೆ ಇದೆಯೋ ಅಥವಾ ಮಾರಾಟ ಮಾಡಿಕೊಂಡಿದ್ದಾರೆಯೋ ಎನ್ನುವ ಬಗ್ಗೆ ತಾವು information ಅನ್ನು ತೆಗೆದುಕೊಂಡಿದ್ದೀರಾ? ಕಾರ್ಖಾನೆಯಲ್ಲಿ ಸಕ್ಕರೆ ಈಗಾಗಲೇ ಮಾರಾಟವಾಗಿದ್ದರೆ ನೀವು ಏನು ಮಾಡುತ್ತೀರಿ?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಸಕ್ಕರೆ stock ಇಲ್ಲದೆ ಇದ್ದರೆ asset ಏನಿದೆ ಅದನ್ನು ಅವರ auction ಮಾಡಿಯಾದರೂ ಸಹ ನಾವು ಕೊಡುತ್ತೇವೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಅದು next step ಆಗಿದೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಅವರ ಹತ್ತಿರ stock ಇರುವ ಶುಗರ್ ಅನ್ನು ಮಾರಾಟ ಮಾಡಿ ಅದರಿಂದ ಕೂಡ ರೈತರಿಗೆ ಹಣ ಪಾವತಿಯಾಗಿಲ್ಲವೆಂದರೆ. . .

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಅವರ ಆಸ್ತಿಯನ್ನು ಜಪ್ತಿ ಮಾಡುವುದಕ್ಕೆ ಹೋದರೆ ಏನಾಗುತ್ತದೆಂದರೆ, ಕಾರ್ಖಾನೆಯ ಮೇಲೆ ಅವರು ಸುಮಾರು 20 ರಿಂದ 30 ಕೋಟಿ ರೂಪಾಯಿಗಳ ಸಾಲವನ್ನು ಇಟ್ಟುಕೊಂಡಿರುತ್ತಾರೆ. ಆದ್ದರಿಂದ, ನೀವು ಎಲ್ಲಿಂದ ಜಪ್ತಿ ಮಾಡುತ್ತೀರಿ?

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ : ರೈತರು ಹೊರಗಡೆ ಹೋರಾಟ ಮಾಡುತ್ತಿದ್ದಾರೆ. ಅದ್ದರಿಂದ, ಈ ಸದನ ಮೂಲಕ ಸರಿಯಾದ ಉತ್ತರವನ್ನು ಹೇಳಿ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕು.

(ಈ ಹಂತದಲ್ಲಿ ಮಾನ್ಯ ಗೋವಿಂದ ಎಂ. ಕಾರಜೋಳರವರು ತಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿದರು)

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಉಪಾಧ್ಯಕ್ಷರೆ, ಹಣ ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಾರೆ. ಹಣ ಬಿಡುಡಗೆ ಆಗಿದ್ದರೆ ಈ ಸದನಕ್ಕೆ ಸರ್ಕಾರದ ಆದೇಶದ ಪ್ರತಿಯನ್ನು ಕೊಡಲಿ. ಎರಡನೆಯದಾಗಿ ಮಾನ್ಯ ಸಚಿವರು ಕೊಟ್ಟಿರುವ ಉತ್ತರ ಹೇಗಿದೆ ಎಂದರೆ ಹಾವೂ ಸಾಯಬಾರದು ಕೋಲೂ ಮುರಿಯಬಾರದು ಅಕ್ಕಿಯ ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ ಎನ್ನುವ ರೀತಿಯಲ್ಲಿದೆ. ಅದಕ್ಕೆ ಆ ರೀತಿಯಾಗಿ ಹೇಳುವುದು ಬೇಡ. ದಯಮಾಡಿ ಈ ಬಗ್ಗೆ ಸ್ಪಷ್ಟವಾಗಿ ಸರ್ಕಾರವು ಕಬ್ಬು ಬೆಳೆದಂತಹ ರೈತರಿಗೆ ಪೇಮೆಂಟ್ ಮಾಡಬೇಕು. ನಂತರ ಕಾರ್ಖಾನೆಯ ಮಾಲೀಕರಿಂದ ಹಣವನ್ನು ವಸೂಲಿ ಮಾಡಬೇಕು. ನೀವು asset ಅನ್ನು ಜಪ್ತಿ ಮಾಡಿಕೊಂಡು ಅವರಿಂದ ಹಣವನ್ನು ವಸೂಲಿ ಮಾಡುವುದಕ್ಕಾಗುವುದಿಲ್ಲ. ಇವತ್ತಿನ ದಿವಸ ರಾಜ್ಯದಲ್ಲಿರುವ ಎಲ್ಲಾ ಕಾರ್ಖಾನೆಗಳು ಬೇರೆ ಕಡೆ pledge ಆಗಿರುತ್ತವೆ. ಅಂದರೆ, ಎಲ್ಲಾ ಕಾರ್ಖಾನೆಯ ಮೇಲೆ ನೂರಾರು ಕೋಟಿ ರೂಪಾಯಿಗಳ ಸಾಲ ಇದೆ. ಅದ್ದರಿಂದ ನೀವು ಯಾವ ಕಾರ್ಖಾನೆಯನ್ನೂ pledge ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ಮೊದಲು ಬ್ಯಾಂಕ್‌ನವರು ಬರುತ್ತಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಸರ್ಕಾರದ ಉತ್ತರ ಹೇಗಿದೆ ಎಂದರೆ, ಇಲ್ಲಿ ಕಾಲಹರಣ ಮಾಡುವುದಕ್ಕೆ ಏನು, ಮಾಡಬೇಕಾಗಿದೆಯೋ ಅಷ್ಟನ್ನು ಮಾತ್ರ ಮಾಡುತ್ತಿದ್ದಾರೆ. ಕೋರ್ಟ್‌ನಲ್ಲಿ ಕೇಸ್ ನಡೆಯುತ್ತಿದ್ದು, ಈ ಬಗ್ಗೆ ತೀರ್ಪು ಕೊಟ್ಟ ಮೇಲೆ ಹಣ ಕೊಡಿಸುತ್ತೇವೆಂದು ಕಡೆ ಹೇಳುತ್ತಿದ್ದೀರಿ. ಕೋರ್ಟ್‌ನಲ್ಲಿ ಈ ಕೇಸ್ ಇನ್ನೂ 6 ತಿಂಗಳಾದರೂ ಮುಗಿಯವುದಿಲ್ಲ. ಆಗ ಏನು ಮಾಡುತ್ತೀರಿ? ಹಾಗಾದರೆ, ರೈತರು 6 ತಿಂಗಳು ಅಥವಾ ಒಂದು ವರ್ಷದವರೆಗೆ ಕಾಯಬೇಕೇ ?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:- ಅಲ್ಲಿಯವರಗೆ FRP ಪೇಮೆಂಟ್ ಆಗಿರುತ್ತದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಹಾಗಾದರೆ, 2600 ರೂಪಾಯಿ ಏನು ಮಾಡುತ್ತೀರಿ ?

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಒಬ್ಬ ರೈತ ಸತ್ತಿದ್ದಾನೆ. ಆದರೂ ಕೂಡ ಏನು ಮಾಡಲಿಲ್ಲ. ಫ್ಯಾಕ್ಟರಿ ಮಾಲೀಕರೆಲ್ಲರೂ ಇಲ್ಲಿಯೇ ಇದ್ದೀರಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : South ನಲ್ಲಿ ಕೆಲವು ಕಾರ್ಖಾನೆಗಳವರು 2500 ರೂಪಾಯಿಯಂತೆ ಹಣ ಕೊಟ್ಟಿದ್ದಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಸಚಿವರೇ, FRP ಮತ್ತು ex-gate ಎನ್ನುವಂಥದ್ದು ಅತ್ಯಂತ ಅಪಾಯಕಾರಿ. FRP ಎಂದರೆ, ಇದಕ್ಕಿಂತ ಕಡಿಮೆ ಕೊಡಬೇಡಿ ಎಂದು ಹೇಳಲಾಗಿದೆ ಅಷ್ಟೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಇದನ್ನು ನಾವು ಹೇಳಿಲ್ಲ. ಕೇಂದ್ರ ಸರ್ಕಾರದ Sugar controls ನ ನಿಯಮ ಈ ರೀತಿ ಇದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಆ ರೀತಿಯಾದ ಒಂದು ಮಾನದಂಡ ಇಟ್ಟುಕೊಂಡಿದ್ದಾರಷ್ಟೆ, Minimum ಎಂಬ ಅರ್ಥದಲ್ಲಿ ಕೇಂದ್ರ ಸರ್ಕಾರ ಹೇಳಿದೆ. ಅಂದರೆ, ಕನಿಷ್ಠ ಇಷ್ಟಾದರೂ ಕೊಡಬೇಕೆಂದು ಹೇಳಿದ್ದಾರೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಕೇಂದ್ರ ಸರ್ಕಾರ FRP 9.5% ರಿಕವರಿಗೆ ex-gate ಗೆ 2100 ರೂಪಾಯಿ ಎಂದು ಅವರು ನಿಗದಿ ಪಡಿಸಿದ್ದಾರೆ. FRP ಯಾವ ರೀತಿಯಾಗಿ ನಿಗದಿ ಮಾಡಲಾಗಿದೆ ಎಂದು ಮಾನ್ಯ ಲಕ್ಷ್ಮಣ ಸವದಿಯವರಿಗೆ ಗೊತ್ತಿರಬೇಕು.

(ಈ ಸಂದರ್ಭದಲ್ಲಿ ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿಯವರು
ತಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿದರು)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ನೀವು ಹೇಳುತ್ತಿರುವ FRP ಪ್ರಕಾರ ಹೋಗುವುದಾದರೆ, ರೈತರಿಗೆ ಕೊಟ್ಟಿರುವ ಹಣವನ್ನು ಇವರು ವಾಪಸ್ಸು ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ, ex-gate and ex-field ಪ್ರಕಾರ ಕಳೆದ ಸಾರಿ ಕೊಟ್ಟಿರುವ ರೇಟ್ ಆಗಿದೆ. ಕಳೆದ ಸಾರಿ ಕೆಲವು ಕಾರ್ಖಾನೆಗಳು 2600 ರೂಪಾಯಿ ಕೊಟ್ಟಿದ್ದಾರೆ. ಹಾಗಾದರೆ, ಈಗಾಗಲೇ ರೈತರಿಗೆ ಕೊಟ್ಟಿರುವ ಹಣವನ್ನು ವಾಪಸ್ಸು ಕೊಡಿಸುತ್ತೀರಾ?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ನಿಮ್ಮ ಎರಡು ಕಾರ್ಖಾನೆಗಳಲ್ಲಿ ex-field ಪ್ರಕಾರ ಕೊಟ್ಟಿದ್ದರೆ ಆಗ ನಾವು ನಿಮ್ಮನ್ನು ಒಪ್ಪುತ್ತಿದ್ದೆವು FRP ಹಣವನ್ನು ಕೊಡಿ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಉಮೇಶ್ ವಿ. ಕತ್ತಿಯವರು ಸದನದ ಬಾವಿಯಲ್ಲಿ
ನಿಂತು ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:- ಮಾನ್ಯ ಉಪಾಧ್ಯಕ್ಷರೆ, ಇವರು ರೈತರ ಪರವಾಗಿ ಮಾತನಾಡುತ್ತಿದ್ದಾರೆಯೋ ಅಥವಾ ಕಾರ್ಖಾನೆಗಳ ಪರವಾಗಿ ಮಾತನಾಡುತ್ತಿದ್ದಾರೆಯೋ ಎಂಬುದು ಇಲ್ಲಿಯೇ ಗೊತ್ತಾಗುತ್ತದೆ. ಈ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಬೇಕು.

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ : ಇವರು ರೈತರ ಪರವಾಗಿ ಮಾತನಾಡುತ್ತಿರುವರೋ ಅಥವಾ ಯಾರ ಪರವಾಗಿ ಮಾತನಾಡುತ್ತಿದ್ದಾರೆ ಕೇಳಿ. ಮೊದಲು ಈ ಸದನದಿಂದ ರೈತರಿಗೆ ಘೋಷಣೆ ಮಾಡಿರುವ ಹಣವನ್ನು ಕೊಡುವಿರೋ ಇಲ್ಲವೋ ಎಂಬುದನ್ನು clear ಮಾಡಿ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ಬಿಜೆಪಿಯಲ್ಲಾದರೂ ಇರಲಿ, ಕಾಂಗ್ರೆಸ್‌ನಲ್ಲಾದರೂ ಇರಲಿ, ಎಲ್ಲಾದರೂ ಇರಲಿ, ನೀವೇ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದು ಬಿಟ್ಟು ನಾಟಕ ಮಾಡುತ್ತಿರುವಿರಲ್ಲಾ ರೈತರಿಗೆ ಸುಳ್ಳು ಏಕೆ ಹೇಳುವಿರಿ? ಮಾಲೀಕರೆಲ್ಲಾ ಇಲ್ಲೇ ಇದ್ದಾರೆ.

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ : ಕಾರ್ಖಾನೆಯವರಿಂದ ಕೊಡಿಸಬೇಕಾಗಿರುವ 500-00 ರೂಪಾಯಿಗಳನ್ನು ನೀವು ಕೊಡಿ. Court vacate ಮಾಡಿದ ಮೇಲೆ ಮುಟ್ಟುಗೋಲು ಹಾಕಿ ಕಾರ್ಖಾನೆಗಳ ಮೇಲೆ ಕ್ರಮ ತೆಗೆದುಕೊಳ್ಳಬಹುದು. ನಮಗೇನೂ ತೊಂದರೆ ಇಲ್ಲ. ಜವಾಬ್ದಾರಿಯತವಾದ ಸರ್ಕಾರ, ಘೋಷಣೆ ಮಾಡಿರುವುದನ್ನು ಬಿಡುಗಡೆ ಮಾಡಿ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ರೈತರಿಗೆ ನೀವು ಮೋಸ ಮಾಡುತ್ತಿರುವಿರಿ.

ಶ್ರೀ ಉಮೇಶ್ ವಿ. ಕತ್ತಿ :- ನೀವು ಘೋಷಣೆ ಮಾಡಿರುವ 150-00 ರೂಪಾಯಿಗಳನ್ನು ಕೊಟ್ಟಿಲ್ಲ. ಕಾರ್ಖಾನೆಯವರಿಂದ ಕೊಡಿಸಬೇಕಾಗಿರುವ 500.00 ರೂಪಾಯಿಗಳನ್ನೂ ಕೊಡಿಸಿಲ್ಲ. ಅದನ್ನು ನೀವು ಕೊಡಿ. ಕೋರ್ಟ್‌ನಲ್ಲಿ ಕೇಸು vacate ಆದಮೇಲೆ ಮುಟ್ಟುಗೋಲು ಹಾಕಿ ಕಾರ್ಖಾನೆಗಳನ್ನು ನಿಮ್ಮ ವಶಕ್ಕೆ ತೆಗದುಕೊಳ್ಳಿ ಅದಕ್ಕೆ ಯಾರು ವಿರೋಧವು ಇಲ್ಲ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ : ನಮಗೆ ಈಗ ಮೂರು ವಿಷಯಗಳಿಗೆ ಸ್ಪಷ್ಟೀಕರಣ ಬಹಳ ಸ್ಪಷ್ಟವಾಗಿ ಕೊಡಬೇಕು. ಒಂದು 150-00 ರೂಪಾಯಿಗಳನ್ನು ಕೊಟ್ಟಿಲ್ಲವೆಂದು ಉಮೇಶ್ ಕತ್ತಿಯವರು ಹೇಳುತ್ತಾರೆ. ನೀವು 150-00 ರೂಪಾಯಿಗಳನ್ನು ಹೇಳುತ್ತಿರುವಿರಿ, ಎಲ್ಲರಿಗೂ ಪ್ರತಿ ಟನ್‌ಗೆ 150-00 ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಿದ್ದೀರಿ, ಅದಕ್ಕೆ 500 ಚಿಲ್ಲರೆ ಕೋಟಿ ರೂಪಾಯಿಗಳಲ್ಲಿ 389 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ನಿನ್ನೆ ಮೊನ್ನೆ 180 ಚಿಲ್ಲರೆ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದೀರಿ. Finance Department ಗೆ ಹೋಗಿದೆ. ಎಂದು ನೀವು ಹೇಳುವುದಾದರೆ ಸರ್ಕಾರ ಇನ್ನೂ ಅದನ್ನು ಕೊಟ್ಟಿಲ್ಲವೆಂದು ಆಯಿತು.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:- 189 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಿಕ್ಕೆ ಹಣಕಾಸು ಇಲಾಖೆ ಒಪ್ಪಿಗೆ ಕೊಟ್ಟಿದೆ. ಅದು ರೈತರಿಗೆ ತಲುಪುತ್ತದೆ. ಎಂದು ಹೇಳಿರುವುದು ನಿಜ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಈಗ ಹಣಕಾಸು ಇಲಾಖೆಯಿಂದ ಯಾವಾಗ ಹಣ ಬಿಡುಡೆಯಾಗಿದೆ ಎಂದು ದಿನಾಂಕವನ್ನು ತೋರಿಸಿ. ಆ ಅಧಿಕಾರಿಗಳನ್ನು ಕರೆಸಿ.

ಶ್ರೀ ವೈ.ಎಸ್.ವಿ. ದತ್ತಾ : ಹಣಕಾಸು ಇಲಾಖೆಗೆ ಕಳುಹಿಸಿದ್ದೇವೆಂದರೆ ಗ್ಯಾರಂಟಿ ಅದು 6 ತಿಂಗಳಾದರೂ ಬರುವುದಿಲ್ಲ. ವರ್ಷಾನುಗಟ್ಟಲೆ ಆಗುತ್ತದೆ. ಬೇಗ ಬರುವುದಿಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಸರ್ಕಾರದಿಂದ ಏನು 150–00 ರೂಪಾಯಿಗಳನ್ನು ಕೊಡಬೇಕು, ಅದು ಯಾವ ಕಾರಣಕ್ಕೂ ಉಳಿಯುವ ಪ್ರಶ್ನೆಯೇ ಇಲ್ಲ. ಎಲ್ಲಾ ರೈತರಿಗೂ ಆ ಹಣವನ್ನು ಪಾವತಿ ಮಾಡುವ ಬದ್ಧತೆ ಸರ್ಕಾರಕ್ಕೆ ಇದೆ. ಅದನ್ನೆಲ್ಲಾ ಒಂದು ವಾರದಲ್ಲಿ ಪಾವತಿ ಮಾಡಿಸುತ್ತೇವೆ. ಅದಕ್ಕೆ order ಇದೆ.

ಶ್ರೀ ಜಗದೀಶ್ ಶೆಟ್ಟರ್ : ನಿಮ್ಮ ಬೊಕ್ಕಸ ಖಾಲಿ ಇದೆ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ : ಮಾನ್ಯ ಮುಖ್ಯಮಂತ್ರಿಗಳು ಹೇಳಲಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಹಣ ಎಲ್ಲಿಂದ ತರುತ್ತೀರಿ? ಹಣ ಎಲ್ಲಿ ಬಿಡುಗಡೆ ಆಗಿದೆ ತೋರಿಸಿ? ಡಿಸಿ ಕಛೇರಿಗೆ ಹೋಗಿದೆ. ರೈತರಿಗೆ ಪೇಮೆಂಟ್ ಆಗುತ್ತಿದೆ, ಹಣ ಬಿಡುಗಡೆ ಆಗಿದೆ, ಹಣಕಾಸು ಇಲಾಖೆ ಎಲ್ಲಾ ಹಣವನ್ನು ಬಿಡುಡಗೆ ಮಾಡಿದ್ದಾರೆ. ಎಂದು ಹೇಳುವುದರಲ್ಲೇ ಆಯಿತು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಹಣಕಾಸು ಇಲಾಖೆಗೆ ಹಣ ಬಿಡುಗಡೆಗಾಗಿ ಪ್ರಸ್ತಾವನೆ ಹೋಗಿದೆ. ಒಂದು ವಾರದೊಳಗೆ 189.00 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿಸಿ ಈ ಕಬ್ಬಿಗೆ ಸರ್ಕಾರದಿಂದ ಏನು ಹಣ ಪಾವತಿ ಮಾಡಬೇಕು ಆ ಹಣವನ್ನು ಬಿಡುಗಡೆ ಮಾಡಿಸುತ್ತೇವೆ.

(ಗೊಂದಲ)

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರು ಸದನದ ಬಾವಿಯಲ್ಲಿ ನಿಂತು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)

ಉಪಾಧ್ಯಕ್ಷರು : ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 5.00 ಗಂಟೆ 54 ನಿಮಿಷಕ್ಕೆ ಮುಕ್ತಾಯಗೊಂಡು ದಿನಾಂಕ 24–06–2014 ರಂದು ಮಂಗಳವಾರ ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು.)

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಸದನದಲ್ಲಿ ಮಂಡಿಸಲಾದ ಉತ್ತರಗಳು

(ಅನುಬಂಧ–1)

ಕಂದಾಯ ಇಲಾಖೆಗೆ ಒದಗಿಸಿದ ಅನುದಾನ

01 (51) ಶ್ರೀ ಅಪ್ಪಾಜಿ @ ಚನ್ನಬವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ಕಂದಾಯ ಇಲಾಖೆಗೆ ಒದಗಿಸಿದ ಅನುದಾನವೆಷ್ಟು (ವರ್ಷಾವಾರು ವಿವರವನ್ನು ನೀಡುವುದು)

(ಆ) ಕಳೆದ ವರ್ಷದ ವಿವಿಧ ಯೋಜನೆಗೆ ಮಾಡಲಾಗಿರುವ ಅನುದಾನದ ವೆಚ್ಚವೆಷ್ಟು; (ವಿವರ ನೀಡುವುದು)

(ಇ) ಹಾಗಿದ್ದಲ್ಲಿ, ಒದಗಿಸಿದ ಅನುದಾನದಲ್ಲಿ ಯೋಜನೆಗಳು ಪೂರ್ಣವಾಗದೇ ಇರಲು ಕಾರಣಗಳೇನು;

(ಅ) ಈ ಬಗ್ಗೆ ಸರ್ಕಾರದ ಮಾನದಂಡವೇನು? (ವಿವರ ನೀಡುವುದು)

ಶ್ರೀ ವಿ. ಶ್ರೀನವಾಸ್ ಪ್ರಸಾದ್ (ಮಾನ್ಯ ಕಂದಾಯ ಸಚಿವರು) :–

ಕಳೆದ 3 ವರ್ಷಗಳಲ್ಲಿ ಒದಗಿಸಿದ ಅನುದಾನದ ವಿವರ

ರೂ. ಲಕ್ಷಗಳಲ್ಲಿ

ಸಾಲು	ಯೋಜನೆ	ಯೋಜನೆತರ
2011–12	107415.87	232972.01
2012–13	89997.00	325170.63
2013–14	116915.17	309499.41
ಒಟ್ಟು	314328.04	867642.05

(ಆ) ಇಲಾಖಾವಾರು ಮಾಹಿತಿ ಅನುಬಂಧ–1 ರಲ್ಲಿ ಲಗತ್ತಿಸಿದೆ.

ಇ) ಆರ್ಥಿಕ ಇಲಾಖೆಯಿಂದ ಒದಗಿಸಲಾದಷ್ಟು ಅನುದಾನವನ್ನು ವಿನಿಯೋಗಿಸಿ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ.

(ಈ) ಮಂಜೂರಾದ ಕ್ರಿಯಾ ಯೋಜನೆಗಳಂತೆ ಅನುದಾನವನ್ನು ವಿನಿಯೋಗಿಸಲಾಗುತ್ತದೆ.